ಸಂಪುಟ : 13 Volume | ಸಂಚಿಕೆ : 319 Issue | ಪುಟಗಳು : 08 Pages | ಸೋಮವಾರ ೦೯ ಫೆಬ್ರವರಿ ೨೦೨೬ | ₹6 | PRGINO. 120927(RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಓದು, ಓದು, ಓದು ಯಾಕೆಂದರೆ ಶತ್ರುಗಳು ನಿನ್ನ ಜ್ಞಾನಕ್ಕೆ ಮಾತ್ರ ಹೆದರುತ್ತಾರೆ.
ಡಾ. ಬಿ.ಆರ್. ಅಂಬೇಡ್ಕರ್.

2 ಕ್ಯಾನ್ಸರ್ ನಿರ್ಮೂಲನ ದಿನಾಚರಣೆ
3 ಮಕ್ಕಳೊಂದಿಗೆ ಜಿ.ಪಂ. ಸಿ.ಇ.ಓ. ಸಂವಾದ
4 ಖಾದಿ ಉಡುಪು ಖರೀದಿಗೆ ಉತ್ಸಾಹ
8 ಅರೋಗ್ಯ ಕ್ಷೇತ್ರದ ಅಭಿವೃದ್ಧಿಯೂ ಅಗತ್ಯ



ಹುಬ್ಬಳ್ಳಿಯ ಶಿರಗುಪ್ಪಿ ಹೆಲಿಪ್ಯಾಡ್ ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಚಿವರಾದ ಸಂತೋಷ್ ಲಾಡ್ ಅವರು ಸ್ವಾಗತಿಸಿದರು. ವಿಧಾನ ಪರಿಷತ್ ಮುಖ್ಯ ಸಚೇತಕರಾದ ಸಲೀಂ ಅಹಮದ್, ಶಾಸಕ ಕೋನರೆಡ್ಡಿ ಸೇರಿ ಹಲವು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹೆಲಿಪ್ಯಾಡ್ ನಲ್ಲೇ ಮುಖ್ಯಮಂತ್ರಿಗಳು ರೈತ ಪ್ರತಿನಿಧಿಗಳು ಸೇರಿದಂತೆ ಹಲವರ ಮನವಿಗಳನ್ನು ಸ್ವೀಕರಿಸಿ ಸಾರ್ವಜನಿಕರ ಅಹವಾಲು ಆಲಿಸಿದರು.



ಹುಮನಾಬಾದ್. ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯ ಸಂಪಾದಕರು ಅದ ರಮೇಶ ರೆಡ್ಡಿ ರವರನ್ನು ಜಿಲ್ಲಾಡಳಿತ ವತಿಯಿಂದ ಗಣರಾಜ್ಯೋತ್ಸವ ದಿನದಂದು ಉತ್ತಮ ಮುದ್ರಣ ಕ್ಷೇತ್ರದಲ್ಲಿ ಆಯ್ಕೆ ಆಗಿದ್ದಕ್ಕೆ ಭಾನುವಾರ ಮಾಣಿಕನಗರದಲ್ಲಿ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಬೆಂಗಳೂರು. ತಾಲೂಕು ಘಟಕ ಹುಮನಾಬಾದ್ ವತಿಯಿಂದ ಸನ್ಮಾನಿಸಲಾಯಿತು.



ಕುಕುನೂರು ಪಟ್ಟಣದಲ್ಲಿ ಇಂದು ಸಮ್ಮೇಳನ ಸಮಿತಿ ಕುಕನೂರು ಹೋಬಳಿ ವತಿಯಿಂದ ಭಾನುವಾರ ಇಂದು ಸಮಾಜೋತ್ಸವ ಪ್ರಯುಕ್ತ ಶೋಭಾ ಯಾತ್ರೆ ಆಯೋಜಿಸಲಾಯಿತು..

## ಕುರ್ಚಿ ಬಗ್ಗೆ ಹೇಳೋಕೆ ಜ್ಯೋತಿಷಿ ಅಲ್ಲ

ಮಲ್ಲಮ್ಮ ನುಡಿವಾರ್ತೆ, ಕಲಬುರಗಿ

ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಅಂತ ಸಿಎಂ,ಡಿಸಿಎಂ ಅವರೇ ಹೇಳಿದ್ದಾರೆ. ಯಾರ್ಯಾರಿಗೆ ಏನೇನು ಯೋಗ ಇದೆಯೋ ಯಾರಿಗೆ ಗೊತ್ತು? ಅವರ(ಡಿಸಿಎಂ) ಯೋಗದ ಬಗ್ಗೆ ಮಾತನಾಡೋಕೆ ನಾನೇನು ಜ್ಯೋತಿಷಿ ಅಲ್ಲ' ಎಂದು ಸಚಿವ ದಿನೇಶ ಗುಂಡೂರಾವ್ ಹೇಳಿದ್ದಾರೆ.



ನಗರದ ಐವಾನ್ ಎ ಶಾಹಿ ಅತಿಥಿಗೃಹದಲ್ಲಿ ಮಾಧ್ಯಮದೊಂದಿಗೆ ಮಾತನಾಡಿ, ಮೆಟ್ರೊ ಪ್ರಯಾಣ ದರ ಪರಿಷ್ಕರಣೆ ಮಾಡೋದು ಕೇಂದ್ರ ಸರ್ಕಾರ. ನಾವೇನೂ ಅವರ ಮೇಲೆ ದರ ಹೇರುತ್ತಿಲ್ಲ. ಬಿಜೆಪಿ ಸಂಸದರೇ ಕೇಂದ್ರ ಸರ್ಕಾರದ ಬಳಿ ಪ್ರಯತ್ನ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಕೂಡಾ ಅಧಿಕೃತವಾಗಿ ಪತ್ರ ಬರೆದಿದ್ದಾರೆ. ದರ ಪರಿಷ್ಕರಣ ಕಮಿಟಿ ಮಾಡಿ ಎಂದಿದ್ದಾರೆ ಎಂದಿದ್ದಾರೆ.

ಜಿಬಿಎ ಚುನಾವಣೆಯಲ್ಲಿ ಬ್ಯಾಲೆಟ್ ಪೇಪರ್ ಬಳಕೆಗೆ ಬಿಜೆಪಿ ವಿರೋಧ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವರು, ದೊಡ್ಡ ದೊಡ್ಡ ರಾಷ್ಟಗಳೇ ಇವಿಎಂ ಬಳಸುತ್ತಿಲ್ಲ. ಪಾರದರ್ಶಕವಾಗಿ ಚುನಾವಣೆ ನಡೆಸುವ ಉದ್ದೇಶದಿಂದ ಬ್ಯಾಲೆಟ್ ಬಳಕೆಗೆ

ನಿರ್ಧಾರ ಮಾಡಿದ್ದೇವೆ ಎಂದಿರುವ ಅವರು, ಶಾಸಕ ಯತೀಂದ್ರ ಅವರು ಏನು ಹೇಳಿದ್ದಾರೆ ಗೊತ್ತಿಲ್ಲ. ಆದರೆ ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ ಎಂದು ನುಡಿದಿದ್ದಾರೆ.

## ಅಚ್ಛೇ ದಿನ್ ಬಂದಿಲ್ಲ..!

• ಮಲ್ಲಮ್ಮ ನುಡಿವಾರ್ತೆ, ನವದೆಹಲಿ:



ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಏಕರೂಪ ನಾಗರಿಕ ಸಂಹಿತೆಯನ್ನು (ಗಅಅ) ರೂಪಿಸಬೇಕು ಮತ್ತು ಅದು ವಿಭಜನೆಗೆ ಕಾರಣವಾಗಬಾರದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಅಚ್ಛೇ ದಿನ್' (ಒಳ್ಳೆಯ ದಿನಗಳು) ಬಂದಿವೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಭಾಗವತ್, "ಬಿಜೆಪಿಯಿಂದ ನಮಗೆ ಅಚ್ಛೇ ದಿನ್ ಬಂದಿಲ್ಲ. ಅದು ಬೇರೆ ದಾರಿ, ನಾವು ರಾಮಮಂದಿರ ನಿರ್ಮಾಣಕ್ಕೆ ಬದ್ಧರಾಗಿದ್ದೇವು. ನಮ್ಮನ್ನು ಬೆಂಬಲಿಸಿದವರಿಗೆ ಲಾಭವಾಗಿದೆ ಎಂದಿದ್ದಾರೆ.

ಸ್ವಯಂಸೇವಕರ ಕಠಿಣ ಪರಿಶ್ರಮ ಮತ್ತು ಸೈದ್ಧಾಂತಿಕ ನೀತಿಗಳ ಬದ್ಧತೆಯಿಂದ ಆರ್‌ಎಸ್‌ಎಸ್‌ಗೆ 'ಅಚ್ಛೇ ದಿನ್' ಬಂದಿದೆ. ಅಗತ್ಯವಿದ್ದಾಗ ಆರ್‌ಎಸ್‌ಎಸ್ ಸಲಹೆ ನೀಡುತ್ತದೆ. ಅವರು ನಮ್ಮೊಳಗಿಂದ ಬಂದವರಾಗಿರುವುದರಿಂದ ಅವರ ಪಾಪಗಳು ನಮ್ಮ ಮೇಲೆ ಹೊರಿಸಲ್ಪಡುತ್ತವೆ. ರಾಜಕೀಯ ಒತ್ತಡವು ಮತದಾರರಿಂದ ಬರುತ್ತದೆಯೇ ಹೊರತು ಆರ್‌ಎಸ್‌ಎಸ್ನಿಂದಲ್ಲ ಎಂದು ಹೇಳಿದ್ದಾರೆ.

# ತುಂಗಾ ಭದ್ರಾ ಹಿತಕ್ಕೆ ಬದ್ಧ

## ೩೦ ಟಿಎಂಸಿ ನೀರು ಪೋಲು ತಡೆ ನಾವು ಸಿದ್ಧ, ಆಂಧ್ರದ ಮುಖ್ಯಮಂತ್ರಿ ಸಹಕಾರ ಇಲ್ಲ: ಡಿಸಿಎಂ ಡಿಕೆಶಿ

ಮಲ್ಲಮ್ಮ ನುಡಿವಾರ್ತೆ, ರಾಯಚೂರು: ತುಂಗಭದ್ರಾ ಅಣೆಕಟ್ಟಿನ 30 ಟಿಎಂಸಿ ನೀರು ಸಮುದ್ರಕ್ಕೆ ಸೇರುತ್ತಿರುವುದನ್ನು ತಪ್ಪಿಸಲು ಈ ಭಾಗದ ನಾಯಕರು ನನ್ನ ಮೇಲೆ ಒತ್ತಡ ಹಾಕುತ್ತಿದ್ದಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಇಲ್ಲಿಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, ನಾನು ಇದಕ್ಕೆ ಬದ್ಧನಾಗಿದ್ದೇನೆ. ಆದರೆ ಆಂಧ್ರ ಸಿಎಂ ಈ ವಿಚಾರವಾಗಿ ಚರ್ಚೆ ಮಾಡಲು ನನಗೆ ಸಮಯಾವಕಾಶ ನೀಡುತ್ತಿಲ್ಲ. ಅವರು ನಮಗೆ ಅವಕಾಶ ಕೊಟ್ಟರೆ ಪೋಲಾಗುತ್ತಿರುವ 30 ಟಿಎಂಸಿ ತುಂಗಭದ್ರಾ ನೀರನ್ನು ನಿಲ್ಲಿಸಿ, ಈ ಭಾಗದ ರೈತರು, ಜನರಿಗೆ ನ್ಯಾಯ ಒದಗಿಸಲಾಗುವುದು ಎಂದಿದ್ದಾರೆ.

ನನ್ನ ಮೇಲೆ ಒತ್ತಡ: ರಾಯಚೂರು ಉತ್ಸವ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, ನಿಮ್ಮ ಜಿಲ್ಲೆಯ ಶಾಸಕರು ನನ್ನ ಮೇಲೆ ಒತ್ತಡ ತಂದು, ಕಾಲುವೆಗಳ ಕೊನೆ ಭಾಗದವರೆಗೂ ನೀರು ಹರಿಯುವಂತೆ ಮಾಡಲು ಕಾನೂನು ತರುವಂತೆ ಮಾಡಿದರು. ಕಾಲುವೆಗಳ ಮೇಲ್ಭಾಗದಲ್ಲಿ ನೀರೆತ್ತುವ ಮೂಲಕ ಕೊನೆ ಭಾಗದವರೆಗೆ ನೀರು ತಲುಪುತ್ತಿರಲಿಲ್ಲ. ಹೀಗಾಗಿ ನಾವು ಹೊಸ ಕಾನೂನು ತಂದಿದ್ದೇವೆ ಎಂದು ವಿವರಿಸಿದ್ದಾರೆ.



### ಗೇಟ್ ಬದಲಾಯಿಸಿಲು ಸಿದ್ಧ

೩೦ ಟಿಎಂಸಿ ತುಂಗಭದ್ರಾ ನೀರು ಪೋಲಾಗುವುದನ್ನು ತಡೆದು ರೈತರಿಗೆ ನ್ಯಾಯ ಒದಗಿಸಲಾಗುವುದು. ಕಳೆದ ಬಾರಿ ನೀರಾವರಿ ಸಚಿವನಾಗಿದ್ದಾಗ ಇಲ್ಲಿಗೆ ಬಂದಿದ್ದೆ. ಬಂಗಾರಪ್ಪನವರ ಕೆರೆಗೆ ೩೦೦ ಕೋಟಿ ನೀಡಿದ್ದ ಆ ಯೋಜನೆ ಕಾರ್ಯರೂಪಕ್ಕೆ ಬರುತ್ತಿದೆ. ಟಿಬಿ ಅಣೆಕಟ್ಟಿನ ಎಲ್ಲಾ ಗೇಟ್ ಬದಲಾಯಿಸಲು ನಮ್ಮ ಸರ್ಕಾರ ಬದ್ಧವಾಗಿದ್ದು, ನಾವು ಇನ್ನು ಮಾಡಿಯೇ ತೀರುತ್ತೇವೆ ಎಂದಿದ್ದಾರೆ.

### ಖರ್ಗೆ ಅವರ ಹೆಸರು ಅಮರ

**ನಮ್ಮ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೋರಾಟ ಮಾಡಿ ನಿಮ್ಮೆಲ್ಲರ ಅಭಿವೃದ್ಧಿಗೆ ೩೭೧ಜೆ ಜಾರಿಗೆ ತಂದು ನಿಮ್ಮ ಬದುಕಿನಲ್ಲಿ ದೊಡ್ಡ ಬದಲಾವಣೆ ತಂದಿದ್ದಾರೆ. ಹೀಗಾಗಿ ಗಾಂಧಿ ಹಾಗೂ ಅಂಬೇಡ್ಕರ್ ಅವರನ್ನು ಸ್ಮರಿಸುವಂತೆ ಈ ಭಾಗದ ಜನ ಖರ್ಗೆ ಅವರನ್ನು ಸ್ಮರಿಸಬೇಕು. ಆ ಮೂಲಕ ಖರ್ಗೆ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಬೇಕು ಎಂದು ಮನವಿ ಮಾಡಿದ್ದಾರೆ.**

### ರಾಜ್ಯಕ್ಕೇ ಬೆಳಕು ಕೊಟ್ಟ ನಾಡು

ಶರಣರು, ದಾಸರು, ಸಂತರ ಪರಂಪರೆಯ ನೆಲೆಬೀಡು. ರೈತರನ್ನು ಕಾಪಾಡುವ ಕೃಷ್ಣ, ತುಂಗಭದ್ರೆಯ ಬೀಡು. ಎಡೆದೊರೆ ಖ್ಯಾತಿಯ ರಾಯಚೂರು ಜಿಲ್ಲೆ ಇಡೀ ರಾಜ್ಯಕ್ಕೆ ಬೆಳಕು ಕೊಟ್ಟ ಪವಿತ್ರವಾದ ನಾಡು. ನಮ್ಮೆಲ್ಲರಿಗೂ ಉತ್ತಮವಾದ ಸೋನಾ ಮಸೂರಿ ಅಕ್ಕಿ, ಹತ್ತಿ, ಚಿನ್ನ ನೀಡುತ್ತಿರುವ ಪವಿತ್ರವಾದ ನೆಲಕ್ಕೆ ಬಂದು, ರಾಯಚೂರು ಉತ್ಸವದಲ್ಲಿ ಭಾಗಿಯಾಗಿರುವುದು ನನ್ನ ಭಾಗ್ಯ ಎಂದಿದ್ದಾರೆ ಡಿಕೆಶಿ.

"ಈ ನಾಡಿನ ನಾಡಿ, ಜನರ ಸೌಹಾರ್ದತೆಯನ್ನು ರಾಯಚೂರು ಜಿಲ್ಲೆಯಲ್ಲಿ ಕಾಣುತ್ತಿದ್ದೇವೆ. ಕಳೆದ ಮೂರು ದಿನಗಳಲ್ಲಿ ಲಕ್ಷಾಂತರ ಜನ ಈ ಸಂಭ್ರಮದ ಉತ್ಸವದಲ್ಲಿ ಪಾಲ್ಗೊಂಡಿದ್ದೀರಿ ಎಂದು ನಮ್ಮ ನಾಯಕರು ಹೇಳಿದ್ದು ಕೇಳಿ ಬಹಳ ಸಂತೋಷವಾಯಿತು. ಜನಪದವೇ ನಮ್ಮೆಲ್ಲರ ಗುರುತು. ಸಂಸ್ಕೃತಿ, ಕಲೆಯೇ ನಮ್ಮೆಲ್ಲರ ಶಕ್ತಿ

–ಡಿ.ಕೆ. ಶಿವಕುಮಾರ್ ಡಿಸಿಎಂ.

### ಏಮ್ಸ್ ಇಲ್ಲಿಗೆ ತರಲು ಕೇಂದ್ರಕ್ಕೆ ಪತ್ರ

ಇದು ಚಾಲುಕ್ಯರು, ಚೋಳರು, ವಿಜಯನಗರ ಅರಸರು ಆಳಿದ ಭೂಮಿ. ಈ ಜಿಲ್ಲೆಯ ಆಸ್ಪತ್ರೆ ವಿಚಾರದಲ್ಲಿ ಐತಿಹಾಸಿಕ ತೀರ್ಮಾನ ಮಾಡಿದ್ದು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಸಂಕಲ್ಪ ಮಾಡಿದ್ದಾರೆ. ಈ ಭಾಗದಲ್ಲಿ ಏಮ್ಸ್ ತರಬೇಕು ಎಂದು ಪಣ ತೊಟ್ಟಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಡಿಕೆಶಿ ವಿವರಿಸಿದ್ದಾರೆ.

## ಉಗ್ರವಾದ ನಿಗ್ರಹಕ್ಕೆ ಸಿದ್ಧ



• ಮಲ್ಲಮ್ಮ ನುಡಿ ವಾರ್ತೆ ಮಲೇಷಿಯಾ

ಉಗ್ರವಾದ ನಿಗ್ರಹ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ಪ್ರಧಾನಿ ಬರೇಂದ್ರ ಮೋದಿ ತಿಳಿಸಿದ್ದಾರೆ.

ಮಲೇಷ್ಯಾ ಪ್ರವಾಸ ವೇಳೆ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಪ್ರಧಾನಿ, ಉಗ್ರವಾದ ನಿಗ್ರಹಕ್ಕೆ ನಾವು ಸದಾ ಸಿದ್ಧ ಎಂದು ಸ್ಪಷ್ಟಪಡಿಸಿದ್ದಾರೆ. ಭಾರತದಲ್ಲಿರುವ ನಮ್ಮಲ್ಲಿ ಹಲವರು ಎಂಜಿಆರ್ ಅಭಿಮಾನಿಯಾಗಿರುವಂತೆ ಅನ್ವರ್ ಇಬ್ರಾಹಿಂ ಸಹ ಎಂಜಿಆರ್ ಅಭಿಮಾನಿಯಾಗಿದ್ದಾರೆ ಎಂದು ಮೋದಿ ಹೇಳಿದ್ದಾರೆ. ಉಭಯ ನಾಯಕರು ಇದ್ದ ಭೋಜನಕೂಟದಲ್ಲಿ ತಮಿಳು ನಟನ ನಾಲ್ಯೆ ನಮಥೆ ಚಿತ್ರದ ಹಾಡನ್ನು ಪ್ರಸ್ತುತಪಡಿಸಲಾಯಿತು

## ಸಿಸಿ ರಸ್ತೆ ನಿರ್ಮಾಣ 20 ಲಕ್ಷ ಅನುದಾನ



ಮಲ್ಲಮ್ಮ ನುಡಿವಾರ್ತೆ, **ಬೀದರ್ :** ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರ ಸುಮಾರು 20 ಲಕ್ಷ ಅನುದಾನದಡಿ ಭಾಲ್ಕಿ ತಾಲೂಕಿನ ಜಮಖಂಡಿ ಗ್ರಾಮದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಸಂಸದರಾದ ಸಾಗರ ಖಂಡ್ರೆ ಅವರು ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಈ ಕಾಮಗಾರಿಯಿಂದ ಗ್ರಾಮದಲ್ಲಿ ಮೂಲಸೌಕರ್ಯ ಸೌಲಭ್ಯಗಳು ಮತ್ತಷ್ಟು ಉತ್ತಮಗೊಳ್ಳಲಿದ್ದು, ಸಾರ್ವಜನಿಕರಿಗೆ ಸಂಚಾರ ಹಾಗೂ ಸ್ವಚ್ಛತೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಶಾಶ್ವತವಾಗಿ ಪರಿಹಾರವಾಗಲಿವೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು, ಸ್ಥಳೀಯ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಎರಡನೇ ಹಂತದ ಸ್ಕಾಲರ್‌ಶಿಪ್ ಪರೀಕ್ಷೆ ಮುಕ್ತಾಯ

• ಪರಶುರಾಮ್. ಕರಣಂ

ಇಲ್ಲಿಯ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟಡಿ ನಡೆಯುವ ಸಂಗಮೇಶ್ವರ ಕಾಲೇಜಿನಲ್ಲಿ ಭಾನುವಾರ ಎರಡನೇ ಹಂತದ ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ ಮುಕ್ತಾಯಗೊಂಡವು. ಕೊನೆಯ ಪರೀಕ್ಷೆಯಲ್ಲಿ ಜಿಲ್ಲೆಯ ವಿವಿಧೆಡೆ ಎಸ್ಸೆಸ್ಸೆಲ್ಸಿಯಲ್ಲಿ ವ್ಯಾಸಂಗ ಮಾಡುತ್ತಿರುವ 758 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಗ್ರಾಮೀಣ ಭಾಗದ ಬಡ ಮಕ್ಕಳಿಗೆ ಎರಡು ವರ್ಷ ಉಚಿತ ಪಿಯುಸಿ ಶಿಕ್ಷಣ ಕಲ್ಪಿಸುವ ಉದ್ದೇಶದಿಂದ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ ಯೋಜನೆ ಜಾರಿಗೆ ತಂದಿದೆ. ಕ್ರಮವಾಗಿ ಮೊದಲ 20 ರ್‍ಯಾಂಕ್ ಪಡೆಯವ ವಿದ್ಯಾರ್ಥಿಗಳು ಎರಡು ವರ್ಷ ಉಚಿತ ಪಿಯುಸಿ ಶಿಕ್ಷಣ ಮತ್ತು ಬಸ್ ಸೌಲಭ್ಯ ಪಡೆಯಲಿದ್ದಾರೆ.

### ಬೀದರ್‌ನಲ್ಲಿ 1415 ಮಕ್ಕಳು ಹಾಜರು

**ಬೀದರ್‌ನ ರಾಂಪೂರೆ ಕಾಲೋನಿಯಲ್ಲಿ ನೂತನವಾಗಿ ಆರಂಭಿಸಿರುವ ಚನ್ನಬಸವೇಶ್ವರ ಗುರುಕುಲ ಪಿಯುಸಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಸ್ಕಾಲರಶಿಪ್ ಪ್ರವೇಶ ಪರೀಕ್ಷೆಯಲ್ಲಿ ಭಾನುವಾರ 1415 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಬೀದರ್ ನಗರ ಅಷ್ಟೇ ಜಿಲ್ಲೆಯ ವಿವಿಧ ತಾಲೂಕು ಸೇರಿ ನೆರೆಯ ಕಲಬುರಗಿ, ಯಾದಗಿರಿ ಮತ್ತು ಗದಗ ಜಿಲ್ಲೆಯ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ವಿಶೇಷವಾಗಿತ್ತು.**

### • ಶ್ರೀಗಳ ಭೇಟಿ ಪರೀಶಿಲನೆ

ಪರೀಕ್ಷೆ ಕೇಂದ್ರಕ್ಕೆ ಹಿರೇಮಠ ಸಂಸ್ಥಾನದ ಮಹಾಲಿಂಗ ಸ್ವಾಮೀಜಿ ಭೇಟಿ ನೀಡಿ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಈ ಸಂದರ್ಭದಲ್ಲಿ ಪ್ರಾಚಾರ್ಯ ಪ್ರವೀಣ ಹಿರೇಮಠ, ಬಾಬು ಬೆಲ್ದಾಳ, ಮಲ್ಲಿಕಾರ್ಜುನ ಪಾಟೀಲ್ ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಅಪಾಯದಿಂದ ಪಾರು

ಮಲ್ಲಮ್ಮ ನುಡಿವಾರ್ತೆ, ವಿಜಯಪುರ:

ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನಲ್ಲಿ ಖಾಸಗಿ ತರಬೇತಿ ವಿಮಾನವೊಂದು ಪತನಗೊಂಡಿದ್ದು, ಪೈಲಟ್ ಸೇರಿದಂತೆ ಇಬ್ಬರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ಮಂಗಳೂರು ಗ್ರಾಮದ ಬಳಿ ಈ ದುರ್ಘಟನೆ ನಡೆದಿದೆ. ಎರಡು ಆಸನಗಳ ತರಬೇತಿ ವಿಮಾನವೊಂದು ತೆರೆದ ಗದ್ದೆಯಲ್ಲಿ ಪತನಗೊಂಡಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಘಾತದ ಪರಿಣಾಮ ವಿಮಾನ ಮೂರು ಭಾಗಗಳಾಗಿ ಒಡೆದಿದೆ. ಪೈಲಟ್ ಸೇರಿದಂತೆ ಇಬ್ಬರು ಪ್ರಯಾಣಿಕರು ವಿಮಾನ ಪತನಗೊಳ್ಳುವುದಕ್ಕೂ ಮುನ್ನ ಹೊರಗೆ ಹಾರಿದ್ದಾರೆ.

## ಚಿರತೆ ಕಂಡ ಸ್ಥಳಕ್ಕೆ ತಂಡ ಭೇಟಿ

• ಮಲ್ಲಮ್ಮ ನುಡಿವಾರ್ತೆ, ಗುರುಮಠಕಲ್:

ತಾಲೂಕಿನ ಕೇಶ್ವಾರ ಗ್ರಾಮ ವ್ಯಾಪ್ತಿಯ ಅರಣ್ಯ ಪ್ರದೇಶಕ್ಕೆ ಫೆ. 6ರ ಶುಕ್ರವಾರ ಸಾಯಂಕಾಲ, ಸಲ್ಮಾನ್ ಎಂಬುವವರ ಕುರಿ ಮೇಲೆ ಚಿರತೆ ದಾಳಿ ನಡೆಸಿ ಅವಾಂತರ ಸೃಷ್ಟಿಮಾಡಿತ್ತು ಈ ಕುರಿತು ನಮ್ಮ ಮಲ್ಲಮ್ಮ ನುಡಿ ಪತ್ರಿಕೆ ವರದಿ ಮಾಡುವುದರ ಮೂಲಕ ಅರಣ್ಯ ಇಲಾಖೆಯ ಗಮನ ಸೆಳೆಯಿತು. ವರದಿ ಬೆನ್ನಲ್ಲೇ ಶನಿವಾರ ಉಪವಲಯ ಅರಣ್ಯಾಧಿಕಾರಿ ಸಂಗಮೇಶ ಪಾಟೀಲ್ ಮತ್ತು ಗಸ್ತು ಪಾಲಕ ಸಂತೋಷ ಕುಮಾರ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಧಿಕಾರಿಗಳ ಪರಿಶೀಲನೆ ಸಂದರ್ಭದಲ್ಲಿ ದಾಳಿಗೊಳಗಾದ ಕುರಿಯ ರಕ್ತದ ಕಲೆಗಳು ಕಂಡು ಬಂದಿದ್ದು ಆದರೆ ಚಿರತೆಯ ಸ್ಪಷ್ಟ ಹೆಜ್ಜೆ ಗುರುತುಗಳು ಪತ್ತೆಯಾಗಿಲ್ಲ ಎಂದು ತಿಳಿಸಿದ್ದಾರೆ.



ಆದರೂ ಇದು ಚಿರತೆಗಳು ವಾಸಿಸುವ ಅರಣ್ಯ ಪ್ರದೇಶವೇ ಆಗಿರುವುದರಿಂದ, ಕಾಡು ಪ್ರಾಣಿಗಳ ಇರುವಿಕೆಯನ್ನು ತಳ್ಳಿಹಾಕುವಂತಿಲ್ಲ ಹಾಗಾಗಿ ಗ್ರಾಮಸ್ಥರು ಮುನ್ನೆಚ್ಚರಿಕೆ ವಹಿಸಿಕೊಳ್ಳುವಂತೆ ಜಾಗೃತಿ ಮೂಡಿಸಲಾಯಿತು.

**ಕಾಡು ಪ್ರಾಣಿ ಕುರಿತು ಜಾಗೃತಿ**

**ಅರಣ್ಯಾಧಿಕಾರಿ ಸಂಗಮೇಶ ಪಾಟೀಲ್ ಮಾತನಾಡಿ ಅರಣ್ಯ ಪ್ರದೇಶದೊಳಗೆ ಸಾರ್ವಜನಿಕರು ಒಬ್ಬಂಟಿಯಾಗಿ ಓಡಾಡಬಾರದು, ಕುರಿಗಳನ್ನು ಮೇಯಿಸಲು ಅರಣ್ಯದ ಆಳಕ್ಕೆ ಹೋಗದಂತೆ ಎಚ್ಚರಿಕೆ ವಹಿಸಬೇಕು. ಕಾಡು ಪ್ರಾಣಿಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಸದಾ ಜಾಗರೂಕರಾಗಿರಬೇಕೆಂದು ಸಾರ್ವಜನಿಕ ಜಾಗೃತಿ ಮೂಡಿಸಿದ್ದಾರೆ.**

## ಸದಾ ಸುಳ್ಳು ಹೇಳುವ ಸಿಎಂ

• ಮಲ್ಲಮ್ಮ ನುಡಿ ವಾರ್ತೆ, ಬೆಳಗಾವಿ:

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಾಗಿನಿಂದ ಕೇವಲ ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ, ಅವರು ಸುಳ್ಳಿನ ರಾಜ, ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ತೀವ್ರವಾಗಿ ವಾಗ್ದಾಳಿ ನಡೆಸಿದ್ದಾರೆ. ಬೆಳಗಾವಿಯಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯನವರು ತಮ್ಮ ಆಡಳಿತದಲ್ಲಿ ಆಗಿರುವ ಒಂದೇ ಒಂದು ಅಪಚಾರದ ಬಗ್ಗೆಯೂ ಮಾತನಾಡುತ್ತಿಲ್ಲ. ಕಾಂಗ್ರೆಸ್ ಪಕ್ಷವು ಮುಂದೆಂದೂ ಅಧಿಕಾರಕ್ಕೆ ಬರುವುದಿಲ್ಲ ಎಂಬಂತೆ ವರ್ತಿಸುತ್ತಿದೆ ಎಂದು ಕಿಡಿಕಾರಿದ್ದಾರೆ. ಬೆಂಗಳೂರು ಮೆಟ್ರೋ ವಿಚಾರವಾಗಿ ಮಾತನಾಡಿ, ಜೆ.ಎಚ್. ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಮೆಟ್ರೋ ಯೋಜನೆಗೆ ಅಡಿಪಾಯ ಹಾಕಲಾಗಿತ್ತು. ಇಂದು ಲಕ್ಷಾಂತರ ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ವಿವರಿಸಿದ್ದಾರೆ.

# 12 ವರ್ಷದ ಕೆಳಗಿನ ಮಕ್ಕಳಿಗೂ ಹೃದಯ ಸಂಬಂಧಿ ಚಿಕಿತ್ಸೆ ನೀಡುತ್ತಿರುವ ಗುದಗೆ ಆಸ್ಪತ್ರೆ: ಡಾ.ಗೋವಿಂದ




- ಮಲ್ಲಮ್ಮ ನುಡಿ ವಾರ್ತೆ ,ಬೀದರ್

ಫೇ 08: 12 ವರ್ಷದ ಕೆಳಗಿನ ಮಕ್ಕಳಿಗೂ ಹೃದಯ ಸಂಬಂಧಿ ಕಾಯಿಲೆ ಕಾಣಿಸಿಕೊಳ್ಳುವುದು ಸಾಮಾನ್ಯ.ಅದಕ್ಕೆ ನುರಿತ ಹಾಗೂ ಪರಿಣಾಮಕಾರಿ ಚಿಕಿತ್ಸೆ ನೀಡುತ್ತಿರುವ ಗುದಗೆ ಆಸ್ಪತ್ರೆಯ ಕಾರ್ಯ ಸ್ತುತ್ಯಾರ್ಹ ಎಂದು ಬೆಂಗಳೂರಿನ ಜಯದೇವ ಆಸ್ಪತ್ರೆಯ ಮಕ್ಕಳ ಹೃದಯರೋಗ ತಜ್ಞರಾದ ಡಾ. ಗೋವಿಂದ ಔರಾದ್ ಕರ್ ತಿಳಿಸಿದರು.

ಭಾನುವಾರ ನಗರದ ಗುದಗೆ ಸೂಪರ್ ಸ್ಪೆಶಾಲಿಟಿ ಹಾಗೂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ರೋಟರಿ ಕ್ಲಬ್ ಆಫ್ ಇನ್ನರ್ ವಿಲ್ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲೆಯ 12 ವರ್ಷದ ಕೆಳಗಿನ ಮಕ್ಕಳಿಗೆ ಹೃದಯ ಸಂಬಂಧಿ ಕಾಯಿಲೆ ತಪಾಸಣೆ ಹಾಗೂ ಉಚಿತ ಚಿಕಿತ್ಸಾ ಶಿಬಿರ ಉದ್ದೇಶಿಸಿ ಮಾತನಾಡಿರುವ ಅವರು, ಮಕ್ಕಳು ತಾಯಿಯ ಗರ್ಭದಲ್ಲಿದ್ದಾಗಲೇ ಅವರಿಗೆ ಹೃದಯ ಸಂಬಂಧಿ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಅದಕ್ಕೆ ಮಗು ಹುಟ್ಟಿದಾಗಲೆ ಚಿಕಿತ್ಸೆ ನೀಡಿದರೆ ಮಗು ಇಡೀ ಜೀವನ ಪರ್ಯಂತರ ಆರೋಗ್ಯವಾಗಿರುವುದು. ಆದರೆ ಬಾಲ್ಯದಲ್ಲಿ ಅದಕ್ಕೆ ಚಿಕಿತ್ಸೆ ನೀಡದಿದ್ದರೆ ಸಾವಿಗೆ ಕಾರಣವಾಗುವ ಸಂಭವವಿರುತ್ತದೆ. ದೊಡ್ಡವರಿಗೆ ಹೋಲಿಸಿದರೆ ಹೃದಯ ಸಂಬಂಧಿ ಕಾಯಿದೆಯಿಂದ ಮಕ್ಕಳ ಸಾವು ನೋವಿನ ಪ್ರಮಾಣ ಕಡಿಮೆ ಇರುತ್ತದೆ ಎಂಬುದು ಸಮಾಧಾನದ ಮಾತು ಎಂದರು.

ಆಸ್ಪತ್ರೆಯ ಹೃದಯರೋಗ ತಜ್ಞರಾದ ಡಾ.ನಿತೀನ ಗುದಗೆ ಅವರು ಮಾತನಾಡಿ, ಕಳೆದ ಎಲೆಂಟು ದಿನಗಳಿಂದ ಜಿಲ್ಲೆಯಾದ್ಯಂತ 12 ವರ್ಷದ ಕೆಳಗಿರುವ ಹೃದಯ ಸಂಬಂಧಿ ಕಾಯಿಲೆಯುಳ್ಳ ಮಕ್ಕಳನ್ನು ಪತ್ತೆ ಹಚ್ಚಿ ತಪಾಸಣೆ ಮಾಡಿ ಅಂತಹ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ. ಈ ಹಿಂದೆಯೂ ಸಹ ಬಹಳಷ್ಟು ಮಕ್ಕಳಿಗೆ ಆರೋಗ್ಯ ಉಚಿತ ತಪಾಸಣೆ ಮಾಡಿ ಚಿಕಿತ್ಸೆ ನೀಡಲಾಗಿದೆ ಎಂದವರು ಹೇಳಿದರು.

ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿವೃತ್ತ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ ಚಂದ್ರಕಾಂತ ಗುದಗೆ ಈ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳ ಮನಸ್ಸು ಹೂವಿನಂತಿರುತ್ತದೆ. ಅವರ ಆರೋಗ್ಯ ಕಾಪಾಡುವುದು ಪಾಲಕರಾದಿಯಾಗಿ ಜಿಲ್ಲೆಯ ಜವಾಬ್ದಾರ ವೈದ್ಯರ ಕರ್ತವ್ಯವು ಹೌದು. ಹಾಗಾಗಿ ಮಕ್ಕಳ ಆರೋಗ್ಯ ಬಗ್ಗೆ ಕಾಳಜಿ ವಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ನಮ್ಮ ಆಸ್ಪತ್ರೆಯೂ ಎಲ್ಲಾ ವಯಸ್ಸಿನ ರೋಗಿಗಳಿಗೆ ದಿನದ 24 ಗಂಟೆಗಳ ಕಾಲ ಚಿಕಿತ್ಸೆ ನೀಡಲು ಲಭ್ಯವಿದ್ದು ಸಾರ್ವಜನಿಕರು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಆಸ್ಪತ್ರೆಯ ಇನ್ನೋರ್ವ ಹಿರಿಯ ವೈದ್ಯರಾದ ಡಾ ಸಚಿನ್ ಗುದಗೆ ಮಾತನಾಡಿ, ಡಾ ಗೋವಿಂದ ಔರಾದ್ಕರ್ ಅವರು ನಮ್ಮ ಆಸ್ಪತ್ರೆಗೆ ಸೇವೆ ನೀಡಲು ಮುಂದಾಗಿದ್ದು ಬಹಳ ಸಂತೋಷ. ಅವರ ಸೇವೆ ನಾವಿನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಇಂದು 12 ವರ್ಷದ ಕೆಳಗಿನ ಮಕ್ಕಳಿಗೆ ನಮ್ಮ ಆಸ್ಪತ್ರೆಯಲ್ಲಿ ಹೃದಯ ಸಂಬಂಧಿ ತಪಾಸಣೆ ಹಾಗೂ ಚಿಕಿತ್ಸೆಗೆ ವಿಶೇಷ ಶಿಬಿರ ಹಮ್ಮಿಕೊಂಡಿದ್ದು ಇಂದು ಸಂಜೆವರೆಗೆ ಜಿಲ್ಲೆಯ ಸಾರ್ವಜನಿಕರು ಶಿಬಿರದ ಸದುಪಯೋಗಪಡೆದುಕೊಳ್ಳಬೇಕೆಂದರು.

ಜಿಲ್ಲೆಯ ಹಿರಿಯ ವೈದ್ಯರಾದ ಡಾ ವಿ ವಿ ನಾಗರಾಜ, ಡಾ. ವಿಜಯಕುಮಾರ ಕೋಟೆ ಹಾಗೂ ರೋಟ್ರಿ ಕ್ಲಬ್ ಆಫ್ ಇನ್ನರಗ ವಿಲ್ ನ ಹಾವಶೆಟ್ಟಿ ಪಾಟೀಲ, ಡಾ.ಮಹೇಶ ತೊಂಡಾರೆ ಸೇರಿದಂತೆ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿಗಳು, ಸಿಬ್ಬಂದಿ ಹಾಗೂ ರೋಟರಿ ಕ್ಲಬ್ ನ ಇತರೆ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು



### ಗ್ರಾಮೀಣ ಬಡವರಿಗೂ ಆರೋಗ್ಯ ಹಕ್ಕು ಕಡೆಯವರೆಗೆ ತಲುಪಬೇಕಾದ ಚಿಕಿತ್ಸೆ

ಭಾರತದ ಅಭಿವೃದ್ಧಿಯ ನಿಜವಾದ ಮುಖ ಗ್ರಾಮೀಣ ಪ್ರದೇಶದಲ್ಲಿದೆ ಎನ್ನುವುದು ಕೇವಲ ಘೋಷವಾಕ್ಯವಾಗದೆ, ಕಾರ್ಯರೂಪಕ್ಕೆ ಬರಬೇಕಾದ ಸತ್ಯ. ಆದರೆ ಇಂದು ಕೂಡ ಕಟ್ಟಕಡೆಯ ಹಳ್ಳಿಗಳಲ್ಲಿ ಬದುಕುತ್ತಿರುವ ಬಡವರು ಮೂಲಭೂತ ಆರೋಗ್ಯ ಸೇವೆಯಿಂದ ವಂಚಿತರಾಗಿದ್ದಾರೆ. ದೊಡ್ಡ ನಗರಗಳಲ್ಲಿ ಅತ್ಯಾಧುನಿಕ ಆಸ್ಪತ್ರೆಗಳು ಬೆಳೆಯುತ್ತಿರುವಾಗ, ಹಳ್ಳಿಗಳಲ್ಲಿ ಇನ್ನೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆ, ವೈದ್ಯರ ಅಭಾವ, ಔಷಧಿಗಳ ಲಭ್ಯತೆಯ ಸಮಸ್ಯೆ ಜನರನ್ನು ಕಾಡುತ್ತಿದೆ.

ಒಂದು ಸಾಮಾನ್ಯ ಜ್ವರಕ್ಕೂ ಗ್ರಾಮೀಣ ಬಡವರು ಹಲವು ಕಿಲೋಮೀಟರ್ ಪ್ರಯಾಣ ಮಾಡಿ ಆಸ್ಪತ್ರೆಗೆ ಹೋಗಬೇಕಾದ ಪರಿಸ್ಥಿತಿ ಇದೆ. ಸಾರಿಗೆ ಸೌಲಭ್ಯಗಳಿಲ್ಲದೆ ಸಮಯಕ್ಕೆ ಚಿಕಿತ್ಸೆ ಸಿಗದೇ ಅನೇಕ ಅಮೂಲ್ಯ ಜೀವಗಳು ಕಳೆದುಹೋಗುತ್ತಿರುವುದು ನೋವಿನ ಸಂಗತಿ. ಆರೋಗ್ಯ ಎಂಬುದು ಐಶಾರಾಮಿ ಸೇವೆಯಲ್ಲ, ಪ್ರತಿಯೊಬ್ಬ ನಾಗರಿಕನ ಹಕ್ಕು ಎಂಬುದನ್ನು ಸರ್ಕಾರಗಳು ಗಂಭೀರವಾಗಿ ಮನಗಾಣಬೇಕು.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವುದು ಇಂದಿನ ತುರ್ತು ಅಗತ್ಯ. ಪ್ರತಿಯೊಂದು ಹಳ್ಳಿಗೂ ಸಮೀಪದಲ್ಲೇ ವೈದ್ಯರು, ನರ್ಸ್‌ಗಳು, ಅಗತ್ಯ ಔಷಧಿಗಳೊಂದಿಗೆ ಕಾರ್ಯನಿರ್ವಹಿಸುವ ಆರೋಗ್ಯ ಕೇಂದ್ರಗಳಿರಬೇಕು. ಮೊಬೈಲ್ ಆರೋಗ್ಯ ಘಟಕಗಳ ಮೂಲಕ ದೂರದ ಗ್ರಾಮಗಳಿಗೆ ನಿಯಮಿತವಾಗಿ ವೈದ್ಯಕೀಯ ಸೇವೆ ಒದಗಿಸುವ ವ್ಯವಸ್ಥೆ ವಿಸ್ತಾರಗೊಳ್ಳಬೇಕು. ಜೊತೆಗೆ ಗರ್ಭಿಣಿಯರು, ಮಕ್ಕಳು, ವೃದ್ಧರು ಮತ್ತು ದೀರ್ಘಕಾಲೀನ ರೋಗಿಗಳಿಗೆ ವಿಶೇಷ ಗಮನ ನೀಡಬೇಕು.

ಆಯುಷ್ಮಾನ್ ಭಾರತ ಸೇರಿದಂತೆ ಸರ್ಕಾರದ ಆರೋಗ್ಯ ಯೋಜನೆಗಳು ಕಾಗದದಲ್ಲೇ ಉಳಿಯದೆ ನಿಜವಾದ ಫಲಾನುಭವಿಗಳಿಗೆ ತಲುಪುವಂತೆ ಪಾರದರ್ಶಕ ಅನುಷ್ಠಾನ ಅಗತ್ಯ. ಮಾಹಿತಿ ಕೊರತೆಯಿಂದ ಅನೇಕ ಬಡ ಕುಟುಂಬಗಳು ಯೋಜನೆಗಳ ಲಾಭ ಪಡೆಯಲಾಗದೇ ಉಳಿಯುತ್ತಿದ್ದಾರೆ. ಹೀಗಾಗಿ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಗ್ರಾಮೀಣ ಮಟ್ಟದಲ್ಲಿ ಬಲವಾಗಿ ನಡೆಸಬೇಕು.

ಗ್ರಾಮೀಣ ಪ್ರದೇಶದ ಆರೋಗ್ಯ ಸುಧಾರಣೆ ಎಂದರೆ ಕೇವಲ ಆಸ್ಪತ್ರೆ ಕಟ್ಟುವುದು ಮಾತ್ರವಲ್ಲ; ಸ್ವಚ್ಛತೆ, ಶುದ್ಧ ಕುಡಿಯುವ ನೀರು, ಪೌಷ್ಟಿಕ ಆಹಾರ, ಆರೋಗ್ಯ ಶಿಕ್ಷಣ ಇವೆಲ್ಲವೂ ಸೇರಿಕೊಂಡಾಗ ಮಾತ್ರ ಸಮಗ್ರ ಆರೋಗ್ಯ ಸಾಧ್ಯ. ಸ್ಥಳೀಯ ಆಡಳಿತ ಸಂಸ್ಥೆಗಳು, ಸ್ವಯಂಸೇವಾ ಸಂಘಟನೆಗಳು ಹಾಗೂ ಸಾರ್ವಜನಿಕರು ಒಟ್ಟಾಗಿ ಕೈಜೋಡಿಸಿದರೆ ಈ ಬದಲಾವಣೆ ಸಾಧ್ಯ.

ಕಟ್ಟಕಡೆಯ ಬಡವರಿಗೂ ಸಮಾನ ಆರೋಗ್ಯ ಅವಕಾಶ ಸಿಕ್ಕಾಗಲೇ ನಿಜವಾದ ಸಾಮಾಜಿಕ ನ್ಯಾಯ ಸಾಧ್ಯ. ಗ್ರಾಮೀಣ ಭಾರತದ ಆರೋಗ್ಯ ಬಲವಾಗದೆ ದೇಶದ ಪ್ರಗತಿ ಸಂಪೂರ್ಣವಾಗದು. ಆದ್ದರಿಂದ ಸರ್ಕಾರಗಳು ರಾಜಕೀಯ ಲಾಭಕ್ಕಿಂತ ಮಾನವೀಯತೆಯನ್ನು ಮುಂದಿಟ್ಟುಕೊಂಡು, "ಆರೋಗ್ಯ ಎಲ್ಲರಿಗೂ" ಎಂಬ ಕನಸನ್ನು ನಿಜವಾಗಿಸಬೇಕಾದ ಸಮಯ ಇದಾಗಿದೆ.

# ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರ ಪ್ರವಾಸ

- ಮಲ್ಲಮ್ಮ ನುಡಿ ವಾರ್ತೆ ಕಾರವಾರ:

ಕರ್ನಾಟಕ ರಾಜ್ಯ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾದ ಉಪಾಧ್ಯಕ್ಷ ಎಸ್.ಆರ್. ಪಾಟೀಲ ಅವರು ಫೆಬ್ರವರಿ ಮಾಹೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸಕೊಂಡಿದ್ದು, ಫೆ.10 ರಂದು ಬೆಳಗ್ಗೆ 11 ಗಂಟೆಗೆ ಹೊನ್ನಾವರದ ಗುಣವಂತೆ, ಕೆಳಗಿನೂರಿನ ಒಕ್ಕಲಿಗರ ಸಮುದಾಯ ಭವನದಲ್ಲಿ ನಡೆಯಲಿರುವ ಉತ್ತರ ಕನ್ನಡ ಜಿಲ್ಲಾ ಪಂಚ ಗ್ಯಾರೆಂಟಿ ಉತ್ಸವ/ ಕಾರ್ಯಗಾರದ ಸಿದ್ದತೆ ಪರಿಶೀಲನೆ ನಡೆಸಲಿದ್ದಾರೆ.

ಫೆ.11 ರಂದು ಬೆಳಗ್ಗೆ 11 ಗಂಟೆಗೆ ಹೊನ್ನಾವರದ ಗುಣವಂತೆ, ಕೆಳಗಿನೂರಿನ ಒಕ್ಕಲಿಗರ ಸಮುದಾಯ ಭವನದಲ್ಲಿ ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರ ಎಚ್. ಎಂ. ರೇವಣ್ಣನವರ ನೇತೃತ್ವದಲ್ಲಿ ನಡೆಯಲಿರುವ ಉತ್ತರ ಕನ್ನಡ ಜಿಲ್ಲಾ ಪಂಚ ಗ್ಯಾರಂಟಿ ಉತ್ಸವ/ಕಾರ್ಯಗಾರದಲ್ಲಿ ಪಾಲ್ಗೋಳ್ಳಲಿದ್ದಾರೆ ಎಂದು ಅವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವ ವ್ಯಸನಮುಕ್ತ ಭಾರತ ಅಭಿಯಾನ: ಪ್ರತಿಮಾ ಬಹೆನ್ ಜಿ

- ಮಲ್ಲಮ್ಮ ನುಡಿ ವಾರ್ತೆ ಬೀದರ್:




ಈ ತಿಂಗಳ 11, 12, ಹಾಗೂ 13ರಂದು ಪ್ರಜಾಪಿತಾಬ್ರಹ್ಮಾಕುಮಾರಿಸ್ ಈಶ್ವರಿಯ ವಿಶ್ವ ವಿದ್ಯಾಲಯ ರಾಜಯೋಗಕೇಂದ್ರ ಪಾವನಧಾಮ ವತಿಯಿಂದ 90ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವ ಹಾಗೂ ವ್ಯಸನಮುಕ್ತ ಭಾರತ ಅಭಿಯಾನ ಕಾರ್ಯಕ್ರಮ ಜರುಗಲಿದೆ ಎಂದು ಕೇಂದ್ರದ ಸಂಚಾಲಕರಾದ ಬಿ.ಕೆ ಪ್ರತಿಮಾ ಬೆಹೆನ್ ಜಿ ತಿಳಿಸಿದರು.

ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಫೆ.11ರಂದು ಮಧ್ಯಾಹ್ನ 2 ಗಂಟೆಗೆ ನಗರದ ಜನವಾಡ ರಸ್ತೆಯ ಜೆ.ಪಿ ನಗರದಲ್ಲಿನ ಬ್ರಹ್ಮಕುಮಾರಿಸ್ ಕೇಂದ್ರ ಪಾವನಧಾಮ ವತಿಯಿಂದ 12 ಕಾರುಗಳ ಮೇಲೆ 12 ಜ್ಯೋತಿರ್ಲಿಂಗಗಳ ಶೋಭಾಯಾತ್ರೆಯು ಇಡೀ ನಗರಾದ್ಯಂತ ಸಂಚರಿಸಿ ನಂತರ ನೆಹರು ಕ್ರೀಡಾಂಗಣದ ಎದುರಿರುವ ಸಾಯಿ ಸ್ಕೂಲ್ ಆವರಣಕ್ಕೆ ತಲುಪಿ ಸಾಯಂಕಾಲ 6 ಗಂಟೆಗೆ ಜೀವನೋತ್ಸವ ಪ್ರವಚನ ಮಾಲಿಕೆಯ ಉದ್ಘಾಟನಾ ಸಮಾರಂಭ ಜರುಗಲಿದೆ. ನವದೆಹಲಿಯ ರಾಷ್ಟ್ರೀಯ ಪ್ರೇರಣಾದಾಯಿ ಪ್ರವಚನಕಾರರಾದ ರಾಜಯೋಗಿ ಬಿ.ಕೆ ಪಿಯುಷ್ ಭಾಯಿಜಿ ಅವರಿಂದ ಜೀವನೋತ್ಸವ ಪ್ರವಚನ ಮಾಲೆ ಕಾರ್ಯಕ್ರಮ ಜರುಗಲಿದೆ. ಕಾರ್ಯಕ್ರಮವನ್ನು ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ಸಮಾರಂಭ ಉದ್ಘಾಟಿಸಲಿದ್ದು, ತನ್ನ ಸಾನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದೆ. ರಾಜಯೋಗಿ ಪಿಯುಷ್ ಭಾಯಿಜಿ ಅವರು ಮುಖ್ಯ ಪ್ರವಚನಕಾರರಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ್, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ ಸಿ ವೀರಣ್ಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟೆ, ಅಖಿಲ ಭಾರತೀಯ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಉಪಾಧ್ಯಕ್ಷ ಡಾ.ಗುರಮ್ಮ ಸಿದ್ದಾರೆಡ್ಡಿ, ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷರಾದ ಡಾ.ಬಲಬೀರ್ ಸಿಂಗ್ ಹಾಗೂ ಇತರರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಬೆಹೆನಜಿ ಕಾರ್ಯಕ್ರಮದ ವಿವರಣೆ ನೀಡಿದರು.

ಕೇಂದ್ರದ ಹಿರಿಯ ರಾಜಯೋಗ ಶಿಕ್ಷಕಿ ಬಿ.ಕೆ ಗುರುದೇವಿ ಅಕ್ಕನವರು ಈ ಸಂದರ್ಭದಲ್ಲಿ ಮಾತನಾಡಿ, ವ್ಯಸನಮುಕ್ತ ಭಾರತ ಅಭಿಯಾನದಡಿ ಫೆ.11, 12 ಹಾಗೂ 13 ಸೇರಿದಂತೆ ಈ ತಿಂಗಳ ಪರ್ಯಂತರ ಒಂದು ಆರೋಗ್ಯಕರ ಸುಖಿ ಸಂಪನ್ನ ವ್ಯಸನ ಮುಕ್ತ ಭಾರತ ದೇಶಕ್ಕಾಗಿ ಬ್ರಹ್ಮಕುಮಾರಿಸ್ ಮತ್ತು ಕೇಂದ್ರ ಸರ್ಕಾರದ ಸಯುಕ್ತಾಶ್ರಯದಡಿ ಸುಸಜ್ಜಿತ ಅಭಿಯಾನದ ಪ್ರಚಾರ ಕಾರ್ಯ ಕೈಗೊಂಡಿರುವ ವಾಹನದಲ್ಲಿ ದೊಡ್ಡ ಎಡಿ ಸ್ಕ್ರೀನ್ ಹಾಗೂ ಮಲಗಿರುವ ಕುಂಭಕರ್ಣನ ಮೂರ್ತಿ ಎದ್ದು ಸಂದೇಶ ನೀಡುವ ವ್ಯವಸ್ಥೆ ಇದೆ. ಇದಲ್ಲದೆ ಎಲ್ಲಾ ಕಾಲೇಜು, ಕಚೇರಿ, ಸಂಘ –ಸಂಸ್ಥೆಗಳಲ್ಲಿ ಹಾಗೂ ನಮ್ಮ ಸ್ಥಳೀಯ ಕೇಂದ್ರಗಳಲ್ಲಿ ಸಹ ಈ ವ್ಯಸನ ಮುಕ್ತಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಹಾಗೆ ಈ ತಿಂಗಳ 16ರಿಂದ ಐದು ದಿನಗಳ ಕಾಲ ಬ್ರಹ್ಮಾಕುಮಾರಿಸ್ ಕೇಂದ್ರ ಪಾವನಧಾಮ ಆವರಣದಲ್ಲಿ ಸಾಯಂಕಾಲ 6:00 ಗಂಟೆಯಿಂದ 7 ಗಂಟೆ ವರೆಗೆ ರಾಜಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಗುರುದೇವಿ ಅಕ್ಕನವರು ವಿವರಿಸಿದರು.

# ಎಸ್.ಎಸ್.ಎಲ್.ಸಿ. ಮಕ್ಕಳೊಂದಿಗೆ ಸಿ.ಇ.ಓ. ಸಂವಾದ



ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:

ಜಿಲ್ಲಾ ಪಂಚಾಯತ್ ಸಿಇಓ ಭಂವರ ಸಿಂಗ್ ಮೀನಾ ಅವರು ಶುಕ್ರವಾರ ಚಿಂಚೋಳಿ ತಾಲ್ಲೂಕಿನ ಚಂದಾಪುರ ಕರ್ನಾಟಕ ಪಬ್ಲಿಕ ಶಾಲೆ ಹಾಗೂ ಚಿಂಚೋಳಿ ಸರಕಾರಿ ಕನ್ಯಾ ಪ್ರೌಢಶಾಲೆಗಳೀಗೆ ಭೇಟಿ ನೀಡಿ 10ನೇ ತರಗತಿ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಯಾವ ರೀತಿಯಾಗಿ ಎದುರಿಸಬೇಕು ಎಂಬುವುದರ ಕುರಿತು ಮಕ್ಕಳೊಂದಿಗೆ ಸಂವಾದ ನಡೆಸಿದರು.

ಹತ್ತನೇ ತರಗತಿಯು ತಮ್ಮ ಜೀವನ ಒಂದು ಮಹತ್ವದ ಹಂತವಾಗಿದೆ. ಕೆಲ ವಿದ್ಯಾರ್ಥಿಗಳು ಹತ್ತನೇ ತರಗತಿ ಪರೀಕ್ಷೆ ಅಂದ್ರೆ ಭಯ ಪಡುತ್ತಿದ್ದು, ವಿದ್ಯಾರ್ಥಿಗಳು ಭಯಪಡುವ ಅವಶ್ಯಕತೆ ಇಲ್ಲ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಅದೇ ರೀತಿ ಗಣಿತ ವಿಷಯದ ಗ್ರಾಫ್‌ಗಳ ಬಗ್ಗೆ ಸ್ವತಃ ಜಿ.ಪಂ. ಸಿ.ಇ.ಓ. ಅವರು ವಿದ್ಯಾರ್ಥಿಗಳಿಗೆ ವಿವರಿಸಿ ಸುಲಭವಾಗಿ ಅಂಕಗಳನ್ನು ಗಳಿಸುವ ವಿಧಾನದ ಬಗ್ಗೆ ವಿವರಿಸಿದರು.

ಹಾಗೂ ಅರಿವೆ ಗುರು ಎಂಬ ಪುಸ್ತಕವನ್ನು ಬಳಸಿಕೊಂಡು ಹೆಚ್ಚು ಅಂಕಗಳನ್ನು ತೆಗೆದುಕೊಂಡು ಉತ್ತಮ ಫಲಿತಾಂಶ ತರಲು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

# ಕ್ಯಾನ್ಸರ್ ನಿರ್ಮೂಲನ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ ಫೇ 08:– ಚಿಟಗುಪ್ಪ ತಾಲೂಕಿನ ವಡ್ಡನ್ಕೇರೆ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಕ್ಯಾನ್ಸರ್ ನಿರ್ಮೂಲನ ದಿನಾಚರಣೆ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಶ್ರೀ ಯವನ್ ಕ್ಯಾನ್ಸರ ಕಾರ್ಯಕ್ರಮದ ಸಂಯೋಜಕರು ಕ್ಯಾನ್ಸರ್ ರೋಗ ಎಂದರೇನು ?ಕ್ಯಾನ್ಸರ್ ಎಂಬುದು ದೇಹದ ಕೆಲವು ಕೋಶಗಳು ನಿಯಂತ್ರಣವಿಲ್ಲದೆ ಹೆಚ್ಚಾಗಿ ಬೆಳೆಯುವ ರೋಗ ಈ ಅಸಹಜ ಕೋಶಗಳು ದೇಹದ ಇತರ ಭಾಗಗಳಿಗೆ ಹರಡಿ ಗಂಭೀರ ಸಮಸ್ಯೆ ಉಂಟುಮಾಡಬಹುದು. ಇದು ದೇಹದ ಯಾವುದೇ ಭಾಗದಲ್ಲೂ ಕಾಣಿಸಿಕೊಳ್ಳಬಹುದು. ಭಾರತದಲ್ಲೂ ಇದರ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ ಆದ್ದರಿಂದ ಇದು ದೊಡ್ಡ ಸಾರ್ವಜನಿಕ ಆರೋಗ್ಯ ಸಮಸ್ಯೆ. ಕ್ಯಾನ್ಸರ್ ತಡವಾಗಿ ಪತ್ತೆಯಾದರೆ ಜೀವಕ್ಕೆ ಭಾರೀ ಅಪಾಯ ಉಂಟಾಗಬಹುದು ಆದರೆ ಆರಂಭಿಕ ಹಂತದಲ್ಲಿ ಪತ್ತೆಯಾದರೆ ಚಿಕಿತ್ಸೆ ಪಡೆದುಕೊಳ್ಳಲು ಸಹಾಯವಾಗುತ್ತದೆ ಕ್ಯಾನ್ಸರ್ ಬಗ್ಗೆ ಜನರಲ್ಲಿ ಜಾಗೃತಿ ಕಡಿಮೆ ಇರುವುದರಿಂದ ಅನೇಕರು ಲಕ್ಷಣಗಳನ್ನು ನಿರ್ಲಕ್ಷ ಮಾಡುತ್ತಾರೆ ಇದು ತಂಬಾಕು ಸೇವನೆ, ಮದ್ಯಪಾನ ಅಸಮತೋಲನ ಆಹಾರ ದೈನಂದಿಕ ಚಟುವಟಿಕೆಯ ಕೊರತೆ ಇವು ಕ್ಯಾನ್ಸರ್ ಗೆ ಪ್ರಮುಖ ಕಾರಣಗಳು ಆರೋಗ್ಯಕರ ಜೀವನ ಶೈಲಿ . ಕ್ಯಾನ್ಸರ್ ಒಂದು ಗಂಭೀರ. ಆದರೆ ತಡೆಯ ಬಹುದಾದ ಮತ್ತು ಚಿಕಿತ್ಸೆ ನೀಡಬಹುದಾದ ರೋಗ ಅದರ ಮಹತ್ವವನ್ನು ಅರಿತು ಜಾಗೃತಿ ಮುನ್ನೆಚ್ಚರಿಕೆ ಮತ್ತು ಸಮಯಕ್ಕೆ ಸರಿಯಾದ ಚಿಕಿತ್ಸೆ ಪಡೆಯುವುದು ಅತ್ಯಂತ ಅಗತ್ಯ. ಕ್ಯಾನ್ಸರ್ ಚಿಕಿತ್ಸೆಗೆ ಹೆಚ್ಚಿನ ವೆಚ್ಚ ಬೇಕಾಗುತ್ತದೆ ಇದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಸಂಕಷ್ಟಕ್ಕೆ ಒಳಗಾಗುತ್ತಿವೆ ಹಾಗಾಗಿ ಇದರಿಂದ ಪ್ರತಿಯೊಬ್ಬರು ಆರೋಗ್ಯದ ಕಡೆ ಗಮನ ಹರಿಸಿ ಜಾಗ್ರತರಾಗಬೇಕೆಂದು ಮಾಹಿತಿ ತಿಳಿಸಿದರು. ಈ ಕಾರ್ಯಗಾರದಲ್ಲಿ ಶಾಲೆಯ ಮುಖ್ಯ ಗುರುಗಳು ಅಂಗನವಾಡಿ ಕಾರ್ಯಕರ್ತೆ ಅರಣ್ಯ ರಕ್ಷಕ ಸಿಬ್ಬಂದಿ ಸಂಗ ಮತ್ತು ಸಮುದಾಯದ ಒಟ್ಟು 27 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡಿರುತ್ತಾರೆ,

# ಪಾಪನಾಶ ದೇವಸ್ಥಾನ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ: ಸಚಿವ ಈಶ್ವರ ಖಂಡ್ರೆ

- ಮಲ್ಲಮ್ಮ ನುಡಿ ವಾರ್ತೆ ಬೀದರ:

ಪಾಪನಾಶ ದೇವಾಲಯ ಅಭಿವೃದ್ಧಿಯಾಗಬೇಕು ಎನ್ನುವುದು ಬೀದರ ಜಿಲ್ಲೆಯ ಜನರ ಬಹುದಿನದ ಬೇಡಿಕೆಯಾಗಿತ್ತು, ಅದು ಸಂಸದ ಸಾಗರ ಖಂಡ್ರೆ ಅವರ ಸತತ ಪ್ರಯತ್ನದಿಂದ ಈಡೇರಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಅವರು ಶನಿವಾರ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯ ಭಾರತ ಸರ್ಕಾರ, ಪ್ರವಾಸೋದ್ಯಮ ಇಲಾಖೆ ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಬೀದರ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯ ಪ್ರಸಾದ ಯೋಜನೆಯಡಿಯಲ್ಲಿ 22.41 ಕೋಟಿ ರೂ. ವೆಚ್ಚದಲ್ಲಿ ಬೀದರ ಜಿಲ್ಲೆಯ ಪಾಪನಾಶ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

2024ರ ಮಾರ್ಚ್ನಲ್ಲಿ ಈ ಕಾಮಗಾರಿ ಘೋಷಣೆಯಾಗಿ ಪ್ರಧಾನಿಯವರಿಂದ ವರ್ಚವಲ್ ಮೂಲಕ ಶಂಕುಸ್ಥಾಪನೆಯಾಗಿತ್ತು ಆದರೆ ಯಾವುದೇ ಪ್ರಗತಿಯಾಗಿರಲಿಲ್ಲ. ಸಾಗರ ಖಂಡ್ರೆ ಸಂಸದರಾದ ಮೇಲೆ ಕೇಂದ್ರ ಪ್ರವಾಸೋದ್ಯಮ ಸಚಿವರಿಗೆ ನಿರಂತರ ಭೇಟಿ ಮಾಡಿ ಹಣ ಮಂಜೂರಾತಿ ಮಾಡಿಸಿದ್ದಾರೆ ನಂತರ ರಾಜ್ಯ ಸರ್ಕಾರ ಪ್ರವಾಸೋದ್ಯಮ ಇಲಾಖೆಯಿಂದ ಟೆಂಡರ್ ಆಗಿ ಈಗ ಕಾಮಗಾರಿ ಪ್ರಾರಂಭವಾಗುತ್ತಿದೆ. ಕಾಮಗಾರಿಯೂ ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದರು.



ದೇವಸ್ಥಾನಗಳ ಮೇಲೆ ಜನರ ಸಾಕಷ್ಟು ನಂಬಿಕೆ ಇದೇ ಶಿವರಾತ್ರಿ ಸಮಯದಲ್ಲಿ ಪಾಪನಾಶ ದೇವಾಲಯಕ್ಕೆ ಸಹಸ್ರಾರು ಭಕ್ತರು ಭೇಟಿ ನೀಡುತ್ತಾರೆ. ದೇವಸ್ಥಾನದ ಜೀರ್ಣೋದ್ಧಾರದಿಂದ ಬರುವ ಭಕ್ತರಿಗೆ ಅನುಕೂಲವಾಗಲಿದೆ. ಇದರ ಜೊತೆಗೆ 10 ಎಕರೆ ಪ್ರದೇಶದಲ್ಲಿ ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ವಿಮಾನಯಾನಕ್ಕೆ ಮರುಚಾಲನೆ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳು ಮಾಡಲಾಗುತ್ತಿದೆ ಎಂದರು.

ಪೌರಾಡಳಿ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಮಾತನಾಡಿ, ಯಾರೇ ಅಭಿವೃದ್ಧಿ ಮಾಡಲಿ ಒಟ್ಟಿನಲ್ಲಿ ಬೀದರ ಅಭಿವೃದ್ಧಿಯಾಗಬೇಕು. ನಮ್ಮ ಇಲಾಖೆಯಿಂದ ಪಾಪನಾಶ ಅಭಿವೃದ್ಧಿಗಾಗಿ 5 ಕೋಟಿ ರೂಪಾಯಿ ನೀಡಿದ್ದೇನೆ ಜೊತೆಗೆ ಬೀದರ ಕೋಟೆ ಅಭಿವೃದ್ಧಿಗಾಗಿ 10 ಕೋಟಿ ರೂಪಾಯಿ ಹಾಗೂ ಕೆರೆ ಅಭಿವೃದ್ಧಿಗಾಗಿ 50 ಕೋಟಿ ಮಿಸಲಿಟ್ಟಿದ್ದೇನೆ. ಈಗಾಗಲೇ 100 ಕೋಟಿ ರೂಪಾಯಿ ವೆಚ್ಚದಲ್ಲಿ ಜಿಲ್ಲೆಯಲ್ಲಿ ರಸ್ತೆ ಚರಂಡಿ ಕಾಮಗಾರಿ ನಡೆಯಲಿವೆ ಎಂದರು.

ಸಂಸದ ಸಾಗರ ಖಂಡ್ರೆ ಮಾತನಾಡಿ, ಐತಿಹಾಸಿಕ ಪಾಪನಾಶ ದೇವಸ್ಥಾನದ ಅಭಿವೃದ್ಧಿಗೆ ಪ್ರಸಾದ ಯೋಜನೆಯಡಿ ತಾವು ಕೇಂದ್ರ ಪ್ರವಾಸೋದ್ಯಮ ಸಚಿವರಾದ ಗಜೇಂದ್ರಸಿಂಗ್ ಶೇಖಾವತ್ ಅವರನ್ನು ಭೇಟಿಯಾಗಿ ಅನುದಾನ ಬಿಡುಗಡೆಗಾಗಿ ವಿನಂತಿಸಿದ ನಂತರ ಸಚಿವರು ಅನುದಾನ ಬಿಡುಗಡೆ ಮಾಡಿದ್ದಾರೆ. ಈಗ ನನ್ನ ಕ್ಷೇತ್ರದ ಜನತೆಯ ಪರವಾಗಿ ಸಂಸದರಾಗಿ 22.41 ಕೋಟಿ ರೂ. ವೆಚ್ಚದಲ್ಲಿ ದೇವಾಲಯ ಅಭಿವೃದ್ಧಿಯ ವಿವಿಧ ಕಾಮಗಾರಿಗೆ ಚಾಲನೆ ನೀಡಿದ್ದೇವೆ. ಯಾರು ಸಹ ಧಾರ್ಮಿಕ ಕಾರ್ಯಕ್ರಮಗದಲ್ಲಿ ರಾಜಕೀಯ ತರಬಾರದು. ಪಾಪನಾಶ ದೇವಸ್ಥಾನ ಅಭಿವೃದ್ಧಿಗೆ ಅಲ್ಲದೇ ಜಿಲ್ಲೆಯ ಎಲ್ಲ ಧಾರ್ಮಿಕ ಕ್ಷೇತ್ರಗಳನ್ನು ಸಹ ಅಭಿವೃದ್ಧಿ ಮಾಡಲಾಗುವುದೆಂದರು.

ಬಡಜನರಿಗಾಗಿ ತಾವು ಈಗಾಗಲೇ 50 ಸಾವಿರ ಮನೆಗಳನ್ನು ಮಂಜೂರು ಮಾಡಲಾಗಿದೆ. ಜಿಲ್ಲೆಯಲ್ಲಿ ಸುಮಾರು 100 ಕೋಟಿ ರೈಲ್ವೆ ಕಾಮಗಾರಿ ನಡೆಯುತ್ತಿದೆ. ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ತಾವು ಬದ್ಧರಾಗಿದ್ದೇವೆ ಎಂದರು. ಪಾಪನಾಶ ಮಂದಿರದ ಪರಿಸರದಲ್ಲಿ ಜಾತ್ರಾ ಸಂಕೀರ್ಣ ನಿರ್ಮಾಣ, ಕೆರೆ ಮತ್ತು ಸುತ್ತಲಿನ ಪ್ರದೇಶ ಕಾಮಗಾರಿ, ಅನ್ನದಾಸೋಹ ಕಟ್ಟಡ, ಯಾತ್ರಿಕರ ವಿಶ್ರಾಂತಿ ತಾಣ, ಸಾಂಸ್ಕೃತಿಕ ಮತ್ತು ಮನೋರಂಜನಾ ಕೇಂದ್ರ, ಪಾರ್ಕಿಂಗ್ ಪ್ರದೇಶ ಅಭಿವೃದ್ಧಿ, ರಸ್ತೆಗಳ ಹಾಗೂ ಪಾದಚಾರಿ ಮಾರ್ಗಗಳು, ಮುಖ್ಯ ಪ್ರವೇಶ ದ್ವಾರ ಹಾಗೂ ವಿವಿಧ ರೀತಿಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ ಪಾಟೀಲ್ ಮಾತನಾಡಿ, ಸಾಗರ ಖಂಡ್ರೆಯವರು ಕಷ್ಟಪಟ್ಟು ಅನುಧಾನ ತಂದು ನಂತರ ಟೆಂಡರ್ ಮಾಡಿಸಿ ಕಾಮಗಾರಿ ಪ್ರಾರಂಭಿಸಿದ್ದಾರೆ. ನಾವೆಲ್ಲರೂ ಸೇರಿ ಅವರಿಗೆ ಸಹಕಾರ ನೀಡಿದಾಗ ಇನ್ನು ಹೆಚ್ಚಿನ ಅಭಿವೃದ್ಧಿ ಕೆಲಸ ಮಾಡಲು ಶಕ್ತಿ ನೀಡಿದಂತಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾಲಾ ನಾರಾಯಣರಾವ್, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ್ ಜಾಬಶೆಟ್ಟಿ, ಗ್ಯಾರಂಟಿ ಯೋಜನೆಯ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಬೀದರ ನಗರಸಭೆ ಅಧ್ಯಕ್ಷ ಮೊಹ್ಮದ್ ಗೌಸ್, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಬೀದರ ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್, ಹೆಚ್ಚುವಾರಿ ಎಸ್.ಪಿ. ಚಂದ್ರಕಾಂತ್ ಪೂಜಾರಿ, ಬೀದರ ಸಹಾಯಕ ಆಯುಕ್ತ ಮೊಹ್ಮದ್ ಶಕೀಲ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಶಿವಲಿಂಗಪ್ಪ, ಹಣಮಂತರಾವ್ ಚವ್ಹಾಣ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಸವಕಲ್ಯಾಣ :– ನಗರದಲ್ಲಿ ಹಾರಕೂಡ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಆಯೋಜಿಸಿದ್ದ ಎರಡು ದಿನದ 4.ನೇಯ ಕಾಯಕ ಉತ್ಸವದ ಕಾರ್ಯಕ್ರಮವನ್ನು ಶಾಸಕರಾದ ಶರಣು ಸಲಗರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅನುಭವ ಮಂಟಪದ ಟ್ರಸ್ಟಿನ ಅಧ್ಯಕ್ಷರಾದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದೇವರು. ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು. ಹುಲಸೂರಿನ ಪೂಜ್ಯ ಶ್ರೀ ಡಾ ಶಿವಾನಂದ ಮಹಾಸ್ವಾಮಿಜಿಗಳು. ಸಾಯಗಾಂವದ ಪೂಜ್ಯ ಶ್ರೀ ಶಿವಾನಂದ ದೇವರು. ಪೂಜ್ಯಶ್ರೀ ಗಂಗಾಂಬಿಕಾ ಅಕ್ಕ. ಬಸವರಾಜ ಪಾಟೀಲ ಸೇಡಂ. ಪ್ರಕಾಶ ಕುದರಿ. ರಮೇಶ ರಾಜೋಳೆ. ಸುಭಾಷಚಂದ್ರ ನಾಗರಾಳೆ. ಜಗನ್ನಾಥ ಪಾಟೀಲ. ರಾಜಕುಮಾರ ಸಿರಗಾಪುರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.) ಮಲ್ಲಮ್ಮ ನುಡಿ ಚಿತ್ರ).

# ರವಿದಾಸರ ತತ್ವದಿಂದ ಲೋಕಕಲ್ಯಾಣ

- **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:**

ಸದ್ಗುರು ರವಿದಾಸ ಮಹಾರಾಜ ಅವರ ತತ್ವದಿಂದ ಲೋಕಕಲ್ಯಾಣ ಆಗಬಲ್ಲದು' ಎಂದು ಶಿವಶರಣ ಹರಳಯ್ಯ ಸಮಾಜ ಸಂಘದ ತಾಲ್ಲೂಕು ಅಧ್ಯಕ್ಷರಾದ ಶಿವಾಜಿರಾವ್ ಕಾಂಬಳೆ ಅಭಿಪ್ರಾಯಪಟ್ಟರು.

ತಾಲ್ಲೂಕಿನ ರಾಜೋಳಾ ಗ್ರಾಮದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸದ್ಗುರು ರವಿದಾಸ ಮಹಾರಾಜರ 649 ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರವಿದಾಸರ ಸಂದೇಶದ ಪ್ರಚಾರ ಮತ್ತು ಪ್ರಸಾರ ವ್ಯಾಪಕವಾಗಿ ಆಗಬೇಕಾಗಿದೆ. ಆದ್ದರಿಂದ ಗ್ರಾಮೀಣ ಭಾಗದಲ್ಲಿ ಎಲ್ಲೆಡೆ ಜಯಂತಿ ಆಯೋಜಿಸುವ ಅಗತ್ಯವಿದೆ' ಎಂದರು. ಅಖಿಲ ಭಾರತೀಯ ರವಿದಾಸಿಯಾ ಧರ್ಮ ಸಂಘಟನೆ ಕರ್ನಾಟಕದ ಪ್ರಚಾರಕರಾದ ಮೀನಾ ಜಾಧವ, ಬೀದರ್ ನ ಲಲಿತಾ ವಾಘಮಾರೆ, ಧರ್ಮ ಸಂಘಟನೆ ಸಂಯೋಜಕ ಸೂರ್ಯಕಾಂತ ರವಿದಾಸಿಯಾ, ನಿವೃತ್ತ ಸೈನಿಕ ಸಂಭಾಜಿ ಟೀಳೆ, ಚಂದ್ರಕಾಂತ ಜಾಧವ, ಸವಿತಾ ಅಗ್ನೇಶ ಬಿದರಿ, ಭರತ ವಾಘಮಾರೆ ಸಾಯಗಾಂವ, ಕಾಶಿನಾಥ ಸೂರ್ಯವಂಶಿ, ಉತ್ತಮಬಾಯಿ ಮಾತನಾಡಿದರು. ರವಿದಾಸಿಯಾ ಧರ್ಮ ಪದ್ಧತಿಯ ಸತ್ ಸಂಪ್ರದಾಯ ವಿಧಿಗಳು ಗ್ರಂಥ ಬರೆದಿರುವ ಸೂರ್ಯಕಾಂತ ರವಿದಾಸಿಯಾ ಅವರ ವಿಶೇಷ ಸನ್ಮಾನ ನಡೆಯಿತು. ಗೌತಮ ಜಾಧವ, ವೆಂಕಟ ಜಾಧವ, ರಾಜೀವ ಜಧವ, ಸುಷ್ಮಾ ಹಮೀಲಪುರೆ, ಲಲಿತಾ ಜಾಧವ, ಲಕ್ಷ್ಮಿಬಾಯಿ



ಟೀಳೆ, ಶ್ರೀಧರ ಟೀಳೆ, ಅರ್ಜುನ ಭೋಸ್ಲೆ, ಮಲ್ಲಪ್ಪ ಸೀತಾಳಗೇರಾ, ಸುಧಾಕರ ಸೂರ್ಯವಂಶಿ, ಸುರೇಶ ಅರ್ಜುನ ಟೀಳೆ, ರಮೇಶ ಮಾರುತಿ ಟೀಳೆ, ಲಕ್ಷ್ಮಣ ಅರ್ಜುನ, ಉಮೇಶ, ರಾಘು ಲಕ್ಷ್ಮಣ, ಅರ್ಜುನ ಸುರೇಶ, ಮನೋಜ ಸುಭಾಷ, ಪಾಂಡುರಂಗ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕೇಂದ್ರ ಕಾರಾಗೃಹ ಕಲಬುರಗಿಯಲ್ಲಿ ಬಂದಿಗಳಿಗೆ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಗಳು ಹಾಗೂ ಮಾನಸಿಕ ಆರೋಗ್ಯ ಅರಿವು ಕಾರ್ಯಕ್ರಮದ ವಿಸ್ತೃತ ವರದಿ

**ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:** ದಿನಾಂಕ 07–02–2026 ರಂದು ಶನಿವಾರ ಕೇಂದ್ರ ಕಾರಾಗೃಹ ಕಲಬುರಗಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಕಲಬುರಗಿ ಇವರಿಂದ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಗಳು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಇಲಾಖೆ ಕಲಬುರಗಿ ವತಿಯಿಂದ ಮಾನಸಿಕ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಮಕ್ಕೆ ಮುಖ್ಯ ಅತಿಥಿ ಹಾಗೂ ಉಪನ್ಯಾಸಕರಾಗಿ ಆಗಮಿಸಿದ ಡಾ॥ ಮಹ್ಮದ್ ಇರ್ಫಾನ್, ಮಾನಸಿಕ ತಜ್ಞರು, ಜಿಮ್ಸ್ ಆಸ್ಪತ್ರೆ. ಕಲಬುರಗಿರವರು ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ ಮಾತನಾಡುತ್ತಾ, ಸಾಮನ್ಯವಾಗಿ ಕಂಡು ಬರುವ ಮಾನಸಿಕ ಖಾಯಿಲೆಗಳ ಲಕ್ಷಣಗಳೇಂದರೆ ನಿದ್ರಾ ಹೀನತೆ, ಜೀವನದಲ್ಲಿ ಜಿಗುಪ್ಸೆ, ನಿರಾಸಕ್ತಿ, ಹಸಿವು ಕಡಿಮೆ, ಅತೀ ಬೇಜಾರು, ವಿನಾಕಾರಣ ಭಯ ಪಡುವುದು, ಲೈಂಗಿಕ ಸಮಸ್ಯೆ ಹಾಗೂ ಅತ್ಯಂತ ಗಂಭೀರ ಸ್ವರೂಪದ ಲಕ್ಷಣಗಳಾದ ಅತೀ ಸಂಶಯ , ಆತ್ಮ ಹತ್ಯೆ ಆಲೋಚನೆ, ಮೈಮೇಲೆ ದೇವರು, ದೆವ್ವ ಬಂದಂತೆ ಆಡುವುದು, ವಿಚಿತ್ರ ವರ್ತನೆ , ಬೇರೆಯವರಿಗೆ ಕಾಣಿಸದ, ಕೇಳಿಸದ, ದೃಶ್ಯಧ್ವನಿಗಳು ಕಾಣಿಸುವುದು, ಕೇಳಿಸುವುದು ಮುಂತಾದ ಲಕ್ಷಣಗಳನ್ನು ಮಾನಸಿಕ ವ್ಯಕ್ತಿಗಳಲ್ಲಿ ಕಾಣಬಹುದು. ಇದಕ್ಕೆ ಕಾರಣಗಳು ಖಾಯಿಲೆ ಅರಿವು ಇರದೇ ಇರುವುದು, ತಪ್ಪು ನಂಬಿಕೆ, ಸಾಮಾಜಿಕ ಕಳಂಕ, ಚಿಕಿತ್ಸೆ ಕುರಿತು ತಪ್ಪು ಕಲ್ಪನೆಗಳಿಂದ ಚಿಕಿತ್ಸೆಯಿಂದ ವಂಚಿತರಾಗುತ್ತಿದ್ದಾರೆ. ಅವರಿಗೆ ಆಪ್ತ ಸಮಾಲೋಚನೆ, ಮಾತ್ರೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಸಾಮಾಜಿಕ ಬೆಂಬಲ ನೀಡುವುದು ಎಂದು ಹೇಳಿದರು.

ಇನ್ನೋರ್ವ ಅತಿಥಿಗಳಾಗಿ ಆರೋಗ್ಯ ಇಲಾಖೆ ವತಿಯಿಂದ ಆಗಮಿಸಿದ ತಂಬಾಕು ಸಾಮಾಜಿಕ ಕಾರ್ಯಕರ್ತರಾದ ಕು॥ಆರತಿರವರು ಮಾತನಾಡುತ್ತಾ, ಗೋಡೆಯ ಮೇಲೆ ಸ್ಕ್ರೀನ್ ಮೂಲಕ ಚಿತ್ರಗಳನ್ನು ತೋರಿಸುವ ಮೂಲಕ ಜನರಲ್ಲಿ ತಂಬಾಕು ಸೇವನೆಯಿಂದ ನೀವು ಬೀಡಿ ಸಿಗರೇಟ್‌ನಿಂದ ಬಿಡುವ ಹೊಗೆ ನಿಮ್ಮ ಶರೀರದ ಒಳಗಡೆ ಅಲ್ಲದೇ ನಿಮ್ಮ ಪಕ್ಕದಲ್ಲಿರುವ ಇತ–ರೇ ಜನರಿಗೆ ಗಾಳಿಯ ಮೂಲಕ ನೇರವಾಗಿ ತಂಬಾಕು ಸೇವನೆಯ



ಹೊಗೆಯನ್ನು ಅವರು ಪಡೆದು ಅನಾರೋಗ್ಯಕ್ಕೆ ತುತ್ತಾಗಿ ಹಲವಾರು ರೋಗಗಳಿಗೆ ಕಾರಣಿಭೂತರಾಗುತ್ತೀರಿ (ಉದಾ: ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ಶ್ವಾಸ ಕೋಶದ ಕಾಯಿಲೆಗಳು, ತಂಬಾಕು ಸೇವನೆಯೇ ಪ್ರಮುಖ ಕಾರಣಾವಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ರಾಕೇಶ್ ಕಾಂಬಳೆ, ಪ್ರಭಾರ ಮುಖ್ಯ ಅಧೀಕ್ಷಕರು ಕೇಂದ್ರ ಕಾರಾಗೃಹ ಕಲಬುರಗಿರವರು ಮಾತನಾಡುತ್ತಾ, ವಿವಿಧ ರೀತಿಯ ತಂಬಾಕು ಸೇವನೆ ಮಾಡುವುದರಿಂದ ಚಟಕ್ಕೆ ಬಿದ್ದು, ವ್ಯಸನಿಗಳಾಗಿ ದೈಹಿಕ ಮತ್ತು ಮಾನಸಿಕ ದುರ್ಬಲರಾಗಿ ಆಗುವುದರ ಜೊತೆಗೆ ಆರ್ಥಿಕವಾಗಿ ನಷ್ಟಹೊಂದಿ ಕುಟುಂಬ ನಿರ್ವಹಣೆ ಮಾಡುವುದು ಕೂಡ ದುಸ್ತರವಾಗುತ್ತದೆ ಮತ್ತು ತಂಬಾಕು ಸೇವನೆಗಳನ್ನು ನೀವು ದೂರ ಮಾಡಲು ಕಾರಾಗೃಹದಲ್ಲಿರುವ ವೃತ್ತಿಪರ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು, ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಂಡು ವ್ಯಸನಿಗಳಿಂದ ಮುಕ್ತಿಪಡೆದು ಒಳ್ಳೆಯ ಮತ್ತು ಸದೃಡ ಆರೋಗ್ಯವನ್ನು ಪಡೆದು ಒಳ್ಳೆಯ ಜೀವನವನ್ನು ನಡೆಸಲು ಸಲಹೆ ನೀಡಿದರು ಹಾಗೂ ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳನ್ನು ಕಾರಾಗೃಹದ ಬಂದಿಗಳಿಗೆ ನೀಡಲಾಗುತ್ತಿದೆ. ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಆಗಮಿಸಿದ ಆರೋಗ್ಯ ಮತ್ತು ಮಾನಸಿಕ ಇಲಾಖೆಯ ವೈದ್ಯರು ಹಾಗೂ ವೈದ್ಯಕೀಯ ತಂಡದವರಿಗೆ ಅಭಿನಂದನೆಗಳನ್ನು ತಿಳಿಸಿದರು.

ಪ್ರಾಸ್ತಾವಿಕವಾಗಿ ಶ್ರೀ ಬಿ. ಸುರೇಶ, ಸಹಾಯಕ ಅಧೀಕ್ಷಕರು, ಕೇಂದ್ರ ಕಾರಾಗೃಹ ಕಲಬುರಗಿ ಇವರು ಮಾತನಾಡುತ್ತಾ, ಪ್ರತಿಯೊಬ್ಬರು ಉತ್ತಮ ಆರೋಗ್ಯವನ್ನು ಹೊಂದಬೇಕಾದರೆ, ಮಾನಸಿಕವಾಗಿ ಸದೃಡರಾಗಬೇಕು ಹಾಗೂ ಆರೋಗ್ಯದ ಮೇಲೆ ಪರಿಣಾಮ ಬೀರುವ ತಂಬಾಕು ಸೇವನೆಯಿಂದ ದೂರವಿರಬೇಕು. ಸಹವಾಸದಿಂದ ಸನ್ಯಾಸಿ ಕೆಟ್ಟ, ಹಾಗಾಗಿ ಉತ್ತಮರ ಸಂಗ ಮಾಡಬೇಕು ಅಂದರೆ ಸಜ್ಜನರ ಸಂಗ ಹೆಜ್ಜೇನು ಸವಿದಂತೆ, ಒಳ್ಳೆಯವರ ಆಚಾರ ವಿಚಾರಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಮಾನಸಿಕ ಒಳಗೊಂಡಂತೆ ಉತ್ತಮ ಆರೋಗ್ಯವನ್ನು ಪಡೆಯಬೇಕೆಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕಾರಾಗೃಹದ ಸಹಾಯಕ ಅಧೀಕ್ಷಕರಾದ ಶ್ರೀ ಚನ್ನಪ್ಪ ಯಟಗಲ್, ಡಾ॥ ಆನಂದ ಅಡಕಿ, ಶ್ರೀಮತಿ ಸುನಂದಾ ವಿ, ಶ್ರೀ ಸಾಗರ್ ಪಾಟೀಲ, ಶ್ರೀ ಶಾಮ ಬಿದ್ರಿ, ಶ್ರೀ ಪುಂಡಲೀಕ ಟಿ.ಕೆ., ಶ್ರೀ ಶ್ರೀಮಂತಗೌಡ ಪಾಟೀಲ್ ಜೈಲರ್ ಹಾಗೂ ಆರೋಗ್ಯ ಇಲಾಖೆಯ ಶ್ರೀ ನಾಗರಾಜ ಬಿರಾದಾರ ಸಾಮಾಜಿಕ ಕಾರ್ಯಕರ್ತರು ಮತ್ತು ಶ್ರೀಮತಿ ಮಹಾದೇವಿ ಕೌನ್ಸಲರ್ ಭಾಗವಹಿಸಿದರು.

ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ನಾಗರಾಜ ಮುಲಗೆ ಶಿಕ್ಷಕರು ಕೇಂದ್ರ ಕಾರಾಗೃಹ ಕಲಬುರಗಿ ರವರು ನೇರವೆರಿಸಿದರು. ವಂದನಾರ್ಪಣೆಯನ್ನು ಶ್ರೀ ಭೀಮಾಶಂಕರ ಡಾಂಗೆ ಸಹಾಯಕ ಆಡಳಿತಾಧಿಕಾರಿಗಳು ಕೇಂದ್ರ ಕಾರಾಗೃಹ ಕಲಬುರಗಿರವರು ನಡೆಸಿಕೊಟ್ಟರು.

# ಫೆಬ್ರುವರಿ 10 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–2ರ 110 ಕೆ.ವಿ ವಾಡಿ ವಿತರಣಾ ಕೇಂದ್ರದಲ್ಲಿ ಮೆಂಟೇನನ್ಸ್ ಕಾರ್ಯಕೈಗೊಳ್ಳಬೇಕಿರುವ ಹಿನ್ನೆಲೆಯಲ್ಲಿ ಇದೇ ಫೆಬ್ರವರಿ 10 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ–2ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಶಹಾಬಾದ ಉಪವಿಭಾಗದ 110 ಕೆ.ವಿ ವಾಡಿ ವಿದ್ಯುತ್ ವಿತರಣಾ ಕೇಂದ್ರ: ರಾವೂರ, ಮಾಲಗತ್ತಿ, ಕಮರವಾಡಿ, ಹಲಕಟ್ಟಾ, ಇಂಗಳಗ್ಗಿ, ವಾಡಿ ಟೌನ ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳು ಹಾಗೂ ಎಮ್/ಎಸ್ ಎ.ಸಿ.ಸಿ. ವಾಡಿ ಲಿಮಿಟೆಡ್.

# ಒತ್ತಡ ರಹಿತ ಬದುಕಿಗೆ ವಚನ ಸಹಕಾರಿ.



- **ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ.:**

ಬಸವಾದಿ ಶರಣರ ವಚನಗಳು ಒತ್ತಡ ರಹಿತ ಬದು–ಕಿಗೆ ಸಹಕಾರಿ. ಮನದ ಮಲಿನತೆ ಕಳೆಯುವ, ಬುದ್ಧಿ, ಭಾವ ಬೆಳಗುವ, ಚಿಂತೆ ದೂರಮಾಡುವ ದಿವ್ಯತೆ ಹೊಂದಿವೆ ಎಂದು ಉಪನ್ಯಾಸಕ ಈಶ್ವರ್ ರುಮ್ಮಾ ಹೇಳಿದರು. ಸರ್ಕಾರಿ ಪ್ರೌಢಶಾಲೆ ದಾಡಗಿಯಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಲಿಂ. ಡಾ. ಸಿಂಪಿ ಲಿಂಗಣ್ಣ ಹಾಗೂ ಲಿಂ. ರಾಜಮ್ಮ ಬಸಪ್ಪ ಬಿರಾದರ್ ಹಾಲಹಿಪರ್ಗಾ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಸವಾದಿ ಶರಣ–ರು ವಚನಗಳ ಮೂಲಕ ಮನುಕುಲದ ಒಳಿತಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಅದರಂತೆ ವಿದ್ಯಾರ್ಥಿಗಳು ವಚನಗಳನ್ನು ಅರ್ಥೈಸಿಕೊಂಡು ಅದರಂತೆ ನಡೆಯುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶಂಭುಲಿಂಗ ಕಾಮಣ್ಣ ಮಾತನಾಡಿ ವಚನಗಳು ವ್ಯಕ್ತಿತ್ವ ಕಾಪಾಡುವ ಆವರಣ, ಅಂತರಂಗದ ಸಿರಿ ಹೆಚ್ಚಿಸುವ ಪ್ರಸಾದನೆ, ಮಾನಸಿಕ ಮತ್ತು ದೈಹಿಕ ಆರೋಗ್ಯ ರಕ್ಷಿಸುವ ದಿವ್ಯ ಔಷಧಿ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ ಮುಖ್ಯ ಗುರುಗಳಾದ ಎಂ. ಡಿ. ಹನೀಫ್ ಮಾತನಾಡಿ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು. ಇದರಿಂದ ಸಂಸ್ಕಾರ, ಸಂಸ್ಕೃತಿ, ಬಸವಾದಿ ಶರಣರ ವಿಚಾರಗಳು ಮಕ್ಕಳಲ್ಲಿ ಪ್ರಾರಂಭಿಕ ಹಂತದಿಂದ ಬೆಳೆಸಲು ಸಹಕಾರಿ ಎಂದರು. ಈ ಕಾರ್ಯಕ್ರಮದಲ್ಲಿ ಬಸವರಾಜ ಹುಡಗೆ, ರಮೇಶ್ ಮಾನಶೆಟ್ಟಿ, ದೇವಿದಾಸ್, ಚಂದ್ರಕಾಂತ್ ಮಾಶೆಟ್ಟಿ, ಬಲರಾಜ್ ಕುಂಬಾರ್, ನಾಗಶೆಟ್ಟಿ ಚೋಳ, ಭದ್ರಪ್ಪ, ಪರಶುರಾಮ ಕರಣಂ ಉಪಸ್ಥಿತರಿದ್ದರು. ಸತೀಶ್ ಬರ್ಮಾ ನಿರೂಪಿಸಿದರೆ, ಸಂತೋಷ್ ಕುಮಾರ್ ವಾಡೆ ವಂದಿಸಿದರು.

# ಜೆಡಿಎಸ್ ಜಿಲ್ಲಾಧ್ಯಕ್ಷರಾಗಿ ಮುಂದುವರಿದ ರಮೇಶ್ ಪಾಟೀಲ್ ಸೋಲಾಪುರ



**ಮಲ್ಲಮ್ಮ ನುಡಿ ವಾರ್ತೆ ಬೀದರ್ :**

ಜನತಾದಳ (ಜಾತ್ಯತೀತ) ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ ಅವರು, ರಮೇಶ್ ಪಾಟೀಲ್ ಸೋಲಾಪುರ ಅವರನ್ನು ಬೀದರ್ ಜಿಲ್ಲಾ ಜನತಾದಳ (ಜಾತ್ಯತೀತ) ಪಕ್ಷದ ಅಧ್ಯಕ್ಷರಾಗಿ ಮುಂದುವರಿಸುವಂತೆ ಆದೇಶ ನೀಡಿದ್ದಾರೆ. ಪಕ್ಷ ಸಂಘಟನೆ ಬಲಪಡಿಸುವಲ್ಲಿ ಅವರು ಸಲ್ಲಿಸಿರುವ ಸೇವೆ, ಕಾರ್ಯಕ್ಷಮತೆ ಹಾಗೂ ಸಂಘಟನಾ ಸಾಮರ್ಥ್ಯವನ್ನು ಪರಿಗಣಿಸಿ, ಅವರ ಅವಧಿಯನ್ನು ಮುಂದುವರಿಸುವ ಮಹತ್ವದ ತೀರ್ಮಾನವನ್ನು ಜೆಡಿಎಸ್ ಹೈಕಮಾಂಡ್ ಕೈಗೊಂಡು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಬಂಡೆಪ್ಪಾ ಖಾಶೇಂಪೂರ ಹಾಗೂ ನಿಖಿಲ್ ಕುಮಾರಸ್ವಾಮಿ ಅವರು ರಮೇಶ್ ಪಾಟೀಲ್ ಸೋಲಾಪುರ ಅವರಿಗೆ ಆದೇಶ ಪತ್ರ ವಿತರಿಸಿ

# ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆಗೆ ರೇವಣಸಿದ್ಧ ಹಡಪದ ತೀವ್ರ ಖಂಡನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಫೇ 08: ಹಡಪದ ಅಪ್ಪಣ್ಣ (ಕ್ಷೌರಿಕ) ಸಮಾಜದ ಕುರಿತು ಮಾಧ್ಯಮ ಸಂದರ್ಶನದ ವೇಳೆ ನಿಷೇಧಿತ ಹಾಗೂ ಅವಹೇಳನಕಾರಿ ಪದವನ್ನು ಬಳಸಿರುವುದನ್ನು ಖಂಡಿಸಿ ಬೀದರ್ ಜಿಲ್ಲಾ ಹಡಪದ ಸಮುದಾಯ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.



ಇತ್ತೀಚೆಗೆ ಮಾಧ್ಯಮವರದಿಗಾರರು ಪ್ರಶ್ನೆ ಕೇಳಿದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಮಾತನಾಡುವ ಭರದಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ ಅಳ್ನಾವರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿರುವ ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಅವರು ಹಡಪದ ಸಮಾಜವನ್ನು ಉದ್ದೇಶಿಸಿ (ಹಜಾಮ್) ಎಂಬ ನಿಷೇಧ ಪದ ಬಳಸಿ ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಸಚಿವರ ಈ ಹೇಳಿಕೆ ಸಮಾಜದ ಸ್ವಾಭಿಮಾನಕ್ಕೆ ಧಕ್ಕೆ ತರುವಂತಿದ್ದು, ಇದು ತೀವ್ರ ಖಂಡನೀಯ ಎಂದು ಹಡಪದ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಹಡಪದ ಸಮಾಜದ ಯುವ ಮುಖಂಡ ರೇವಣಸಿದ್ಧ ಹಡಪದ ಅವರು,

ಸಚಿವರ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರು ಈ ರೀತಿ ಜಾತಿ ನಿಂದನೆ ಮಾಡುವ ಪದ ಬಳಸಿರುವುದು ಅತ್ಯಂತ ಖಂಡನೀಯ. ಹಡಪದ ಸಮಾಜ ಶ್ರಮ, ಸೇವೆ ಹಾಗೂ ಗೌರವದಿಂದ ಬದುಕುತ್ತಿರುವ ಸಮುದಾಯ. ನಮ್ಮ ಸಮಾಜದ ಮೇಲೆ ಇಂತಹ ಅವಹೇಳನಕಾರಿ ಹೇಳಿಕೆಗಳನ್ನು ನಾವು ಸಹಿಸುವುದಿಲ್ಲ, ಎಂದು ಹೇಳಿದ್ದಾರೆ.

# ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಅಲ್ಮಾಜೆ ಆಯ್ಕೆ



- **ಮಲ್ಲಮ್ಮ ನುಡಿ ವಾರ್ತೆ,ಔರಾದ್:**

ತಾಲ್ಲೂಕು ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಹಿರಿಯ ಮುಖಂಡ ಶಿವರಾಜ ಅಲ್ಮಾಜೆ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಪಟ್ಟಣದಲ್ಲಿ ಗುರುವಾರ ನಡೆದ ಗುತ್ತಿಗೆದಾರರ ಸಂಘದ ಸಭೆಯಲ್ಲಿ ನಡೆದ ಆಯ್ಕೆಯಲ್ಲಿ ಎಲ್ಲ ಗುತ್ತಿಗೆದಾರರ ಸಮ್ಮತಿಯಿಂದ ಆಯ್ಕೆ ಸಮಿತಿಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿಗಳಾಗಿ ರಾವಸಾಬ ಪಾಟೀಲ, ಕೃಷ್ಣಾ ಸಾಗಾವೆ ಅವರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ಶಾಸಕ ಪ್ರಭು ಚವ್ಹಾಣ ಅವರನ್ನು ಸತ್ಕರಿಸಿ ಸನ್ಮಾನಿಸಿದರು. ವಿವಿಧ ಸಂಘ ಸಂಸ್ಥೆಗಳ ಮುಖಂಡರು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಶರಣು ಪಾಟೀಲ ಇಟಗ್ಯಾಳ, ಆನಂದ ದ್ಯಾಡೆ, ರವಿ ಔರಾದೆ, ರಮೇಶ ಗೌಡ, ಸೇರಿದಂತೆ ಇನ್ನಿತರರಿದ್ದರು.

# ವಿಶ್ವ ಕ್ಯಾನ್ಸರ್ ದಿನಾಚರಣೆ ಕ್ಯಾನ್ಸರ್ ಆಂದೋಲನ ಕುರಿತು ಜಾಗೃತಿ

- **ಮಲ್ಲಮ್ಮ ನುಡಿ ವಾರ್ತೆ,ಬೀದರ:**
- **ಪ್ರಯೂಕ್ತ ಆಗಸ್ಟೀನ್ ಆಂಗ್ಲಾ ಮಾಧ್ಯಾಮ ಶಾಲೆ ಹಳ್ಳಿಖೇಡ್ (ಬಿ) ಯಲ್ಲಿ ಕ್ಯಾನ್ಸರ್ ಆಂದೋಲನ ಕುರಿತು ಜಾಗೃತಿ ಕಾರ್ಯಕ್ರಮ"**

ಹುಮನಾಬಾದ ತಾಲೂಕಿನ ಹಳ್ಳಿಖೇಡ್ (ಬಿ) ಗ್ರಾಮದ ಆಗಸ್ಟೀನ್ ಆಂಗ್ಲಾ ಮಾಧ್ಯಾಮ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ್ ಮತ್ತು ಕಾರಿಥಾಸ್ ಇಂಡಿಯಾ ಇವರ ಸಹಯೋಗದಲ್ಲಿ, ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಯೋಹಾನ ಏಚ್ ವಾಲಿ ಅವರು 04 ಫೆಬ್ರವರಿ 2026 ರಂದು "ವಿಶ್ವ ಕ್ಯಾನ್ಸರ್ ದಿನಾಚರಣೆ" ಅಂಗವಾಗಿ ಶಾಲೇಯ ಮಕ್ಕಳಿಗು ಹಾಗೂ ಶೀಕ್ಷಕರಿಗು ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜನೆಯನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಜಾಗೃತಿ ಕುರಿತು ಮಾತನಾಡಿದ ಯೋಹಾನ ಏಚ್ ವಾಲಿ ಯವರು ಕ್ಯಾನ್ಸರ್ ಎಂಬುದು ನಿರ್ದಿಷ್ಟ ಕಾರಣಗಳು ಗುರುತಿಸಲು ಸಾಧ್ಯವಾಗದಿದ್ದರೂ ಹಲವು ಕಾರಣಗಳು ಸೇರಿ ಕ್ಯಾನ್ಸರ್ ಸಂಭವಿಸುತ್ತದೆ. ದೇಹದ ಯಾವುದೇ ಭಾಗದಲ್ಲಿ ಬರಬಹುದು. ಕ್ಯಾನ್ಸರ್‌ನಲ್ಲಿ ಜೀವಕೋಶಗಳ ವಿಭಜನೆ ಹಾಗೂ ಬೇಳವಣಿಗೆಯು ಸಹಜವಾಗಿ ಆಗದೇ ಅಸಹಜ ಹಾಗೂ ಅನಿಯಂತ್ರಿತವಾಗಿ ಆಗುತ್ತದೆ. ಅಷ್ಟೇ ಅಲ್ಲದೆ ಬೇರೆ ಭಾಗಗಳಲ್ಲಿ ದಾಳಿಮಾಡಿ ಶ್ವಾಶಕೋಶ ನಾಶ ಮಾಡುತ್ತದೆ. ಉದಾ:– ಮೂಗು, ಮೆದುಳು, ಶ್ವಾಶಕೋಶ ನಾಶ ಮಾಡುತ್ತದೆ. ಕ್ಯಾನ್ಸರ್ ಯಾವುದೇ ಭಾಗದಿಂದ ನಮ್ಮ ದೇಹದಲ್ಲಿ ಬಂದು ಸೇರಬಹುದು ಎಂದು ತೀಳಿಸಿದರು. ಕ್ಯಾನ್ಸರ್ ವಿಧಗಳಾದ ಗಂಟಲು ಕ್ಯಾನ್ಸರ್, ಚರ್ಮ ಕ್ಯಾನ್ಸರ್, ರಕ್ತದ ಕ್ಯಾನ್ಸರ್, ಜಠರ ಕ್ಯಾನ್ಸರ್, ಮೂಳೆ ಕ್ಯಾನ್ಸರ್, ಥೈರಾಡ್ ಕ್ಯಾನ್ಸರ್, ಬಾಯಿ




ಕ್ಯಾನ್ಸರ್ ಹಾಗೂ ಸ್ತ್ರಿಯರಲ್ಲಿ ಸ್ತನ ಕ್ಯಾನ್ಸರ್, ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗಿ ಬರುತ್ತವೆ ಎಂದು ತಿಳಿಸಿದರು. ಮೂರು ವಾರಗಳಿಗಿಂತ ಹೇಚ್ಚು ಕಾಲ ಇರುವ ಬಾಯಿ ನಾಲೀಗೆ ಹುಣ್ಣು, ರಕ್ತವನ್ನು ಕೆಮ್ಮುವುದು, ಮೂತ್ರ ಮಾಡುವಾಗ ರಕ್ತ ಕಾಣಿಸಿಕೋಳ್ಳುವುದು, ಮೂತ್ರವಿಸರ್ಜನೆಯಲ್ಲಿ ತೋಂದರೆಗಳು ಹಾಗೂ ತೂಕದಲ್ಲಿ ಇಳಿಕೆ ಹಾಗೂ ರಾತಿ ಬೆವರುವುದು, ನಿರಂತರ ಆಯಾಸವಾಗುವುದು, ಚರ್ಮದಲ್ಲಿ ಗಡ್ಡೆಗಳು ಗಟ್ಟಿಯಾಗಯವುದು, ಪದೇ ಪದೇ ಬಾಧಿಸುವ ಜ್ವರ, ಚರ್ಮದಲ್ಲಿ ಬದಲಾವಣೆಗಳು, ಮಲ ಮೂತ್ರ ವಿಸರ್ಜನೆ ಬಾಧೆ, ಒಣ ಕೆಮ್ಮು ಅಥವಾ ಕಫಯುಕ್ತ ಕೆಮ್ಮು, ಅಸಹಜ ರಕ್ತಸ್ರಾವ ಹಾಗೂ ಆಹಾರ ಸೇವಿಸಲು ಸಮಸ್ಯ ಇಂತಹ ಎಲ್ಲಾ ಕ್ಯಾನರ್‌ನ ಲಕ್ಷಣಗಳು ಕಂಡುಬರುತ್ತವೆ ಎಂದು ತಿಳಿಸಿದ್ದರು. ಸೇಬು, ಕಿತ್ತಳೆ ಹಣ್ಣು, ಗೆಣಸು, ಬಿಳಿ ಮೂಲಂಗಿ, ಬೆಳ್ಳುಳ್ಳಿ, ಪಾಲಕ ಸೂಪ್ಪು ಹಾಗೂ ಕೋಸುಗಡ್ಡ ಪದಾರ್ಥಗಳನ್ನು ಸೇವಿಸಬೇಕು. ತಂಬಾಕು ಬಳಸಬಾರದು, ಒಳ್ಳೆ ಆರೋಗ್ಯದ ಆಹಾರವನ್ನು ಸೇವಿಸಬೇಕು, ಸರಿಯಾದ ತೂಕವನ್ನು ಕಾಪಾಡಿಕೋಳ್ಳಬೇಕು, ಪ್ರತಿರೋಧಕ ಚುಚ್ಚುಮದ್ದು ತೆಗೆದುಕೋಳ್ಳಬೇಕು, ಬಿಸಿಲಿನಿಂದ ನಿಮ್ಮ ತ್ವಚೇಯನ್ನು ರಕ್ಷೀಸಿಕೋಳ್ಳಬೇಕು. ಯೋಗಾಸನಗಳು ಮಾಡಬೇಕು, ಪ್ಲಾಷ್ಟಿಕ್ ಬಳಸಬಾರದು ಮತ್ತು ಪ್ಲಾಷ್ಟಿಕ್ ಸುಡುವಂತೆ ಮಾಡಿ ತೆಗೆದುಕೋಳ್ಳಬಾರರು, ವಿಳದೆಲೆಯೆಲ್ಲಿ ಸುಣ್ಣ ತಂಬಾಕು ಮಿಶ್ರಣಮಾಡಿ ತಿನ್ನಬಾರದು. ಮಧ್ಯಾಪಾನ ಮಾದಬಾರದು ಇವುಗಳಿಂದ ದೂರವಿರಬೇಕು ಎಂದು ಸ್ಪಷ್ಟವಾಗಿ ತೀಳಿಸಿದ್ದರು. ಈ "ವಿಶ್ವ ಕ್ಯಾನ್ಸರ್ ದಿನಾಚರಣೆ" ಕಾರ್ಯಕ್ರಮದಲ್ಲಿ ಶಿಘ್ರ ಪತ್ತೆಹಚ್ಚುವಿಕೆ ಮತ್ತು ಆರಂಬಿಕ ಶಿಕ್ಷಣದ ಕಾರ್ಯಾಕ್ರಮದ ಸಂಯೋಜಕಿ ಶ್ರೀಮತಿ ಮಮತಾ, ಶಾಲೆಯ ನಿರ್ಧೇಶಕರಾದ ಭಾಸ್ಕರ್ ಸರ್, ಶಾಲಾ ಮುಖ್ಯ ಗುರುಗಳು, ಶಿಕ್ಷಕ ವರ್ಗದವರು ಹಾಗೂ ಶಾಲೆಯ ಮಕ್ಕಳು ಸೇರಿ 558 ಜನರು ಭಾಗವಹಿಸಿದ್ದರು.

# ಖೋ ಖೋ ಪಂದ್ಯದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ನಗರದಲ್ಲಿಫೆ.7.ರಂದು ನಗರದ ಜಿಲ್ಲಾಕ್ರೀಡಾಂಗಣದಲ್ಲಿ ನಡೆದ ಸರ್ಕಾರಿ ನೌಕರರ ಸಂಘದ ಜಿಲ್ಲಾ ಮಟ್ಟದ ಖೋ, ಖೋ ಕ್ರೀಡೆಯಲ್ಲಿ ವಡಗೇರಾ ತಾಲೂಕು ಸರ್ಕಾರಿ ನೌಕರರು ರಾಜ್ಯಮಟ್ಟಕ್ಕೆ ಆಯ್ಕೆಯಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಡಗೇರಾ ತಾಲೂಕು ಅಧ್ಯಕ್ಷ ಮಲ್ಲೇಶಪ್ಪ ಹೊಸಮನಿ ಸಂತಸ ವ್ಯಕ್ತಪಡಿಸಿ ಅಭಿನಂದಿಸಿ ಮಾತನಾಡಿದರು.ಸರ್ಕಾರಿ ನೌಕರರಿಗೆ ಒತ್ತಡ ನಿವಾರಣೆಗಾಗಿ ಅವರ ಆರೋಗ್ಯ ದೃಷ್ಟಿಯಿಂದ ಕ್ರೀಡೆಗಳನ್ನು ಹಮ್ಮಿಕೊಳ್ಳುತ್ತಿರುವ ಕಾರ್ಯ ಶ್ಲಾಘನೀಯ ಪ್ರತಿಯೊಬ್ಬ ನೌಕರರು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಮಾನಸಿಕವಾಗಿ ಸದೃಢರಾಗಬಹುದು ಕ್ರೀಡೆ ಮನುಷ್ಯನಿಗೆ ದಿವ್ಯ ಔಷಧಿ ಇದ್ದಂತೆ ಇಂತಹ ಇಳಿ ವಯಸ್ಸಿನಲ್ಲಿಯೂ ನಮ್ಮ ನೌಕರರು ಉತ್ತಮ ಪ್ರದರ್ಶನ ತೋರಿ ಖೋ, ಖೋ ಪಂದ್ಯಾವಳಿಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದು ತಾಲೂಕು ಮತ್ತು ಜಿಲ್ಲೆಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ರಾಯಪ್ಪಗೌಡ ಹುಡೆದ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಶಂಕ್ರಪ್ಪ ಗೊಂದೆನೂರು, ಸಾಹೇಬ್ ರೆಡ್ಡಿ ಇಟಗಿ,ಬಿಇಓ ಕಚೇರಿಯ ಇಸಿಓ ನಿಂಗನಗೌಡ ಕಲಾಲ, ತಾಲೂಕು ಪ್ರಧಾನ ಕಾರ್ಯದರ್ಶಿ ಎಚ್.ಬಿ.ಬಂಡಿ, ಉಪಾಧ್ಯಕ್ಷ ಮಲ್ಲೇಶ ಕುರಿಹಾಳ,ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳು ಹಾಗೂ ಇನ್ನಿತರರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

### ಜಿಲ್ಲಾ ಮಟ್ಟದ ಪತ್ರಕರ್ತರ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

# ಕ್ರೀಡೆಗಳು ಮಾನಸಿಕ ಉಲ್ಲಾಸಕ್ಕೆ ಪೂರಕ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಕ್ರೀಡೆಗಳು ದೈಹಿಕ ಕ್ಷಮತೆ ಹಾಗೂ ಮಾನಸಿಕ ಉಲ್ಲಾಸಕ್ಕೆ ಸಹಕಾರಿಯಾಗುತ್ತವೆ– ಎಸ್ ಪಿ ಪೃಥ್ವಿಕ್ ಶಂಕರ್. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಕ್ಷಮತೆ ಗಟ್ಟಿಗೊಳ್ಳುತ್ತದೆ ಹಾಗೂ ಮಾನಸಿಕವಾಗಿ ಉಲ್ಲಸಿತಗೊಳ್ಳಲು ಸಹಕಾರಿಯಾಗುತ್ತದೆ ಎಂದು ಎಸ್ಪಿ ಪೃಥ್ವಿಕ್ ಶಂಕರ್ ಹೇಳಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ನಡೆದ ಜಿಲ್ಲಾ ಮಟ್ಟದ ಪತ್ರಕರ್ತರ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು. ಸಾಮಾನ್ಯವಾಗಿ ಪತ್ರಕರ್ತರು ಅದರಲ್ಲೂ ದೃಶ್ಯ ಮಾಧ್ಯಮ ಪ್ರತಿನಿಧಿಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೆಲಸ ಮಾಡುತ್ತಿರುವಾಗ ಮೊದಲು ಸುದ್ದಿ ಕೊಡುವ ಧಾವಂತದಲ್ಲಿರುತ್ತಾರೆ. ಆದರೆ, ಇಂದು ಅಂತಹ ಯಾವುದೇ ಧಾವಂತವಿಲ್ಲದೇ ಎಲ್ಲರೂ ಮುಕ್ತವಾಗಿ ವಾರ್ಷಿಕ ಕ್ರೀಡಾಕೂಟದಲ್ಲಿ ಭಾಗಿಯಾಗಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದರು. ಕ್ರೀಡೆಗಳು ದೈಹಿಕ ಕ್ಷಮತೆ ಹೆಚ್ಚಿಸುವುದರ ಜೊತೆಗೆ ಸಮಯಪಾಲನೆ ಹಾಗೂ ಶಿಸ್ತು ಕಲಿತು ಕಲಿಸುತ್ತದೆ. ಇತ್ತೀಚೆಗೆ ಚಿಕ್ಕ ವಯೋಮಾನದ ಮಕ್ಕಳು ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆ. ವಾಕಿಂಗ್, ಜಾಗಿಂಗ್, ಯೋಗ, ಕ್ರೀಡೆ ಮುಂತಾದ ಚಟುವಟಿಕೆಗಳಲ್ಲಿ ಭಾಗಿಯಾಗುವುದರಿಂದ ಆರೋಗ್ಯವನ್ನು ಸದೃಡವಾಗಿಟ್ಟುಕೊಳ್ಳಬಹುದು ಎಂದರು. ಫುಟ್ ಬಾಲ್ ಪಂದ್ಯದಲ್ಲಿ ಭಾಗವಹಿಸುವುದರಿಂದ ದೇವರನ್ನು ಕಾಣಬಹುದು ಎಂದು ಸ್ವಾಮಿ ವಿವೇಕಾನಂದ ಅವರು ಹೇಳಿದ್ದಾರೆ,ಇದು ಕ್ರೀಡೆ ನಮಗೆ ಎಷ್ಟು ಅವಶ್ಯಕ ಎನ್ನುವುದನ್ನು ಸೂಚಿಸುತ್ತದೆ ಎಂದರು.

ಪತ್ರಕರ್ತರು ಮೊದಲು ತಮ್ಮ ಆರೋಗ್ಯದ ಕಡೆಗೆ ಗಮನ ಕೊಡುವುದು ತುಂಬ ಅಗತ್ಯವಿದೆ. ಜೀವನದಲ್ಲಿ ಆರೋಗ್ಯದಿಂದ ಇದ್ದ–ರೇ ಸಾಕಷ್ಟು ಸಾಧನೆ ಮಾಡಲು ಅನುಕೂಲವಾಗಲಿದೆ. ಒಂದು ವೇಳೆ ಆರೋಗ್ಯ ಕೈಕೊಟ್ಟರೇ ಏನೂ ಕೂಡ ಸಾಧನೆ ಮಾಡಲು ಆಗುವುದಿಲ್ಲ ಎಂಬುದು ನೀವು ಮನಗಾಣುವುದು ಅಗತ್ಯವಿದೆ ಎಂದು ತಿಳಿಸಿದರು.

ಕೆಲಸದ ಒತ್ತಡದ ನಡುವೆ ಪತ್ರಕರ್ತರು ಜೀವನ ಕಳೆದುಕೊಂಡಿರುವುದು ನಾವು ಮನಗಂಡಿದ್ದೇವೆ. ಸದಾ ಕ್ರೀಡೆಗಳಲ್ಲಿ ಭಾಗವಹಿಸುವುದಿರಿಂದಾಗಿ ಉತ್ತಮವಾದ ಆರೋಗ್ಯ ಹೊಂದಲು ಸಾಧ್ಯವಾಗುತ್ತದೆ ಎಂದರು.

ಜೀವನಲ್ಲಿ ಎಲ್ಲರೂ ಕೂಡ ಸಾಕಷ್ಟು ಎಚ್ಚರಿಕೆಯಿಂದ ಇರುವ ಮೂಲಕ ಉತ್ತಮವಾದ ಆರೋಗ್ಯ ಹೊಂದುವುದರ ಕಡೆಗೆ ಗಮನ ಕೊಡಬೇಕು ಎಂದರು. ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಮಾತನಾಡಿ, ಪತ್ರಕರ್ತರು ನಿರಂತರವಾಗಿ ಒತ್ತಡದಲ್ಲಿ ಕೆಲಸ ಮಾಡಬೇಕಾಗುತ್ತದೆ. ವರ್ಷದ ಪ್ರತಿನಿತ್ಯವೂ ಹಾಗೆ ಕೆಲಸ ಮಾಡುತ್ತಿರುವಾಗ ಒಂದು ದಿನ ಈ ಎಲ್ಲ ಒತ್ತಡಗಳಿಂದ ಹೊರಬಂದು ಮುಕ್ತವಾಗಿ ಭಾಗವಹಿಸಲು ಅನುಕೂಲವಾಗುವಂತೆ ವಾರ್ಷಿಕ ಕ್ರೀಡಾಕೂಟ ಆಯೋಜನೆ ಮಾಡಲಾಗಿದೆ ಎಂದರು. ಕ್ರೀಡೆಗಳಲ್ಲಿ ಸೋಲು–ಗೆಲುವು ಸಾಮಾನ್ಯ. ಆದರೆ, ನಾವು ಭಾಗವಹಿಸುವುದು ಬಹಳ ಮುಖ್ಯವಾಗುತ್ತದೆ. ಕ್ರೀಡೆಗಳಲ್ಲಿ ಭಾಗಿಯಾಗುವುದರಿಂದ ನಾವು ಉತ್ತಮ ಆರೋಗ್ಯ ಕಾಪಾಡುವುದರ ಜೊತೆಗೆ ಮಾನಸಿಕವಾಗಿ ಪ್ರಫುಲ್ಲರಾಗಿರಲು ಸಹಕಾರಿಯಾಗುತ್ತದೆ ಎಂದರು. ವಾರ್ಷಿಕ ಕ್ರೀಡಾಕೂಟದಲ್ಲಿ ಪತ್ರಕರ್ತರಿಗಾಗಿ ಕ್ರಿಕೆಟ್, ವಾಲಿಬಾಲ್, ನೂರು ಮೀಟರ್ ಓಟ, ಕಬ್ಬಡ್ಡಿ, ಚೆಸ್, ಥ್ರೋ ಬಾಲ್ ಹಾಗೂ ಕೇರಂ, ವಾಲಿಬಾಲ್ ಸೇರಿದಂತೆ ಇನ್ನಿತರ ಕ್ರೀಡೆಗಳು ನಡೆದವು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ, ಖಜಾಂಜಿ ರಾಜಕುಮಾರ ನಲ್ಲಿಕರ್ ಇದ್ದರು.

ಪತ್ರಕರ್ತ ಸಿದ್ದರಾಜರೆಡ್ಡಿ ನಿರೂಪಿಸಿ, ವಂದಿಸಿದರು.

# ಖಾದಿ ಉಡುಪು ಖರೀದಿಗೆ ಉತ್ಸಾಹ ತೋರಿದ ಸರಕಾರಿ ನೌಕರರು



• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸುತ್ತೋಲೆಯಂತೆ , ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ ಸಂಸ್ಥೆಗಳು/ನಿಗಮ/ಮಂಡಳಿ/ಸ್ವಾಯತ್ತ ಸಂಸ್ಥೆಗಳು /ವಿಶ್ವವಿದ್ಯಾಲಯಗಳ ಅಧಿಕಾರಿ/ನೌಕರರು "ಸ್ವಯಂ ಪ್ರೇರಣೆಯಿಂದ" ಪ್ರತಿ ತಿಂಗಳ ಮೊದಲ ಶನಿವಾರದಂದು ಖಾದಿ ಉಡುಪನ್ನು ಧರಿಸುವ ಕುರಿತಂತೆ, ಉತ್ತರ ಕನ್ನಡ ಜಿಲ್ಲೆಯ ಸರಕಾರಿ ನೌಕರರು ಖಾದಿ ಉಡುಪುಗಳನ್ನು ಖರೀದಿಸಲು ಅನುಕೂಲವಾಗುವಂತೆ, ಹುಬ್ಬಳ್ಳಿ ಯ ಖಾದಿ ಹುಟ್ಟುವಳಿ ಕೇಂದ್ರದಿಂದ ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ತಾತ್ಕಾಲಿಕ ಮಳಿಗೆಯನ್ನು ತೆರೆಯಲಾಗಿತ್ತು.

ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಅವರು ಮಳಿಗೆಗೆ ಭೇಟಿ ನೀಡಿ, ಸಾಂಕೇತಿಕವಾಗಿ ಸರಕಾರಿ ನೌಕರರಿಗೆ ಖಾದಿ ಉಡುಪನ್ನು ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿಗಳು ಸೇರಿದಂತೆ ವಿವಿಧ ಇಲಾಖೆಗಳ ಸರಕಾರಿ ನೌಕರರು ಅತ್ಯಂತ ಉತ್ಸಾಹದಿಂದ ಖಾದಿ ಉಡುಪುಗಳನ್ನು ಖರೀದಿಸಿದರು.

ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸಂಜೀವ ನಾಯ್ಕ, ಉಪಾಧ್ಯಕ್ಷ ರಮೇಶ್ ನಾಯ್ಕ ಮತ್ತಿತರರು ಇದ್ದರು.

# ಹೆತ್ತವರ ನಿರೀಕ್ಷೆಗಳನ್ನು ಹುಸಿಗೊಳಿಸಬೇಡಿ: ನಾಡಗೌಡ

• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ನಿಮಗೆ ಒಳ್ಳೆಯ ಶಿಕ್ಷಣವನ್ನು ನೀಡಿ ನಿಮ್ಮ ಭವಿಷ್ಯವನ್ನು ಉಜ್ವಲಗೊಳಿಸಲು ಹೆತ್ತವರು ಹಗಲಿರಳು ಕಷ್ಟ ಪಡುತ್ತಾರೆ ಅವರ ನಿರೀಕ್ಷೆಗಳನ್ನು ಹುಸಿಗೊಳಿಸಬೇಡಿ ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡರು ಹೇಳಿದರು. ರವಿವಾರ ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಿರ್ಮಾಣಗೊಂಡಿರುವ ಶ್ರೀ ಡಿ. ದೇವರಾಜ ಅರಸು ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸುಮಾರು 240.80 ಲಕ್ಷ ಮೊತ್ತದಲ್ಲಿ ನಿರ್ಮಾಣವಾಗಿರುವ ಈ ವಸತಿ ನಿಲಯದಲ್ಲಿ 100 ವಿದ್ಯಾರ್ಥಿನೀಯರು ಇರುವಷ್ಟು ಸೌಲಭ್ಯವಿದ್ದು ಅವರ ಸುರಕ್ಷತೆಯ ದೃಷ್ಟಿಯಿಂದ ಎಲ್ಲ ಅನುಕೂಲತೆಗಳನ್ನು ಮಾಡಿಕೊಡಲಾಗಿದೆ, ಈ ಮೊದಲು ಬಾಡಿಗೆ ಕಟ್ಟಿಡದಲ್ಲಿ ನಡೆಸುತ್ತಿರುವ ಈ ವಸತಿ ನಿಲಯವನ್ನು ಆದಷ್ಟು ಬೇಗ ಇಲ್ಲಿಗೆ ಸ್ಥಳಾಂತರ ಮಾಡಲಾಗುವುದು ವಿದ್ಯಾರ್ಥಿನಿಯರು ಈ ಕಟ್ಟಡದ ಸ್ವಚ್ಛತೆಯನ್ನು ಕಾಯ್ದುಕೊಳ್ಳಬೇಕು. ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಶ್ರೇಷ್ಠಸಾಧನೆಮಾಡುವಂತವರಾಗಬೇಕು, ಪಾಠದೊಂದಿಗೆ ಆಟಕ್ಕೂ ಮಹತ್ವ ನೀಡಬೇಕು ಇಲ್ಲಿ ಸಣ್ಣಪುಟ್ಟ ಕ್ರೀಡೆಗಳನ್ನಾಡಲು ಸ್ಥಳಾವಕಾಶ ಇದೆ ಇದರ ಸದುಪಯೋಗ ಮಾಡಿಕೊಂಡು ಒಳ್ಳೆಯ ಕ್ರೀಡಾಪಟುಗಳಾಗಲೂ ಪ್ರಯತ್ನಿಸಿ ಈ ನೂತನ ಕಟ್ಟಡದಲ್ಲಿ ನಿಮಗೆಲ್ಲರಿಗೂ ಶುಭವಾಗಲಿ ಎಂದರು. ಇದೇ ಸಂದರ್ಭದಲ್ಲಿ ನೂತನ ವಸತಿ ನಿಲಯದ ಕಟ್ಟಡ ನಿರ್ಮಾಣ ಮಾಡಿದ ಕೆ ಆರ್ ಐ ಡಿ ಎಲ್ ಇಲಾಖೆಯ ಅಧಿಕಾರಿ ಬಸವರಾಜ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಿವಲೀಲಾ ಕೊಣ್ಣೂರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಸಂಗನಗೌಡ ಅಸ್ಕಿ, ಪಿಎ ಜ್ಯೋತಿ ಖೋತ, ನಿಲಯ ಮೇಲ್ವಿಚಾರಕಿ ಶಹನಾಜ ಮುದ್ದೇಬಿಹಾಳ, ನಿಲಯ ಪಾಲಕರಾದ ಐ.ಎಸ್.ಮೊರ್ಕಿ, ಎಚ್.ಎಸ್.ಬಾದವಾಡಗಿ, ಮುದ್ದೇಬಿಹಾಳ ನಿಲಯ ಮೇಲ್ವಿಚಾರಕ ಅಡಿವೆಪ್ಪ ಸೌಕಾರ, ಸಿಬ್ಬಂದಿಗಳಾದ ಯಲ್ಲಾಲಿಂಗ ಹೊಸಮನಿ

, ಸಂಗಮೇಶ ಬಳಿಗಾರ, ಜ್ಯೋತಿ ಚೌದರಿ, ಅಂಬಾವತಿ ಹೊಸಮನಿ, ಗಂಗಾರಾಮ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.




> ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಾಗಿದ್ದು ಮೂಲ ಸೌಕರ್ಯಗಳಾದ ರಸ್ತೆ, ಶುದ್ಧ ಕುಡಿಯುವ ನೀರು,ಆರೋಗ್ಯ, ವಿದ್ಯುತ್ ಹಾಗೂ ವಿಶೇಷವಾಗಿ ಶಿಕ್ಷಣಕ್ಕೆ ಪ್ರಾತಿನಿಧ್ಯ ಕೊಟ್ಟು ಕೆಲಸ ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ.
> **ಶಾಸಕ ಸಿ.ಎಸ್.ನಾಡಗೌಡ ಮುದ್ದೇಬಿಹಾಳ.**

# ಫೇ: 12 ದೆಹಲಿ ಚಲೋ ಮಹಾಬೋಧಿ ಕರಪತ್ರ ಬಿಡುಗಡೆ




• **ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ:**

ಮಹಾ ವಿಹಾರದ ವಿಮೋಚನೆಗಾಗಿ ದೆಹಲಿಯಲ್ಲಿ ನಡೆಯಲಿದೆ ಅತಿದೊಡ್ಡ ಚಳುವಳಿಯನ್ನು ಭೀಕು ಸಂಘದ ವತಿಯಿಂದ ದೆಹಲಿಯಲ್ಲಿ ಇದೇ ಫೇ: 12 ರಂದು ಆಯೋಜಿಸಲಾಗಿದೆ.ಈ ಆಂದೋಲನದ ಭಿತ್ತಿಪತ್ರ ನಗರದ ಅಂಬೇಡ್ಕರ ವ್ರತದಲ್ಲಿ. ಬಿಡುಗಡೆ ಮಾತನಾಡಿ ಶಂಕರ ಫುಲೆ ಮಾತನಾಡಿದರು ಇದು ಪ್ರತಿಯೊಬ್ಬ ನಾಗರಿಕನ ಚಳುವಳಿಯಾಗಿದೆ.ಹಾಗೂ

ಬಾಬಾಸಾಹೇಬ್ ಬೌದ್ಧ ಧರ್ಮದ ಭಾರತವನ್ನು ಬಯಸಿದ್ದರು.ಅವರ ಕನಸಿನ ಭಾರತವನ್ನು ಅಂ–ದರೆ ವಿಶ್ವದ ಅತ್ಯಂತ ಶಕ್ತಿಶಾಲಿ ಭಾರತವನ್ನಾಗಿ ಮಿಷನ್ ಮಹಾಬೋಧಿ ಮಹಾವಿಹಾರ್ ಮುಕ್ತಿ ಪಡೆದುಕೊಳ್ಳುವಾಗ. ಈ ಆಂದೋಲನಕ್ಕೆ ಎಲ್ಲರು ಸಹಕರಿಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಬೌದ್ಧ ಉಪಾಸಕ್ ಕಪಿಲ್ ಗೊಡಬೋಲೇ ಮುಖಂಡರಾದ ಶಂಕರ ಫುಲೆ.ಸುರೇಶ್ ಮೂರೆ. ಮಹೇಶ್ ರಾಗಿ. ಗೌತಮ್ ಜಾಂತೆ. ಕವಿರಾಜ ದೇವಕರ್. ಮನೋಜ ಖೆಲೆ. ದೇವಾನಂದ ಟೊಳ್ಳೆ. ಮಹದೇವ್ ಚಂಡಕಾಪುರ್. ದತ್ತು ಸುತಾಣೆ.ಸಂದಿಪ ಮುಕಿಂದೆ. ಅಶೋಕ್ ಸಿಂಧೆ.ದಸರತ ಕೊಟಮಾಳೆ ಜೈಭೀಮ ಕೊಳೆ ಸಾಗರ ರಾಯಗೊಳ ಆದಿತ್ಯ ಗಾಜರೆ ಸೇರಿದಂತೆ ಅನೇಕರು ಬಾಗವಹಿಸಿದರು.

# ಯಾದಗಿರಿಯಿಂದ ಬೀರನಕಲ್ ತಾಂಡಕ್ಕೆ ನೂತನ ಬಸ್ ಆರಂಭ




• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಸಾರ್ವಜನಿಕರ ಬಹು ದಿನಗಳ ಬೇಡಿಕೆಯಾದ ತಾಲೂಕಿನ ಬಿರನಕಲ್ ತಾಂಡಾದಿಂದ ವಡಗೇರಾ ಮಾರ್ಗವಾಗಿ ಯಾದಗಿರಿಗೆ ಬಸ್ಸು ಬಿಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ದಂದು ತಾಂಡಕ್ಕೆ ಯಾದಗಿರಿ ವಡಗೇರಾ ಮಾರ್ಗವಾಗಿ ಬೀರನಕಲ್ ತಾಂಡಕ್ಕೆ ಹೊಸದಾಗಿ ಬಿಟ್ಟಿರುವ ನೂತನ ಬಸ್ಸಿಗೆ ಗ್ರಾಮಸ್ಥರು ಸೇರಿ ಪೂಜೆ ಸಲ್ಲಿಸಿ ಸ್ವಾಗತಿಸಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಅಭಿನಂದನೆಗಳು ತಿಳಿಸಿದರು.ಇದೆ ಸಮಯದಲ್ಲಿ ನಿರ್ವಾಹಕ ಚಾಲಕರಿಗೆ ಗ್ರಾಮಸ್ಥರು ಸನ್ಮಾನಿಸಿದರು.ಈ ಸಂದರ್ಭದಲ್ಲಿ ರಾಮ ಪೂಜಾರಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಕಿಶನ್ ರಾಠೋಡ್, ತಿಪ್ಪಣ್ಣ ರಾಠೋಡ್,ರೆಡ್ಡಿ ಚಂದಪ್ಪ ರಾಠೋಡ್,ದೇವರಾಜ್ ಕಾರಬಾರಿ, ರೇಖಾ ನಾಯಕ್, ರವಿ ಚವಾಣ್ ಎಸ್ ಡಿ.ಎಂಸಿ ಅಧ್ಯಕ್ಷರು ಚನ್ನಪ್ಪ ರಾಠೋಡ್, ಕೃಷ್ಣ ರಾಠೋಡ್, ಸುರೇಶ್ ಪವಾರ್, ಹಣಂತ್ ರಾಥೋಡ್,ಮಾಜಿ ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಶಂಕರ್ ರಾಠೋಡ್,ಶಿವರಾಜ್ ರಾಠೋಡ್, ದೇವಪ್ಪ ಚೌಹಾಣ್ ಪುಣೆ, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪಿಂಚಣಿ ಯೋಜನೆಗೆ ನೋಂದಣಿ ಮಾಡಿ



• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ಜಿಲ್ಲೆಯಲ್ಲಿನ ಅಸಂಘಟಿತ ವಲಯದ ಕಾರ್ಮಿಕರನ್ನು ಪ್ರಧಾನ ಮಂತ್ರಿ ಮಾನ್ ಧನ್ ವಂತಿಗೆ ಆಧಾರಿತ ಪಿಂಚಣಿ ಯೋಜನೆಗೆ ನೋಂದಣಿ ಮಾಡುವ ಸಂದರ್ಭದಲ್ಲಿ ಯೋಜನೆಯ ಸಂಪೂರ್ಣ ಮಾಹಿತಿಯನ್ನು ತಿಳಿಸಿ ನೋಂದಣಿ ಮಾಡಿಸುವಂತೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ನಿರ್ದೇಶನ ನೀಡಿದರು. ಅವರು ಶನಿವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಯ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಅಸಂಘಟಿತ ವಲಯದ ಕಾರ್ಮಿಕರನ್ನು ಗುರುತಿಸಿ ಈ ಯೋಜನೆ ವ್ಯಾಪ್ತಿಗೊಳಪಡಿಸಬೇಕು ಹಾಗೂ ಯೋಜನೆಯ ಕುರಿತು ಕಾರ್ಮಿಕರಲ್ಲಿ ಅರಿವು ಮಾಡಿಸಬೇಕು ಎಂದ ಅವರು, ಸರ್ಕಾರದ ಯೋಜನೆಗಳು ಯಶಸ್ವಿಯಾಗಬೇಕಾದರೆ ಯೋಜನೆಯ ಬಗ್ಗೆ ಫಲಾನುಭವಿಗಳಿಗೆ ಸಂಪೂರ್ಣ ಮಾಹಿತಿ ಒದಗಿಸಬೇಕು ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಮಿಕರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು ಎಂದರು.ಜಿಲ್ಲೆಯಲ್ಲಿನ ಕೃಷಿ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು, ಅಕ್ಷರ ದಾಸೋಹ ಅಡುಗೆ ಸಹಾಯಕರು, ಬೀದಿ ಬದಿ ವ್ಯಾಪಾರಸ್ಥರು, ಮನರೇಗಾ ಕೂಲಿ ಕಾರ್ಮಿಕರು,ಮನೆ ಕೆಲಸದವರು, ಅಗಸರು, ಕೈಮಗ್ಗ ಕಾರ್ಮಿಕರು ಸೇರಿದಂತೆ ಅಸಂಘಟಿತ ಅರ್ಹ ಕಾರ್ಮಿಕರನ್ನು ಗುರುತಿಸಿ, ಮಾರ್ಚ್ 15ರ ವರೆಗೆ ನಡೆಯುವ ವಿಶೇಷ ನೋಂದಣಿ ಅಭಿಯಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಬೇಕು ಎಂದರು.ಟ ಕಾರ್ಮಿಕ ಅಧಿಕಾರಿ ಲಲಿತಾ ಸಾತೇನಹಳ್ಳಿ ಮಾತನಾಡಿ 18 ರಿಂದ 40 ವರ್ಷದೊಳಗಿನ ಅಸಂಘಟಿತ ಕಾರ್ಮಿಕರು ಎ.ಎಸ್.ಸಿ ಸೆಂಟರ್‌ಗಳಲ್ಲಿ ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಪ್ರತಿ ಸಲ್ಲಿಸಿ ಯೋಜನೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದರು. ಸಭೆಯಲ್ಲಿ ಕಾರ್ಮಿಕ ಅಧಿಕಾರಿ ವೀಣಾ ಮಾಸ್ತಿ, ಪೌರಾಯುಕ್ತ ಜಗದೀಶ ಹುಲಿಗಜ್ಜಿ, ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಪ್ರತೀಕ ಶೆಟ್ಟಿ, ವಿವಿಧ ಕಾರ್ಮಿಕ ಸಂಘಟನೆಯ ಮುಖಂಡರು ಮತ್ತಿತರರು ಇದ್ದರು.

# ಶೇಂಗಾ ಬೆಲೆ ಕುಸಿತಕ್ಕೆ ರೈತ ಸೇನೆ ಹೋರಾಟ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಶೇಂಗಾ ಬೆಲೆ ಏಕಾಏಕಿ ಕುಸಿತವಾಗಿರುವ ಹಿನ್ನೆಲೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ವತಿಯಿಂದ ನಗರದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಲಾಯಿತು. ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಮುಂಭಾಗದಲ್ಲಿ ರಸ್ತೆ ತಡೆ ನಡೆಸಿ, ರಾಜ್ಯ ಸರಕಾರ, ದಲ್ಲಾಳಿಗಳ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು,ರೈತರು ಬೆಳೆದ ಬೆಳೆಗೆ ಸಮರ್ಪಕ ಬೆಲೆ ಸಿಗಬೇಕು ಹಾಗೂ ಎಲ್ಲ ಬೆಳೆಗಳಿಗೆ ಖರೀದಿ ಕೇಂದ್ರ ಗಳನ್ನು ವರ್ಷಪೂರ್ತಿ ತೆರೆದು ಕೇಂದ್ರ ಸರಕಾರ ನಿಗದಿಪಡಿಸಿರುವ ಕನಿಷ್ಠ ಬೆಲೆಯಂತೆ ಖರೀದಿಸಬೇಕು ಆಗ್ರಹಿಸಿದರು. ಯಾದಗಿರಿಯಲ್ಲಿ ಶೇಂಗಾ ಬೆಲೆ ಏಕಾಏಕಿ ಕುಸಿತವದ ಹಿನ್ನೆಲೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ವತಿಯಿಂದ ನಗರದಲ್ಲಿ ರಸ್ತೆ ತಡೆ ನಡೆಸಿ, ಪ್ರತಿಭಟನೆ ನಡೆಸಲಾಯಿತು. ಬಾರಿ ಅತಿವೃಷ್ಟಿಯಿಂದಾಗಿ ಶೇಂಗಾ ಬೆಳೆ ಕಡಿಮೆ ಇಳುವರಿ ಬಂದಿದೆ. ಈಗಾಗಲೇ ಸಂಕಷ್ಟದಲ್ಲಿರುವ ರೈತರಿಗೆ ಬೆಲೆ ಕುಸಿತ ಮತ್ತಷ್ಟು ಹೊರೆ ಉಂಟು ಮಾಡಿದೆ. ಆದ್ದರಿಂದ ಶೇಂಗಾ ಬೆಲೆಯನ್ನು ಪ್ರತಿ ಕ್ವಿಂಟಲ್ ಗೆ ಕನಿಷ್ಠ 12,000 ರೂ.ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು. ಖರೀದಿ ಪ್ರಕ್ರಿಯೆಯಲ್ಲಿ ತೂಕ ಕಡಿಮೆ, ಸೂಟ್ ಕಡಿತ, ಹಮಾಲರು ಶೇಂಗಾ ನೆಲಕ್ಕೆ ಹಾಕಿ ಹೆಚ್ಚುವರಿ ಪ್ರಮಾಣ ಪಡೆಯುವುದು ಸೇರಿ ಹಲವು ಅನ್ಯಾಯಗಳು ನಡೆಯುತ್ತಿವೆ ಎಂದು ಆರೋಪಿಸಿದ ರೈತರು, ಈ ಅಕ್ರಮಗಳಿಗೆ ತಕ್ಷಣ ಕಡಿವಾಣ ಹಾಕಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿ ಸಿದರು.ರಾಜ್ಯ ಉಪಾಧ್ಯಕ್ಷ ಲಕ್ಷ್ಮೀಕಾಂತ ಪಾಟೀಲ್ ಮದ್ದರಕಿ ಮಾತನಾಡಿ, ಉತ್ತಮ ದರಕ್ಕೆ ಶೇಂಗಾ ಖರೀದಿಸಲು ಹೊರ ರಾಜ್ಯಗಳಿಂದ ವರ್ತಕರು ಬರುತ್ತಿದ್ದಾರೆ. ಆದರೆ, ಸ್ಥಳೀಯ ಏಜೆಂಟರು ಅವರನ್ನು ತಡೆಯುತ್ತಿದ್ದಾರೆ. ಕೂಡಲೇ ಸರಕಾರಗಳು ರೈತರ ನೆರವಿಗೆ ಬರಬೇಕು. ವರ್ಷದ 12 ತಿಂಗಳುಗಳ ಕಾಲ ಖರೀದಿ ಕೇಂದ್ರ ತೆರೆದು ಕೇಂದ್ರ ಸರಕಾರ ನಿಗದಿಪಡಿಸಿರುವ ಎಂ. ಎಸ್.ಪಿ ದರದಂತೆ ಖರೀದಿ ಪ್ರಕ್ರಿಯೆ ನಡೆಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಮಹಾವೀರ ಲಿಂಗೇರಿ, ಮುಖಂಡರಾದ ಶ್ರೀಕಾಂತ ಕಂಬಾರ, ತಾಯಪ್ಪ ನಾಗ್ಲಾಪುರ, ನಿಂಗಪ್ಪ ಗುಡಗುಡಿ, ಸುಭಾಷ್, ಮಲ್ಲಿಕಾರ್ಜುನ ಹೊನಗೇರಾ ಸೇರಿ ಅನೇಕ ರೈತರು ಪಾಲ್ಗೊಂಡಿದ್ದರು.

# ಭವ್ಯ 'ಹಿಂದೂ ಸಮ್ಮೇಳನ'

• **ಮಲ್ಲಮ್ಮ ನುಡಿ ವಾರ್ತೆಕಮಲನಗರ:**

ತಾಲೂಕಿನ ಠಾಣಾ ಕುಶನೂರನಲ್ಲಿ ಹಿಂದೂ ಸಮ್ಮೇಳನ ಉತ್ಸವ ಸಮಿತಿಯ ವತಿಯಿಂದ ಫೆಬ್ರವರಿ 9, 2026ರ ಸೋಮವಾರದಂದು ಅದ್ದೂರಿ 'ಹಿಂದೂ ಸಮ್ಮೇಳನ'ವನ್ನು ಹಮ್ಮಿಕೊಳ್ಳಲಾಗಿದೆ. ಧರ್ಮ ಸಭೆಯನ್ನು ಸಾಯಂಕಾಲ 5:00 ಗಂಟೆಗೆ: ದಿವ್ಯ ಸಾನಿಧ್ಯ: ಪೂಜ್ಯ ಶ್ರೀ ಡಾ. ಹಾವಗಿಲಿಂಗೇಶ್ವರ ಶಿವಾಚಾರ್ಯರು (ಹಲಬರ್ಗಾ ಮಠ, ಭಾಲ್ಕಿ),ಅಧ್ಯಕ್ಷತೆ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಮಹಾಸ್ವಾಮಿಗಳು (ವಿರಕ್ತ ಮಠ, ಠಾಣಾಕುಶನೂರ),ದಿಕ್ಸೂಚಿ ಭಾಷಣ: ಶ್ರೀ ರೇಕುನಾಯಕ, ಸಾಮಾಜಿಕ ಕಾರ್ಯಕರ್ತರು, ಭಾಲ್ಕಿ ಅವರು ನಡೆಸಿ ಕೂಡಲಿದ್ದಾರೆ.

ಮದ್ಯಾಹ್ನ 3:15 ಘಂಟೆಗೆ ಭವ್ಯ ಶೋಭಾಯಾತ್ರೆ: ಸಮ್ಮೇಳನದ ಅಂಗವಾಗಿ ಮಧ್ಯಾಹ್ನ 3:15 ಗಂಟೆಗೆ ಭವ್ಯ ಶೋಭಾಯಾತ್ರೆ ನಡೆಯಲಿದೆ. ಈ ಮೆರವಣಿಗೆಯು ಶ್ರೀ ಗಣೇಶ ದೇವಸ್ಥಾನದಿಂದ ಪ್ರಾರಂಭವಾಗಿ ಬಸವೇಶ್ವರ ವೃತ್ತ, ಮಹಾದೇವ ಮಂದಿರ ಹಾಗೂ ಸ್ವಾಮಿಗಲ್ಲಿಯ ಮೂಲಕ ಸಾಗಿ ಪುನಃ ಗಣೇಶ ದೇವಸ್ಥಾನದವರೆಗೆ ತಲುಪಲಿದೆ.ಈ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳುವಂತೆ ಸಮಿತಿ ವತಿಯಿಂದ ತಿಳಿಸಲಾಗಿದೆ.

## ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಕಾರ್ಯಾಗಾರ

# ಬಡವರ ಆರ್ಥಿಕ ಸಬಲೀಕರಣಕ್ಕೆ ಪಂಚ ಗ್ಯಾರಂಟಿ ಯೋಜನೆಗಳ ಜಾರಿ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು :




ರಾಜ್ಯದ ಪ್ರಗತಿ ಜೊತೆಗೆ ಬಡವರ ಆರ್ಥಿಕತೆಯನ್ನುಸುಧಾರಿಸಲುನಮ್ಮಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳನ್ನುಜಾರಿಗೆ ತಂದು ನುಡಿದಂತೆ ನಡೆದಿದ್ದೇವೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಹೇಳಿದರು.

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ರಾಯಚೂರು ಮಹಾನಗರ ಪಾಲಿಕೆ ಇವರುಗಳ ಸಂಯುಕ್ತಾಶ್ರಯದಲ್ಲಿ ಶನಿವಾರದಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಕಾರ್ಯಗಾರದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮೀ, ಯುವನಿಧಿ ಮತ್ತು ಅನ್ನಭಾಗ್ಯ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಸುಮಾರು ಒಂದು ಲಕ್ಷ ಕೋಟಿ ರೂ.ಗಳನ್ನು ಮಧ್ಯವರ್ತಿಗಳ ಹಾವಳಿಯಿಲ್ಲದೆ ರಾಜ್ಯದ ಜನರ ಮನೆ ಬಾಗಿಲಿಗೆ ನೇರವಾಗಿ ತಲುಪಿಸುವ ಕೆಲಸವಾಗುತ್ತಿದೆ. ನಮ್ಮ ಸರ್ಕಾರಕ್ಕೆ ಹೆಣ್ಣು ಮಕ್ಕಳ ಮೇಲೆ ಬಹಳಷ್ಟು ವಿಶ್ವಾಸವಿದೆ. ಮಹಿಳೆಯರ ಕೈಯಲ್ಲಿ ಹಣ ನೀಡಿದರೆ, ಅವರ ಕುಟುಂಬ ಸುಧಾರಿಸುತ್ತದೆ ಎಂಬ ನಂಬಿಕೆಯಿಂದ ಪಂಚ ಗ್ಯಾರಂಟಿ ಯೋಜನೆಗಳನ್ನು ವಿಶೇಷವಾಗಿ ಮಹಿಳೆಯರನ್ನು ಕೇಂದ್ರೀಕರಿಸಿ, ಅನುಷ್ಠಾನ ಮಾಡಲಾಗಿದೆ ಎಂದರು. ಬಡವರು, ಹಿಂದುಳಿದವರು, ಮಧ್ಯಮ ವರ್ಗದವರು ಸೇರಿದಂತೆ ಪ್ರತಿಯೊಬ್ಬರೂ ನೆಮ್ಮದಿಯಿಂದ ಬದುಕಬೇಕು. ಪ್ರತಿಯೊಬ್ಬರ ಆದಾಯ ಹೆಚ್ಚಾಗಬೇಕು ಎಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಆದಾಯ ಹೆಚ್ಚಾದಂತೆ ಕುಟುಂಬದ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಪೂರಕವಾಗಿವೆ. ಉತ್ತಮ ಜನಾಭಿಪ್ರಾಯ ಇದ್ದಾಗ ಮಾತ್ರ ಸರ್ಕಾರಗಳು ಯಾವುದೇ ಯೋಜನೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಹಾಗಾಗಿ ಈ ಎಲ್ಲಾ ಯೋಜನೆಗಳ ಲಾಭ ಪಡೆದುಕೊಂಡ ಫಲಾನುಭವಿಗಳು ವಿಶೇಷವಾಗಿ ಮಹಿಳೆಯರು ಯೋಜನೆಯ ಅನುಕೂಲಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡಬೇಕು. ಇದರಿಂದ ಯಾರೂ ಈ ಯೋಜನೆಗಳ ಬಗ್ಗೆ ಅಪಪ್ರಚಾರ ಮಾಡುಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎಂ.ರೇವಣ್ಣ ಅವರು ಮಾತನಾಡಿ, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ರಾಜ್ಯ ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿರುವ ಮೂಲಕ 25 ತಿಂಗಳುಗಳನ್ನು ಯಶಸ್ವಿಯಾಗಿ ಪೂರೈಸಿದೆ. ಯಾವುದೇ ಮಧ್ಯವರ್ತಿಗಳಿಲ್ಲದೇ ನೇರವಾಗಿ ಫಲಾನುಭವಿಗಳಿಗೆ ತಲುಪುವ ಯೋಜನೆಗಳಾಗಿವೆ. ಇವು ಇಡೀ ಭಾರತದಲ್ಲೇ ಮೊದಲ ಬಾರಿಗೆ ಜಾರಿಯಾದ ಪಾರದರ್ಶಕ ವ್ಯವಸ್ಥೆಯಾಗಿದೆ. ಪಂಚ ಗ್ಯಾರಂಟಿ ಯೋಜನೆಗಳಿಗಾಗಿ 1 ಲಕ್ಷದ 12 ಸಾವಿರ ಕೋಟಿ ರೂ.ಗಳನ್ನು ಒದಗಿಸುತ್ತಿದೆ ಎಂದರು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸುವ ಶಕ್ತಿ ಯೋಜನೆಯು 665 ಕೋಟಿ ಟ್ರಿಪ್ ಗಳಲ್ಲಿ ಮಹಿಳೆಯರ ಉಚಿತ ಬಸ್ ಪ್ರಯಾಣವು ವಿಶ್ವ ದಾಖಲೆಯನ್ನು ನಿರ್ಮಿಸಿದೆ. ಈ ಯೋಜನೆಯಿಂದ ಮಹಿಳೆಯರ ಜೀವನದಲ್ಲಿ ಸಂತೋಷ ಮತ್ತು ಸ್ವಾತಂತ್ರ್ಯ ಹೆಚ್ಚಾಗಿದೆ. ಮನೆಮಧ್ಯೆ ಸೀಮಿತವಾಗಿದ್ದ ಮಹಿಳೆಯರು ಇದೀಗ ದೇವಸ್ಥಾನಗಳು, ಬಂಧು, ಬಳಗದ ಮನೆಗಳಿಗೆ, ಪ್ರವಾಸಿ ತಾಣಗಳಿಗೆ ಮುಕ್ತವಾಗಿ ಸಂಚರಿಸುತ್ತಿರುವುದು ಕಾಣಸಿಗುತ್ತಿದೆ. ನಮ್ಮ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳ ಮಾದರಿಯಲ್ಲಿ ಜಾರಿಗೆ ತಂದ ಯೋಜನೆಗಳನ್ನು ಕೆಲವೇ ಕೆಲವು ತಿಂಗಳಲ್ಲಿ ನಿಲ್ಲಿಸಿದ್ದಾರೆ. ಆ ಎಲ್ಲಾ ರಾಜ್ಯಗಳಿಗೆ ನಮ್ಮ ರಾಜ್ಯ ಒಂದು ಮಾದರಿಯಾಗಿದೆ ಎಂದು ಹೇಳಿದರು. ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ (ಮೈಸೂರು ವಿಭಾಗದ) ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ ಅವರು ಮಾತನಾಡಿ, ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯ ಸರ್ಕಾರವು ಭದ್ರತೆಯ ಭರವಸೆ ನೀಡಿದೆ. ಮಹಿಳೆಯರ ಬದುಕಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿವೆ ಇದು ಅಭಿನಂದನಾರ್ಹವಾಗಿದೆ. ಗ್ಯಾರಂಟಿ ಯೋಜನೆಗಳು ಅರ್ಹ ಪ್ರತಿಯೊಬ್ಬರಿಗೂ ತಲುಪುವಂತೆ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಶಯೋಜನೆಯಡಿ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಿರುವುದರಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಯಚೂರು ಉತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗಿದೆ ಎಂದರು. ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ರಾಯಚೂರು ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ 4,37,355 ಫಲಾನುಭವಿಗಳಿಗೆ ಸಹಾಯಧನ ಒದಗಿಸಲಾಗಿದ್ದು, ಇದಕ್ಕಾಗಿ 2045.376 ಕೋಟಿ ರೂ.ಗಳ ವೆಚ್ಚ ಭರಿಸಲಾಗಿದೆ. ಶಕ್ತಿ ಯೋಜನೆಯಡಿ 11.28 ಕೋಟಿ ಫಲಾನುಭವಿಗಳು ಉಚಿತ ಬಸ್ ಪ್ರಯಾಣದ ಸೌಲಭ್ಯ ಪಡೆದುಕೊಂಡಿದ್ದಾರೆ. 4,53,891 ಪಡಿತರ ಚೀಟಿಗಳಿಗೆ ಅನ್ನಭಾಗ್ಯ ಯೋಜನೆಯಿಂದ ಅನುಕೂಲವಾಗಿದೆ. ಗೃಹಜ್ಯೋತಿ ಯೋಜನೆಯಡಿ ಶೇ. 95ರಷ್ಟು ಪ್ರಗತಿ ಸಾಧಿಸಲಾಗಿದೆ. ಯುವನಿಧಿ ಯೋಜನೆಯಲ್ಲಿ ರಾಯಚೂರು ಜಿಲ್ಲೆ 4ನೇ ಸ್ಥಾನದಲ್ಲಿದೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ 12,056 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ ಎಂದರು.

ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ ಅವರು ಕಾರ್ಯಕ್ರಮದ ರೂಪರೇಷಗಳ ಕುರಿತು ತಿಳಿಸಿದರು. ಜಾಗೃತ ಕರ್ನಾಟಕದ ಸಂಚಾಲಕರಾದ ಪ್ರೊ. ಬಿ.ಸಿ.ಬಸವರಾಜ ಅವರು ಪಂಚ ಗ್ಯಾರಂಟಿ ಯೋಜನೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರದ ಎನ್.ಎಸ್.ಬೋಸರಾಜು, ರಾಯಚೂರು ಸಂಸದರಾದ ಜಿ.ಕುಮಾರ ನಾಯಕ, ಶಾಸಕರಾದ ಬಸನಗೌಡ ದದ್ದಲ್, ಹಂಪನಗೌಡ ಬಾದರ್ಲಿ, ಆರ್.ಬಸನಗೌಡ ತುರ್ವಿಹಾಳ, ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಆರ್‌ಡಿಎ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿಗಳಾದ ಕೆ.ನಿತೀನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ ಸೇರಿದಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷರು, ವಿವಿಧ ತಾಲೂಕುಗಳ ಅಧ್ಯಕ್ಷರು, ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ರಾಯಚೂರು ಜಿಲ್ಲಾ ಉತ್ಸವದ ಕವಿಗೋಷ್ಠಿ ಮಸ್ಕಿಯ ವಿವಿಧ ಕವಿಗಳು ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ:

ಇಂದು 7ರಂದು ನಡೆಯಲಿರುವ ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಕವಿಗೋಷ್ಠಿಗೆ ಮಸ್ಕಿ ತಾಲೂಕಿನಿಂದ ವಿವಿಧ ಕವಿಗಳು ಆಯ್ಕೆಯಾಗಿದ್ದಾರೆ.

ರಾಯಚೂರು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ರಾಯಚೂರು ಜಿಲ್ಲಾ ಉತ್ಸವದ ಕವಿಗೋಷ್ಠಿಗೆ ಮಸ್ಕಿ ತಾಲೂಕಿನ ಹಿರಿಯ ಕವಿಗಳಾದ ಮಹೇಶ್ ಶಿಕ್ಷಕರು, ಪ್ರಶಾಂತ್ ಶೆಟ್ಟಿ, ಶ್ರೀಧರ, ದೇವರಾಜ ಭಂಡಾರಿ, ದೇವರಾಜ ಘಂಟಿ, ಮುಖ್ಯ ಕವಿಗೋಷ್ಟಕ್ಕೆ ಆಯ್ಕೆಯಾಗಿದ್ದಾರೆ.

# ಜಿಲ್ಲಾ ಉತ್ಸವದ ಕವಿಗೋಷ್ಠಿ ಮಸ್ಕಿಯ ವಿವಿಧ ಕವಿಗಳು ಆಯ್ಕೆ

ಮಸ್ಕಿ: ಇಂದು 7ರಂದು ನಡೆಯಲಿರುವ ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಕವಿಗೋಷ್ಠಿಗೆ ಮಸ್ಕಿ ತಾಲೂಕಿನಿಂದ ವಿವಿಧ ಕವಿಗಳು ಆಯ್ಕೆಯಾಗಿದ್ದಾರೆ.

ರಾಯಚೂರು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ರಾಯಚೂರು ಜಿಲ್ಲಾ ಉತ್ಸವದ ಕವಿಗೋಷ್ಠಿಗೆ ಮಸ್ಕಿ ತಾಲೂಕಿನ ಹಿರಿಯ ಕವಿಗಳಾದ ಮಹೇಶ್ ಶಿಕ್ಷಕರು, ಪ್ರಶಾಂತ್ ಶೆಟ್ಟಿ, ಶ್ರೀಧರ, ದೇವರಾಜ ಭಂಡಾರಿ, ದೇವರಾಜ ಘಂಟಿ, ಮುಖ್ಯ ಕವಿಗೋಷ್ಟಕ್ಕೆ ಆಯ್ಕೆಯಾಗಿದ್ದಾರೆ.

# ಫೆ. 9 ರಿಂದ 13 ರವರೆಗೆ ಆರ್ಥಿಕ ಸಾಕ್ಷರತಾ ಸಪ್ತಾಹ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ:

ಸಾರ್ವಜನಿಕರಲ್ಲಿ ಬ್ಯಾಂಕಿಂಗ್ ವ್ಯವಹಾರ ಹಾಗೂ ಆರ್ಥಿಕ ಶಿಸ್ತಿನ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಫೆ. 9 ರಿಂದ 13 ರವರೆಗೆ ಜಿಲ್ಲೆಯಾದ್ಯಂತ ಐದು ದಿನಗಳ "ಆರ್ಥಿಕ ಸಾಕ್ಷರತಾ ಸಪ್ತಾಹ" ಹಮ್ಮಿಕೊಳ್ಳಲಾಗಿದೆ.

ಹಣಕಾಸು ಸೇವೆಗಳ ಇಲಾಖೆ ಹಾಗೂ ಭಾರತೀಯ ರಿಸರ್ವ ಬ್ಯಾಂಕ್ (ಆರ್.ಬಿ.ಐ) ನಿರ್ದೇಶನದಂತೆ ಜಿಲ್ಲಾ ಮಾರ್ಗದರ್ಶಕ ಬ್ಯಾಂಕ್ ಈ ಕಾರ್ಯಕ್ರಮ ಆಯೋಜಿಸಿದ್ದು, ಇದೇ ಫೆ. 9 ರಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಿಂದ ಸಪ್ತಾಹದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡುವ ಮೂಲಕ ಅಧಿಕೃತವಾಗಿ ಚಾಲನೆ ನೀಡಲಿದ್ದು, ಜಿಲ್ಲೆಯಾದ್ಯಂತ ಇರುವ ಎಲ್ಲಾ ಬ್ಯಾಂಕ್ ಶಾಖೆಗಳಲ್ಲೂ ಆರ್ಥಿಕ ಸಾಕ್ಷರತಾ ಸಪ್ತಾಹದ ಅಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕೆವೈಸಿ, ಸಿಕೆವೈಸಿ ಆಧಾರ ಓಟಿಪಿ ಆಧಾರಿತ ಈ ಕೆವೈಸಿಗಳ ಬಗ್ಗೆ ಮಾಹಿತಿಯನ್ನು ಜಿಲ್ಲೆಯಾದ್ಯಂತ ಇರುವ ಆರ್ಥಿಕ ಸಾಕ್ಷರತಾ ಕೇಂದ್ರಗಳು ಎಫ್.ಎಲ್.ಸಿ ಹಾಗೂ ಸಿ.ಎಫ್.ಎಲ್ ಗಳು ಪ್ರತಿದಿನ ಒಂದೊಂದು ಕಾರ್ಯಕ್ರಮ ಏರ್ಪಡಿಸುವ ಮೂಲಕ ಪ್ರಚುತಪಡಿಸಲಿದ್ದಾರೆ ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕ ರಾಜಪ್ಪ ಗೌಳಿ ತಿಳಿಸಿದ್ದಾರೆ.

# ಅಂತರಾಷ್ಟ್ರೀಯ ಅಪಸ್ಮಾರ ದಿನ; ಜಾಥಾ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ:

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ಕಾರ್ಯಕ್ರಮದಡಿಯಲ್ಲಿ ಅಂತರಾಷ್ಟ್ರೀಯ ಅಪಸ್ಮಾರ ದಿನ ಅಂಗವಾಗಿ ಅಪಸ್ಮಾರ ಕುರಿತು ಅರಿವನ್ನು ಹೆಚ್ಚಿಸಿ ಅದರ ಬಗ್ಗೆ ಇರುವ ತಪ್ಪು ಕಲ್ಪನೆಗಳು ಮತ್ತು ಸಾಮಾಜಿಕ ಕಳಂಕವನ್ನು ನಿವಾರಿಸಲು ಹಾಗೂ ಅಪಸ್ಮಾರ ಹೊಂದಿರುವ ವ್ಯಕ್ತಿಗಳನ್ನು ಗೌರವ ಮತ್ತು ಮಾನವೀಯತೆ ಸಮಾನತೆಯೊಂದಿಗೆ ಕಾಣುವಂತೆ ಮಾಡಲು ಜನ ಸಮುದಾಯದಲ್ಲಿ ಜಾಗೃತಿಯನ್ನು ಹರಡುವ ಉದ್ದೇಶದಿಂದ ಫೆ.9 ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಹಿತಿ ಆಗರ ಕೃಷಿ ಮೇಳದಲ್ಲೂ ಜನವೋ ಜನ,

# ರಾಯಚೂರು ಜಿಲ್ಲಾ ಉತ್ಸವ ಅಕ್ಷರಶಃ ಜನೋತ್ಸವ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು :



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಫೆ.5 ರಿಂದ ಫೆ.7ರವರೆಗೆ ಮೂರು ದಿನಗಳ ಕಾಲ ನಡೆದ ರಾಯಚೂರು ಜಿಲ್ಲಾ ಉತ್ಸವ ಜನೋತ್ಸವವಾಗಿ ಇತಿಹಾಸದ ಪುಟ ಸೇರಿತು.

ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಫೆ.5 ರಿಂದ 7ರವರೆಗೆ ಮೂರು ದಿನಗಳ ಕಾಲ ನಡೆದ ಕೃಷಿ ಮೇಳದಲ್ಲೂ ಜನವೋ ಜನ ಎನ್ನುವ ಸಂದೇಶ ರವಾನೆಯಾಯಿತು.

ರಾಯಚೂರು ಉತ್ಸವಕ್ಕಾಗಿ ಕೃಷಿ ವಿಶ್ವ ವಿದ್ಯಾಲಯ ಆವರಣವು ಹಬ್ಬದಂತೆ ಸಿದ್ಧಗೊಂಡು ಎಲ್ಲೆಡೆ ಉತ್ಸವದ ಫಲಕಗಳೇ ಕಾಣಿಸಿದವು.

ಭತ್ತದ ಒಣಮೇವಿನಿಂದ ನಿರ್ಮಿಸಿದ್ದ ಕೃಷಿ ಮೇಳದ ಕಮಾನು ವಿಶೇಷ ಆಕರ್ಷಣೆಯಾಗಿತ್ತು. ಉತ್ಸವಕ್ಕೆ ಆಗಮಿಸಿದ್ದ ಬಹುತೇಕ ಜನತೆ ಕೃಷಿ ಮೇಳದ ಕಮಾನಿನ ಮುಂದೆ ನಿಂತು ಸೆಲ್ಫಿ ಪಡೆಯುತ್ತಿದ್ದುದು ಕಂಡು ಬಂದಿತು.

ಜರ್ಮನ್ ಟೆಂಟ್‌ನಲ್ಲಿ ಸಿದ್ಧಪಡಿಸಿದ ಆಹಾರ ಮೇಳದ ಮಳಿಗೆ ರಾಯಚೂರು ಉತ್ಸವ ಮತ್ತು ಕೃಷಿ ಮೇಳದ ವಿಶೇಷ ಆಕರ್ಷಣೆ ಆಗಿತ್ತು. ಇಲ್ಲಿ 100ಕ್ಕೂ ಹೆಚ್ಚು ಆಹಾರ ಮಳಿಗೆಗಳು ಇದ್ದವು.

ಉತ್ಸವದ ನಿಮಿತ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಂಗಳದಲ್ಲಿ ಇರಿವೆಗಳು ಹರಿದಾಡಿದಂತೆ ಜನರ ದಂಡೇ ಸೇರಿತ್ತು.

ಉತ್ಸವದ ನಿಮಿತ್ತ ವಿವಿಧ ಇಲಾಖೆಗಳು ತೆರೆದಿದ ಮತ್ತು ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳದ ನಾನಾ ಮಳಿಗೆಗಳ ಮುಂದೇ ಜನದಟ್ಟಣೆ ಕಾಣಿಸಿತು.

ಉತ್ಸವದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನರು ಸೇರಿ ರಾಯಚೂರು ಉತ್ಸವ ಮತ್ತು ಕೃಷಿ ಮೇಳದ ಎರಡೂ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗಿಯಾದರು.

ತಿಂಡಿ ತಿನಿಸುಗಳು, ಬಟ್ಟೆ ಅಂಗಡಿ ಸೇರಿದಂತೆ ಅನೇಕ ಬಗೆಯ ಅಂಗಡಿಗಳ ಮುಂದೆಯೂ ಜನರು ಸೇರಿ ತಮಗೆ ಬೇಕಾದ ವಸ್ತುಗಳನ್ನು ತಿಂಡಿಗಳನ್ನು ಖರೀದಿಸಿ ಸಂಭ್ರಮಿಸಿದರು.

ಕೃಷಿ ವಿವಿಯ ಕೃಷಿ ಮೇಳದ ಆವರಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳಾದ ಯುವನಿಧಿ, ಶಕ್ತಿ ಯೋಜನೆ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. ಜಿಲ್ಲಾ ಆಯುಷ್ಯ ಇಲಾಖೆಯಿಂದ ಆಯುರ್ವೇದ ಆರೋಗ್ಯ ಸೌಲಭ್ಯಗಳ ಕುರಿತು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೂರ್ಣಿಮಾ ಆಯುರ್ವೇದ ಮಹಾವಿದ್ಯಾಲಯದ, ಬಸವ ಅಕ್ಕು ಅಕಾಡೆಮಿ ಹಾಗೂ ರಾಯಚೂರು ರಸಾಯನಿಕ ತಯಾರಕರ ಸಂಘದಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರಗಳು ನಡೆದವು. ಅಂಚೆ ವಿಭಾಗದಿಂದ ಒಂದು ಸೂರು–ಹಲವು ಯೋಜನೆಗಳ ಕುರಿತು ಅರ್ಹ ಫಲಾನುಭಗಳಿಗೆ ಜಾಗೃತಿ ಮೂಡಿಸಲಾಯಿತು. ರಾಯಚೂರು ಅಕ್ಕಿ ಮಾಲೀಕರ ಸಂಘದಿಂದ ವಿವಿಧ ತಳಿಯ ಅಕ್ಕಿಗಳ ಪ್ರದರ್ಶನ ನಡೆಯಿತು.

ರಾಯಚೂರು ನಗರದ ಸೆಲ್ಕೋ ಫೌಂಡೇಶನ್ ವತಿಯಿಂದ ಸೌರ ಬೆಂಬಲಿತ ಜೀವನೋಪಾಯ ಪರಿಹಾರ ಪ್ರದರ್ಶನ ಹಾಗೂ ರೈತರಿಗೆ ಉತ್ತಮ ಗುಣಮಟ್ಟದ ಬೀಜಗಳ ಕುರಿತು ರಾಷ್ಟ್ರೀಯ ಬೀಜ ನಿಗಮ, ಕರ್ನಾಟಕ ರಾಜ್ಯ ಮತ್ತು ಸಾವಯವ ಪ್ರಮಾಣ ಸಂಸ್ಥೆಯಿಂದ ಜಾಗೃತಿ ಮೂಡಿಸಲಾಯಿತು.

ಖಾದಿ ವಸ್ತು ಪ್ರದರ್ಶನ ಹಾಗೂ ಮಾರಾಟ, ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಜವಳಿ ವಸ್ತು ಪ್ರದರ್ಶನ ಹಾಗೂ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಂಘಗಳಿಂದ ನಂದಿನಿ ಉತ್ಪಾದನೆಗಳಾದ ಹಾಲು, ಮೊಸರು, ಮೈಸೂರ್ ಪಾಕ್, ಹಾಲಿನ ಪೇಡ, ಹಾಲಿನ ಕೇಸರ್, ಬೆಲ್ಲದ ಓಟ್ಸ್ ಮತ್ತು ನಟ್ಸ್ ಬರ್ಫಿ, ಗುಡ್ ಲೈಫ್ ಉತ್ಪಾದನೆಗಳ ಪರಿಚಯವನ್ನು ಸಾರ್ವಜನಿಕರಿಗೆ ಮಾಡಲಾಯಿತು.

# ಜನರ ಅಭಿವೃದ್ಧಿಗಾಗಿಯೇ ಗ್ಯಾರಂಟಿ ಯೋಜನೆಗಳು ಜಾರಿ: ಎಚ್.ಎಂ.ರೇವಣ್ಣ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು:

ರಾಜ್ಯದ ಜನರ ಅಭಿವೃದ್ಧಿಯನ್ನೇ ಮುಖ್ಯ ಗುರಿಯಾಗಿಸಿಕೊಂಡು ರಾಜ್ಯ ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದೆ. ಈ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯದ ರಾಜ್ಯದ 31 ಜಿಲ್ಲೆಗಳ ಪೈಕಿ ಈಗಾಗಲೇ 21 ಜಿಲ್ಲೆಗಳಲ್ಲಿ ಗ್ಯಾರಂಟಿ ಯೋಜನೆಗಳ ಮಾಹಿತಿಯ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯಾಧ್ಯಕ್ಷರಾದ ಎಚ್.ಎಂ.ರೇವಣ್ಣ ಹೇಳಿದರು.

ಫೆ.07ರ ಶನಿವಾರ ದಂದು ನಗರದ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಸಿಲ್ವರ್ ಜುಬ್ಲಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮಾಜಿ ಪ್ರಧಾನಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮವು ದೇಶದ ಬಡವರ ಜೀವನದಲ್ಲಿ ಸಾಕಷ್ಟು ಬದಲಾವಣೆ ತಂದಿತು. ದೇವರಾಜ ಅರಸು ಅವರ ಉಳುವವನೇ ಭೂಮಿಯ ಒಡೆಯ ಎನ್ನುವ ಕಾಯ್ದೆ ಜಾರಿಯಿಂದಲೂ ಕ್ರಾಂತಿ ನಡೆಯಿತು. ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಹಿಂದಿನ ಅವಧಿಯಲ್ಲಿ 150ಕ್ಕೂ ಹೆಚ್ಚು ಭರವಸೆ ನೀಡಿ ಅವುಗಳನ್ನು ಸಾಕಾರಗೊಳಿಸಿದ ಮಹತ್ವದ ಎಲ್ಲ ಕಾರ್ಯಗಳನ್ನು ರಾಜ್ಯ ಸರ್ಕಾರವು ಈಗ ವಿವಿಧ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಮಾಡುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಶಕ್ತಿಯೋಜನೆಯಡಿ 634 ಕೋಟಿ ಉಚಿತ ಪ್ರಯಾಣವು ದಾಖಲೆಯಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರವು 16,369 ಕೋಟಿ ರೂ.ಗಳನ್ನು ಅನುದಾನ ನೀಡಿದೆ. ಶಕ್ತಿ ಯೋಜನೆಗೆ ವಾರ್ಷಿಕ 52 ಕೋಟಿ ರೂ. ವ್ಯಯವಾಗುತ್ತಿದೆ. ಮನೆಯ ಯಜಮಾನಿಗೆ ಪ್ರತಿ ತಿಂಗಳು 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯದಲ್ಲಿ 1.24 ಕೋಟಿ ಫಲಾನುಭವಿಗಳು ಈ ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಈ ಯೋಜನೆಗೆ ಸರ್ಕಾರವು ಈವರೆಗೆ 57,464 ಕೋಟಿ ರೂ.ಗಳನ್ನು ವ್ಯಯಿಸಿದೆ. ಯುವನಿಧಿ ಯೋಜನೆಯಡಿ ರಾಜ್ಯದಲ್ಲಿನ 2,98 ಲಕ್ಷ ಫಲಾನುಭವಿಗಳಿಗೆ ಇದುವರೆಗೆ 874 ಕೋಟಿ ರೂ. ವ್ಯಯ ಮಾಡಿದೆ. ಅನ್ನಭಾಗ್ಯ ಯೋಜನೆಯಡಿ ರಾಜ್ಯದಲ್ಲಿನ 4.08 ಕೋಟಿ ಫಲಾನುಭವಿಗಳಿಗೆ ಇದುವರೆಗೆ 16,574 ಕೋಟಿ ರೂ ವ್ಯಯವಾಗಿದೆ. ಗೃಹಜ್ಯೋತಿ ಯೋಜನೆಯಡಿ ರಾಜ್ಯದಲ್ಲಿನ 1.65 ಕೋಟಿ ಫಲಾನುಭವಿಗಳಿಗೆ ಇದುವರೆಗೆ 21,239 ಕೋಟಿ ರೂ. ವ್ಯಯ ಮಾಡಿದ್ದೇವೆ ಎಂದು ಅವರು ಗ್ಯಾರಂಟಿ ಯೋಜನೆಗಳ ಸಾಧನೆಯ ಬಗ್ಗೆ ತಿಳಿಸಿದರು.

# ಉನ್ನತ ತಾಂತ್ರಿಕ ಶಿಕ್ಷಣಕ್ಕಾಗಿ ಒಡಂಬಡಿಕೆ



• ಮಲ್ಲಮ್ಮ ನುಡಿ ವಾರ್ತೆ ಕಲ್ಬುರ್ಗಿ:

ಸರ್ ಸಿದ್ದಪ್ಪ ಕಂಬಳಿ ಸ್ಮಾರಕ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಪ್ರಸಿದ್ಧ ಟೊಯೋಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಲಿಮಿಟೆಡ್ ಕಂಪನಿಯೊಂದಿಗೆ ಸಂಸ್ಥೆಯಲ್ಲಿ ಉನ್ನತ ತಾಂತ್ರಿಕ ಶಿಕ್ಷಣವನ್ನು ತರಬೇತಿದಾರರಿಗೆ ನೀಡುವ ಉದ್ದೇಶದಿಂದ ಒಡಂಬಡಿಕೆಯನ್ನು ಇಂದು ಸಂಸ್ಥೆಯಲ್ಲಿ ನೆರವೇರಿಸಲಾಯಿತು. ಇದರ ಸದುಪಯೋಗವು ಮುಂದಿನ ದಿನಗಳಲ್ಲಿ ಎಲ್ಲಾ ತರಬೇತಿದಾರರಿಗೆ ಹೊಸ ತಂತ್ರಜ್ಞಾನದ ಅಳವಡಿಕೆಯನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಕಾರ್ಯಕ್ರಮದಲ್ಲಿ ಪ್ರಥಮವಾಗಿ ಸಂಸ್ಥೆಯ ತರಬೇತಿ ಅಧಿಕಾರಿಗಳಾದ ವೀರೇಶ ನಾರಾಯಣಪುರ ಸರ್ವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಸಂಸ್ಥೆಯ ಪ್ರಾಚಾರ್ಯರಾದ ಶ್ರೀಧರ್ ಎಚ್ ಪಾಟೀಲ್ ಸಂಸ್ಥೆಯ ಎಲ್ಲಾ ಕಾರ್ಯ ಚಟುವಟಿಕೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಟೊಯೋಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ ಪ್ರೈವೇಟ್ ಲಿಮಿಟೆಡನ ಹಿರಿಯ ಉಪಾಧ್ಯಕ್ಷರಾದ ಶ್ರೀ ಅಮಿತ್ ಜೈನ್ ಅವರು ತಮ್ಮ ಕಂಪನಿಯ ಕುರಿತು ನೌಕರರಿಗೆ ಒದಗಿಸುವ ಉನ್ನತ ತಾಂತ್ರಿಕ ತರಬೇತಿ ಮತ್ತು ಅನುಕೂಲತೆಗಳ ಕುರಿತು ಸವಿಸ್ತಾರವಾಗಿ ಹೇಳಿದರು. ಉಭಯ ಅಧಿಕಾರಿಗಳು ಪತ್ರಕ್ಕೆ ಸಹಿ ಹಾಕಿ ಒಡಂಬಡಿಕೆ ಮಾಡಿಕೊಂಡರು. ತೋಂಟದಾರ್ಯ ವಿದ್ಯಾಪೀಠ ಸಂಸ್ಥೆಯ ತರಬೇತಿ ಅಧಿಕಾರಿ ಜೆ ವಿ ಕೋರಿಯವರು ಸರ್ವರಿಗೂ ವಂದನೆಗಳನ್ನು ಸಲ್ಲಿಸಿದರು ಈ ಸಂದರ್ಭದಲ್ಲಿ ಟೊಯೋಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ ಲಿಮಿಟೆಡ್ ಇದರ ವ್ಯವಸ್ಥಾಪಕರಾದ ಸಂತೋಷ್ ಶೆಟ್ಟಿ ವಿಟ್ಲ ಹಾಗೂ ಹಿರಿಯ ಅಧಿಕಾರಿ ಪ್ರವೀಣ್ ಕುಮಾರ್ ಮತ್ತು ಸರ್ ಸಿದ್ದಪ್ಪ ಕಂಬಳಿಯ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ತಪ್ಪದೇ ಮಕ್ಕಳಿಗೆ ದಡಾರ ರುಬೆಲ್ಲಾ ಲಸಿಕೆ ಹಾಕಿಸಿ: ಡಾ.ಯಲ್ಲಾ ರಮೇಶ್ ಬಾಬು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ದಡಾರ–ರುಬೆಲ್ಲಾ ಲಸಿಕೆ ಹಾಕಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಬೇಸಿಗೆ ಪ್ರಾರಂಭವಾಗುತ್ತಿದ್ದು, ಮಕ್ಕಳಲ್ಲಿ ದಡಾರ ಪ್ರಕರಣಗಳು ಕಂಡುಬರುವ ಸಾಧ್ಯತೆ ಹೆಚ್ಚು. 12 ಮಾರಕ ಕಾಯಿಲೆಗಳ ವಿರುದ್ಧ ನಿಯಮಿತವಾಗಿ ಲಸಿಕೆ ಪಡೆಯಲು ಪೋಷಕರು ಮಕ್ಕಳಿಗೆ ತಪ್ಪದೇ ದಡಾರ ರುಬೆಲ್ಲಾ ಲಸಿಕೆ ಹಾಕಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ. **ಲಕ್ಷಣಗಳು:**

ದಡಾರದಲ್ಲಿ ತೀವ್ರ ಜ್ವರ, ಮೂಗು ಸೋರುವಿಕೆ, ಕೆಮ್ಮು, ಕಣ್ಣು ಕೆಂಪಾಗುವುದು ಮತ್ತು ಮುಖದಿಂದ ಆರಂಭವಾಗಿ ದೇಹದಾದ್ಯಂತ ಹರಡುವ ಕೆಂಪು ದದ್ದುಗಳು ಕಂಡುಬರುತ್ತವೆ. ರುಬೆಲ್ಲಾದಲ್ಲಿ ಸೌಮ್ಯ ಜ್ವರ, ದದ್ದುಗಳು, ತಲೆನೋವು, ಕಣ್ಣಿನ ಉರಿ ಲಕ್ಷಣ ಕಂಡುಬರುತ್ತವೆ.

ದಡಾರ–ರುಬೆಲ್ಲಾ ಲಸಿಕೆಯು ದಡಾರ ಮತ್ತು ರುಬೆಲ್ಲಾ ಕಾಯಿಲೆಗಳಿಂದ ಮಕ್ಕಳನ್ನು ರಕ್ಷಿಸುವ ಒಂದು ಪರಿಣಾಮಕಾರಿ ಲಸಿಕೆಯಾಗಿದೆ. ಇದು ಮಕ್ಕಳಲ್ಲಿ ಜ್ವರ, ದದ್ದು, ನ್ಯುಮೋನಿಯಾ, ಮತ್ತು ಮೆದುಳಿನ ಸೋಂಕನ್ನು ತಡೆಯುತ್ತದೆ. ಈ ಲಸಿಕೆ, ಗರ್ಭಾವಸ್ಥೆಯಲ್ಲಿ ರುಬೆಲ್ಲಾದಿಂದ ಉಂಟಾಗುವ ಜನ್ಮಜಾತ ದೋಷಗಳನ್ನು ತಡೆಗಟ್ಟಲು ಸಹಕಾರಿಯಾಗಿದೆ. ಲಸಿಕೆ ವಿಧಾನ: ಇದು ಲೈವ್ ಅಟೆನ್ಯೂಯೇಟೆಡ್ ಲಸಿಕೆಯಾಗಿದ್ದು, ಇದನ್ನು ಇಂಜೆಕ್ಷನ್ ಮೂಲಕ ಸಾಮಾನ್ಯವಾಗಿ ಮೇಲಿನ ತೋಳಿನಲ್ಲಿ ನೀಡಲಾಗುತ್ತದೆ. 9 ತಿಂಗಳಿಂದ 12 ತಿಂಗಳ ನಡುವೆ ಮೊದಲನೇ ಡೋಸ್, ಎರಡನೇ ಡೋಸ್ 16 ತಿಂಗಳಿನಿಂದ 24 ತಿಂಗಳ ವರಗೆ ಮಕ್ಕಳಿಗೆ ನೀಡಲಾಗುವುದು. ಎರಡು ಡೋಸ್‌ಗಳ ನಂತರ ಈ ಲಸಿಕೆಯು ದಡಾರ ಮತ್ತು ರುಬೆಲ್ಲಾ ವಿರುದ್ಧ ಸುಮಾರು ಶೇ.97 ಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ಕೆಲವೊಮ್ಮೆ ಲಸಿಕೆ ಹಾಕಿದ ಸ್ಥಳಗಳಲ್ಲಿ ನೋವು ಜ್ವರ ಅಥವಾ ಸೌಮ್ಯವಾದ ದದ್ದುಗಳು ಕಂಡು ಬರಬಹುದು. ಇವು ಕೆಲವೇ ದಿನಗಳಲ್ಲಿ ಕಡಿಮೆಯಾಗುತ್ತವೆ.

# ವಿವಿಧೆಡೆ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 110/11ಕೆ.ವಿ ಬಿಸಿಲಹಳ್ಳಿ ವಿದ್ಯುತ್ ಉಪ–ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಎಫ್–63 ಹಾಗು ಎಫ್–64 ಫೀಡರ್ ಗಳಲ್ಲಿ ಲಿಂಕ್–ಲೈನ್ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಫೆ.09 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:*

ಎಫ್–63 ವ್ಯಾಪ್ತಿಯ ರೂಪನಗುಡಿ, ಗ್ರಾಂಡ್ ಫಂಕ್ಷನ್ ಹಾಲ್, ವೆಂಕಟರಮಣ ನಗರ, ನಬೀ ಕಾಲೋನಿ, ಅಂಜಿನಪ್ಪ ನಗರ, ಶ್ರೀರಾಂಪುರ ಕಾಲೋನಿ, ಗೋನಾಳ್, ವರಬಸಪ್ಪ ಗುಡಿ ಹಾಗೂ ಮುಂತಾದ ಏರಿಯಾಗಳು.

ಎಫ್–64 ವ್ಯಾಪ್ತಿಯ ಎಸ್.ಆರ್.ಎಂ ಲೇ ಔಟ್, ಸಂಸ್ಕೃತಿ ಶಾಲೆ, ವಿಶಾಲ ನಗರ, ಹನುಮಾನ್ ನಗರ, ಬಿ.ಗೋನಾಳ್, ಹೌಸಿಂಗ್ ಬೋರ್ಡ್, ವೆಂಕಟಲಕ್ಷ್ಮಿ ನಗರ, ಅಂಜಿನಪ್ಪ ನಗರ, ಎಸ್.ಆರ್.ಪಿ ಕಾಲೋನಿ, ಎಮ್.ಜಿ ರಸ್ತೆ, ಅನಂತಪುರ ರಸ್ತೆ, ಅಗಡಿ ಮಾರೆಪ್ಪ ಕಾಂಪೌಂಡ್, ದತ್ತ ಸಾಯಿ ನಗರ, ಆಶ್ರಯ ಕಾಲೋನಿ.

ಎಫ್–52 ವ್ಯಾಪ್ತಿಯ ತಿರುಮಲ ನಗರ ಕ್ಯಾಂಪ್, ಶಂಕರಬಂಡೆ, ಇಬ್ರಾಹಿಂಪುರ, ಬಬ್ಬುಕುಂಟೆ, ಬುರನಾಯಕಹಳ್ಳಿ ಐ.ಪಿ ಫೀಡರ್ ಏರಿಯಾಗಳು. ಎಫ್–53 ವ್ಯಾಪ್ತಿಯ ತಿರುಮಲ ನಗರ ಕ್ಯಾಂಪ್, ಶಂಕರ ಬಂಡೆ, ಇಬ್ರಾಹಿಂಪುರ, ಬಬ್ಬುಕುಂಟೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಾಗಾಗಿ ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ಔಷಧ ಆರೋಗ್ಯ ಹಕ್ಕಿನ ಕಾಯ್ದೆ ಜಾರಿಗೆ ಆಗ್ರಹ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

2024ರ ಡಿಸೆಂಬರ್‌ನಲ್ಲಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಕಳಪೆ ಗುಣಮಟ್ಟದಔಷಧಗಳಿಂದಾಗಿಹಲವು ತಾಯಂದಿರ ಮರಣ ಸಂಭವಿಸಿದ ಘಟನೆ ರಾಜ್ಯವನ್ನೇ ಕಾಡಿದೆ. ಈ ಹಿನ್ನೆಲೆ ಕಳೆದ ಫೆಬ್ರವರಿ 2025ರಲ್ಲಿ 15 ಜಿಲ್ಲೆಗಳಲ್ಲಿ "ಆರೋಗ್ಯ ಹಕ್ಕಿನ ಜಾಥಾ" ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು.

ಆದರೆ ಇದುವರೆಗೆ ಯಾವುದೇ ಸ್ಪಷ್ಟ ಉತ್ತರ ಸಿಗದ ಕಾರಣ, ಈ ವರ್ಷ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಜಾಥಾ ನಡೆಸಲು ಜನಪರ ಸಂಘಟನೆಗಳು ನಿರ್ಧರಿಸಿವೆ ಎಂದು ವೀಣಾ ತಿಳಿಸಿದರು. ಬಳ್ಳಾರಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕೆಭವನದಲ್ಲಿ ಡ್ರಗ್ಸ್ ಆಕ್ಷನ್ ಫೋರಮ್ ವತಿಯಿಂದ ಸುದ್ದಿಗೋಷ್ಠಿ ನಡೆಸಲಾಯಿತು. ಈ ಸಂದರ್ಭದಲ್ಲಿ ಫೋರಮ್ ಪದಾಧಿಕಾರಿ ವೀಣಾ ಮಾತನಾಡಿ, ಫೆಬ್ರವರಿ 10ರಂದು ರಾಜ್ಯವ್ಯಾಪಿ "ಆರೋಗ್ಯ ಹಕ್ಕಿನ ಜಾಥಾ-2026"ಹಮ್ಮಿಕೊಳ್ಳಲಾಗುತ್ತಿದೆ ಎಂದು ಘೋಷಿಸಿದರು.

ನಾಲ್ಕುಪ್ರಮುಖಬೇಡಿಕೆಗಳುಸುದ್ದಿಗೋಷ್ಠಿಯಲ್ಲಿ "ಆರೋಗ್ಯ ಹಕ್ಕಿನ ಜಾಥಾ"ಯ ನಾಲ್ಕು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು:

ಚಿಕಿತ್ಸಾವೆಚ್ಚದಲ್ಲಿ ಶೇ.60-70ರಷ್ಟು ಹಣ ಔಷಧಗಳ ಮೇಲೆಯೇ ಖರ್ಚಾಗುತ್ತಿದೆ. ಆದ್ದರಿಂದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಹಾಗೂ ಉತ್ತಮ ಗುಣಮಟ್ಟದ ಔಷಧಗಳನ್ನು ಒದಗಿಸಬೇಕು. ಸರ್ಕಾರಿ ವೈದ್ಯರು ಹೊರಗಡೆ ಔಷಧ ಖರೀದಿಗೆ ಚೀಟಿ ಬರೆಯಬಾರದು. ತಮಿಳುನಾಡು, ಕೇರಳ ಹಾಗೂ ರಾಜಸ್ಥಾನ ರಾಜ್ಯಗಳಂತೆ ಕರ್ನಾಟಕದಲ್ಲೂ ಉಚಿತ ಔಷಧ ವ್ಯವಸ್ಥೆ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿರುವುದಕ್ಕೆ ಜಿಲ್ಲಾ ಆಸ್ಪತ್ರೆಗಳ ಎದುರು ಖಾಸಗಿ ಔಷಧ ಅಂಗಡಿಗಳ ಸಾಲುಗಳೇ ಸಾಕ್ಷಿ ಎಂದು ಆರೋಪಿಸಿದರು.

ಕರ್ನಾಟಕದಲ್ಲಿ "ಆರೋಗ್ಯ ಹಕ್ಕಿನ ಕಾಯ್ದೆ"ಯನ್ನು ತಕ್ಷಣ ಜಾರಿಗೆ ತರಬೇಕು. ದೇಶದಲ್ಲಿ ರಾಜಸ್ಥಾನ ರಾಜ್ಯ ಮಾತ್ರ ಈ ಕಾಯ್ದೆಯನ್ನು ಜಾರಿಗೆ ತಂದಿದ್ದು, ನೇಪಾಳ, ಥೈಲ್ಯಾಂಡ್ ಸೇರಿದಂತೆ 73ಕ್ಕೂ ಹೆಚ್ಚು ದೇಶಗಳಲ್ಲಿ ಆರೋಗ್ಯ ಸೇವೆ ಹಕ್ಕಿನ ರೂಪದಲ್ಲಿ ಜಾರಿಯಲ್ಲಿದೆ ಎಂದು ಹೇಳಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಶುಲ್ಕಗಳಿಗೆ ಯಾವುದೇ ಮಿತಿ ಇಲ್ಲದ ಕಾರಣ ರೋಗಿಗಳು ತೀವ್ರ ಶೋಷಣೆಗೆ ಒಳಗಾಗುತ್ತಿದ್ದಾರೆ. ಇದು ಜನರನ್ನು ಬಡತನ ಮತ್ತು ಸಾಲದ ಕೂಪಕ್ಕೆ ತಳ್ಳುತ್ತಿದೆ. ಆಸ್ಪತ್ರೆ ಶುಲ್ಕಗಳಿಗೆ ಮಿತಿ ವಿಧಿಸುವುದು ರಾಜ್ಯ ಸರ್ಕಾರದ ಸಾಂವಿಧಾನಿಕ ಕರ್ತವ್ಯವಾಗಿದೆ ಎಂದು ಒತ್ತಾಯಿಸಿದರು.

ಸರ್ಕಾರಿಆಸ್ಪತ್ರೆಗಳಖಾಸಗೀಕರಣವನ್ನು ಸಂಪೂರ್ಣವಾಗಿ ಕೈಬಿಡಬೇಕು. ತುಮಕೂರು, ವಿಜಯನಗರ, ಕೋಲಾರ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ಗ್ರಾಮಾಂತರ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಕಕಕ ಮಾದರಿಯಲ್ಲಿ ಖಾಸಗೀಕರಣಕ್ಕೆ ಮುಂದಾಗಿರುವುದು ಜನವಿರೋಧಿ ಹಾಗೂ ಸಂವಿಧಾನ ವಿರೋಧಿಯಾಗಿದೆ. ವಿಜಯಪುರದಲ್ಲಿ ನೀಡಿದ ಭರವಸೆಯಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಖಾಸಗೀಕರಣವನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಆರೋಗ್ಯ ಎಲ್ಲರ ಹಕ್ಕಾಗಬೇಕು

ಆರೋಗ್ಯವು ಲಿಂಗ, ಜಾತಿ, ವರ್ಗ ಬೇಧವಿಲ್ಲದೆ ಎಲ್ಲರ ಹಕ್ಕಾಗಬೇಕು. ಬಡವರು, ಕಾರ್ಮಿಕರು, ದಲಿತರು, ಆದಿವಾಸಿಗಳು, ಸ್ಲಂ ನಿವಾಸಿಗಳು, ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ಸೇರಿದಂತೆ ಎಲ್ಲ ಶೋಷಿತ ಸಮುದಾಯಗಳಿಗೆ ಸಮಾನ ಹಾಗೂ ಉಚಿತ ಆರೋಗ್ಯ ಸೇವೆ ಒದಗಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವೀಣಾ, ಚಂದ್ರಕುಮಾರಿ, ಪ್ರವೀಣ್ ಬಾನು, ಪೂಜಾ, ಪದ್ಮ, ವೆಂಕಟ್ರಶುಲು, ನಾಗರಾಜ್, ಅಫಿನ್ ದಯಮಾ ಸೇರಿದಂತೆ ಹಲವು ಜನಪರ ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಪೊಲೀಸ್ ದಾಳಿ 4 ಸಾವಿರ ಚೀಲ ಯೂರಿಯಾ ಅಕ್ರಮ ಸಂಗ್ರಹ ಪತ್ತೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ಈಗ ಒಂದಲ್ಲ ಒಂದು ಅಕ್ರಮ ಸಂಗ್ರಹದ ಪ್ರಕರಣಗಳು ಬೆಳಕಿಗೆ ಬರತೊಡಗಿವೆ. ಅಕ್ರಮ ಅದಿರು ಸ್ಟಾಕ್ ಮಾಡಿದ್ದಾಯ್ತು. , ಮರಳು, ಗ್ರಾವೆಲ್ ಸ್ಟಾಕ್ ಮಾಡಿದ್ದಾಯ್ತು, ಪಡಿತರ ಅಕ್ಕಿಯೂ ಸಹ. ಈಗ 50 ಕಿಲೋ ತೂಕದ ರಸಾಯನಿಕ ಗೊಬ್ಬರದ 4 ಸಾವಿರದ 65 ಚೀಲ ಯೂರಿಯಾವನ್ನು ಅಕ್ರಮವಾಗಿಸಂಗ್ರಹ ಮಾಡಿರುವುದು ಪತ್ತೆಯಾಗಿದೆ.

ಕಳೆದ ವರ್ಷ ಮುಂಗಾರಿನಲ್ಲಿ ರೈತರು ತಮ್ಮ ಬೆಳೆಗಳಿಗಾಗಿ ಯೂರಿಯಾ,

ಯೂರಿಯಾ ಎಂದು ಬಡಿದು-ಕೊಂಡು. ಮಾರುಕಟ್ಟೆಯಲ್ಲಿ ಅಗತ್ಯತೆಗೆ ತಕ್ಕಂತೆ ದೊರೆ-ಯದಾದಾಗ ಅಕ್ರಮ ಕೂಟ 265 ರೂಗಳ ಯೂರಿಯಾವನ್ನು 500 ರೂಗಳಂತೆ ಮಾರಾಟ ಮಾಡಿತು. ಇದರಿಂದ ರೈತರು ಸಂಕಷ್ಟಕ್ಕೆ ಈಡಾದರೆ, ಅಕ್ರಮ ಕೂಟ ಲಾಭ ಮಾಡಿಕೊಂಡಿತು.

ಇದರ ಸವಿ ಕಂಡ ಅಕ್ರಮ ಕೂಟ, ಸದ್ಯ ಮಾರುಕಟ್ಟೆಯಲ್ಲಿ ಈ ಯೂರಿಯಾ ಗೊಬ್ಬರಕ್ಕೆ ಬೇಡಿಕೆ ಇಲ್ಲ.

ಆದರೆ ಮುಂದಿನ ವರ್ಷದ ಮುಂಗಾರಿಗೆ ಈಗಲೇ ಅಕ್ರಮವಾಗಿ ಯೂರಿಯಾ ಸಂಗ್ರಹ ಮಾಡುವ ದಂಧೆ ಆರಂಭಗೊಂಡಿದೆ. ರೈತರಿಗೆ ಸೇರಬೇಕಾದ ಯೂರಿಯಾ ಕಾಳ ಸಂತೆಯಲ್ಲಿ ಮಾರಾಟಕ್ಕೆ ಸಜ್ಜಾಗುತ್ತಿತ್ತು.

ಬಳ್ಳಾರಿನಗರದ ಹೊರವಲಯದ ಮುಂಡ್ರಿಗಿ

ಇಂಡಸ್ಟ್ರಿಯಲ್ ಎರಿಯಾದಲ್ಲಿ ಭಾರಿ ಪ್ರಮಾಣದಲ್ಲಿ ಯೂ-ರಿಯಾ ರಸಗೊಬ್ಬರ ಸಂಗ್ರಹ ಮಾಡಿದ್ದು ನಿನ್ನೆ ಸಂಜೆ ಬೆಳಕಿಗೆ ಬಂದಿದೆ.

ಎಪಿಎಂಸಿ ಠಾಣೆಯ ಇನ್ಸ್‌ಪೆಕ್ಟರ್ ಮಹಮ್ಮದ್ ರಫಿ ಮತ್ತವರ ಸಿಬ್ಬಂದಿ ದಾಳಿ ಮಾಡಿದೆ. ನಂತರ ಇಲ್ಲಿಗೆ ಕೃಷಿ ಅಧಿಕಾರಿಗಳು ಸಹ ಬಂದಿದ್ದಾರೆ.

ಸ್ಟಾಕ್ ಮಾಡಿದ್ದಾರು:

ರೈಲ್ವೇ ವ್ಯಾಗಿನ್ ಗಳಿಗೆ ಬಂದ ಸ್ಟಾಕ್ ನ್ನು ನೇರವಾಗಿ ಇಲ್ಲಿಗೆ ವಿವಿಧ ಕಂಪನಿಗಳ ಯೂ-ರಿಯಾ ಗೊಬ್ಬರವನ್ನು ತಂದು ಅಕ್ರಮವಾಗಿ ಸ್ಟಾಕ್ ಮಾಡಿದ್ದರು. ಬಳ್ಳಾರಿಯ ಹುಸೇನ್ ನಗರ್ ಎಡ್ವಿನ್, ಸ

ಾಕೀರ್ ಮತ್ತು ರಮೇಶ ಎಂಬುವವರು. ರಮೇಶ ರಸಗೊಬ್ಬರದ ಡೀಲರ್ ಆಗಿದ್ದಾನಂತೆ. ಉಳಿದವರು ಈ ದಂದೆಯ ಪಾಲುದಾರರು.

ಸದ್ಯ ಪೊಲೀಸರು ಗೋಡೌನನ್ನು ಬಾಡಿಗೆಗೆ ಪಡೆದಿದ್ದ ಎಡ್ವಿನ್ ಎನ್ನುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಎಪಿಎಂಸಿ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

# ಮಾನವೀಯತೆ ಮೆರೆದ ಸಮಾಜ ಸೇವಕಿ ಎಂ ರಾಜೇಶ್ವರಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಸಂಗಮ್ ಸರ್ಕಲ್ ಅಂದರೆ ಒಳ್ಳೆಯ ಹೆಸರು ಇರುವ ಪ್ರದೇಶ ಆದರೆ ಇಲ್ಲಿ ಒಂದು ಘಟನೆ ನಡೆದಿದೆ. ಒಂದು ಹಸು ಸಾವನಪ್ಪಿ ಎರಡು ದಿನವಾದರೂ ಯಾರು ಸಹ ಎತ್ತ ಕಡೆ ಗಮನಹರಿಸದೆ ತಮ್ಮ ಪಾಡಿಗೆ ತಾವು ಇದ್ದರು. ದಿನನಿತ್ಯ ಈ ಸರ್ಕಲ್ ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಅಡ್ಡಾಡುವ ಸ್ಥಳ ಇದು. ಇದೇ ಪ್ರದೇಶದಲ್ಲಿ ಸರ್ಕಾರಿ ಆಸ್ಪತ್ರೆಯ ಸಹ ವಿದ್ದು. ಸಂಗನಕಲ್ಲು ಗ್ರಾಮದ ಸಮಾಜ ಸೇವಕಿ ಎಂ ರಾಜೇಶ್ವರಿ ಕಣ್ಣಿಗೆ ಸಾವನಪ್ಪಿದ ಹಸು ಕಂಡುಬಂದಿದ್ದು ಗಮನಹರಿಸಿದ್ದಾಳೆ. ಮಹಾನಗರ ಪಾಲಿಕೆ ಮೇಯರ್ ಗಾದೆಪ್ಪ ಅವರಿಗೆ ಸಾವನಪ್ಪಿದ ಹಸು ಬಗ್ಗೆ ದೂರವಾಣಿ ಮುಖಾಂತರ ತಿಳಿಸಿ ಅವರ ಸಹಕಾರದೊಂದಿಗೆ ಒಂದು ಜೆಸಿಬಿ ಯಂತ್ರವನ್ನು ತರಿಸಿ ಸಾವನಪ್ಪಿದ ಹಸುವನ್ನು ಸಾವಿರಾರು ಜನ ನೋಡುತ್ತಿದ್ದಂತೆ ಅಲ್ಲಿಂದ ತಳ್ಳಿಸಿದ್ದಾರೆ. ಆ ಮಹಿಳೆ ಸಮಾಜ ಸೇವಕಿಯನ್ನು ಗಮನಿಸಿದ ಸ್ಥಳೀಯರು. ಈ ಸಂದರ್ಭವಾಗಿ ಸಮಾಜ ಸೇವಕಿ ಎಂ ರಾಜೇಶ್ವರಿ ಮಾತನಾಡುತ್ತಾ ಪ್ರತಿಯೊಬ್ಬ ಮನುಷ್ಯ ಸಮಾಜ ಸೇವೆಯಲ್ಲಿ ತೊಡಗಿಸಬೇಕು ಕಷ್ಟದಲ್ಲಿರುವಂತ ಪ್ರತಿಯೊಬ್ಬರಿಗೆ ಸಹಕರಿಸಬೇಕು ಎಂದರು. ಮಾತು ಇಲ್ಲದ ಜೀವಿಗಳು ಸಾವನಪ್ಪಿದರೆ ಪ್ರತಿಯೊಬ್ಬರು ಮಾನವೀಯತೆಯನ್ನು ಅರಿಯಬೇಕೆಂದರು.

## ಕುರುಗೋಡು ಉತ್ಸವಕ್ಕೆ ಸಹಕರಿಸಿ

ಕುರುಗೋಡು (ಬಳ್ಳಾರಿ). ಇತಿಹಾಸದಲ್ಲೇ ಕುರುಗೋಡು ತಾಲೂಕ ಉತ್ಸವ ಸರ್ಕಾರದ ವತಿಯಿಂದ ನಡೆಯುತ್ತಿದ್ದು ನಮ್ಮ ಸಿಬ್ಬಂದಿ ಪ್ರತಿಯೊಬ್ಬರು ಸಹಕರಿಸಿ ಈ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಿ ಡಿ ಪಿ ಓ ಮೋಹನ್ ಕುಮಾರಿ ಮಾತನಾಡಿದ್ದಾರೆ. ಕುರುಗೋಡು ಪಟ್ಟಣದ ತಹಸಿಲ್ದಾರ್ ಕಚೇರಿ ಸಭಾಭವನದಲ್ಲಿ ಉತ್ಸವ ಬಗ್ಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಭೆಯನ್ನು ನಿರ್ವಹಿಸಿದ್ದಾರೆ. ಈ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯ ಕುರುಗೋಡು ತಾಲೂಕ ಮಟ್ಟದ ಅಂಗನವಾಡಿ ಕಾರ್ಯಕರ್ತರು ಜೊತೆ ಕಾರ್ಯಕ್ರಮ ಬಗ್ಗೆ ತಿಳಿಸಿದ್ದಾರು. ಎರಡು ದಿನ ಕುರುಗೋಡು ಉತ್ಸವಕ್ಕೆ ಯಾರು ಸಿಬ್ಬಂದಿ ರಜೆ ಹಾಕುವಂತಿಲ್ಲ ಪ್ರತಿಯೊಬ್ಬರು ಪಾಲ್ಗೊಂಡು ನಿಮ್ಮ ನಿಮ್ಮ ಜವಾಬ್ದಾರಿಯನ್ನು ಕಾರ್ಯ ನಿರ್ವಹಿಸಬೇಕೆಂದು ಮಾತನಾಡಿದ್ದಾರೆ. ಈ ಮೊದಲ ಬಾರಿಗೆ ಉತ್ಸವ ನಡೆಯುತ್ತಿದೆ ಪ್ರತಿಯೊಬ್ಬರು ಕೈಜೋಡಿಸಬೇಕೆಂದು ತಿಳಿಸಿದರು. ಕುರುಗೋಡು ಪಟ್ಟಣಕ್ಕೆ ತನ್ನದೇ ಆದ ಇತಿಹಾಸ ಇದೆ. ಈ ಪೂರ್ವಾಸಿದ್ಧತೆ ಸಭೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಪಾಲ್ಗೊಂಡರು.

## ಕನಕದುರ್ಗಮ್ಮ : ವಾರ್ಷಿಕ ಸಿಡಿಬಂಡಿ ರಥೋತ್ಸವ: ಪೂರ್ವಭಾವಿ ಸಿದ್ಧತಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಶ್ರೀ ಕನಕದುರ್ಗಮ್ಮ ದೇವಸ್ಥಾನದ ವಾರ್ಷಿಕ ಸಿಡಿಬಂಡಿ ರಥೋತ್ಸವು ಫೆ.24 ರಂದು ಜರುಗಲಿದ್ದು, ರಥೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಭಕ್ತರು, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ನೈರ್ಮಲೀಕರಣ, ಸ್ವಚ್ಛತೆ, ಬಂದೋಬಸ್ತ್, ಸಾರಿಗೆ ವ್ಯವಸ್ಥೆ ಒದಗಿಸುವುದು, ದರ್ಶನ-ಧಾರ್ಮಿಕ ಕಾರ್ಯಗಳು ಸೇರಿದಂತೆ ಇತರೆ ವಿಷಯಗಳ ಕುರಿತು ಚರ್ಚಿಸಲು ಫೆ.09 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಶ್ರೀ ಕನಕದುರ್ಗಮ್ಮ ದೇವಸ್ಥಾನದ ಯಾತ್ರಿ ನಿವಾಸದ ಸಭಾಂಗಣದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ಆಯೋಜಿಸಲಾಗಿದೆ.

ಬಳ್ಳಾರಿ ನಗರ ಶಾಸಕ ಭರತ್ ರೆಡ್ಡಿ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ಉಪಸ್ಥಿತಿಯಲ್ಲಿ ನಡೆಯಲಿದೆ ಎಂದು ಶ್ರೀ ಕನಕದುರ್ಗಮ್ಮ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

# ನೀರಿನ ಪೈಪ್ ಡ್ಯಾಮೇಜ್ ದುರಸ್ತಿ ಕಾರ್ಯ ಚುರುಕು



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರಕ್ಕೆ ಅಲ್ಲಿಪುರ ಕೆರೆಯಿಂದ ನೀರು ಸರಬರಾಜು ಮಾಡುವ ಪೈಪ್ ನಿನ್ನೆ ರಾತ್ರಿ ಪಾರ್ವತಿ ನಗರದ ಮುಖ್ಯ ರಸ್ತೆಯಲ್ಲಿ ಡ್ಯಾಮೇಜ್ ಆಗಿ ಅಪಾರ ಪ್ರಮಾಣದ ನೀರು ಹರಿಯಿತು. ತಕ್ಷಣ ದುರಸ್ತಿ ಮಾಡುವ ಕಾರ್ಯ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ಭರದಿಂದ ಸಾಗಿದೆ.

ಕಳೆದ 40 ವರ್ಷಗಳ ಹಿಂದೆ ಹಾಕಲಾಗಿದ್ದ ಪೈಪ್ ತನ್ನ ಗುಣಮಟ್ಟ ಕಳೆದುಕೊಂಡಿದ್ದು ಆಗಾಗ್ಗೆ ನೀರಿನ ಒತ್ತಡಕ್ಕೆ ಒಡೆಯುತ್ತಿತ್ತು. ನಿನ್ನೆ ಮತ್ತೆ ಒಡೆದು ಅಪಾರ ಪ್ರಮಾಣದ ನೀರು ಪೋಲಾಯ್ತು.

ಇಂದು ದುರಸ್ತಿ ಕಾರ್ಯ ಭರದಿಂದ ಸಾಗಿದೆ. ಕಾಮಗಾರಿ ಪರಿಶೀಲನೆ ಮಾಡಿದ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ ಅವರು ಮಾತನಾಡಿ, ಇದು ಹಳೇ ಪೈಪ್ ಆಗಾಗ್ಗೆ ಒಡೆಯುತ್ತಿದೆ. ಇಂದು ದುರಸ್ಥಿ ಮಾಡಿತ್ತೆ ನೀರು ಸರಬರಾಜು ಆರಂಭಿಸಲಿದೆ. ಈಗಾಗಲೇ ಈ ಪೈಪ್ ಗೆ ಪರ್ಯಾಯವಾಗಿ ಮತ್ತೊಂದು ಪೈಪ್ ಲೈನ್ ಅಳವಡಿಸಲಾಗಿದೆ. ಆದರೆ ಇದಕ್ಕೆ ಇನ್ನೂ ಡಿಸ್ಟ್ರುಬ್ಯೂಷನ್ ನ ಕಿರು ಪೈಪ್ ಗಳ ಅಳವಡಿಕೆ ಬಾಕಿ ಇದೆ. ಇನ್ನೂ ಒಂದೆರೆಡು ತಿಂಗಳು ಆಗಬಹುದು ಎಂದರು.

## ನಕಲಿ ಜನನ ಪತ್ರ ಸಲ್ಲಿಕೆ: ಪ್ರಕರಣ ದಾಖಲು

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸರ್ಕಾರಿ ಸೌಲಭ್ಯ ಪಡೆಯಲು ನಕಲಿ ಜನನ ಪ್ರಮಾಣ ಪತ್ರ ದಾಖಲೆ ಸೃಷ್ಟಿಸಿ ಸಲ್ಲಿಕೆ ಮಾಡಿದ ಮಹಿಳೆಯೊಬ್ಬರ ವಿರುದ್ಧ ಇಲ್ಲಿನ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಘಟನೆಯ ಹಿನ್ನೆಲೆ:

ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ವಂಶವೃಕ್ಷ ಪ್ರಮಾಣ ಪತ್ರ ಕೋರಿ ರಾಧಾ ಎಂಬುವವರು ಮೇಲ್ಮನವಿ ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆ ವೇಳೆ ಪ್ರತಿವಾದಿಯಾದ ಹಸೀನಾ ಅಲಿಯಾಸ್ ಅಶ್ವಿನಿ ಎಂಬುವವರು ಸಲ್ಲಿಸಿದ್ದ ಜನನ ಪ್ರಮಾಣ ಪತ್ರವನ್ನು ಪರಿಶೀಲಿಸಿದಾಗ ಅದು ನಕಲಿ ಎಂಬುದು ಬೆಳಕಿಗೆ ಬಂದಿದೆ.

ದಾಖಲೆ ತಿದ್ದಿದ ಆರೋಪ:

ಮೊಹಮ್ಮದ್ ಅಯಾನ್ (ತಂದೆ ಚಾಂದ್ ಬಾಷಾ) ಎಂಬುವವರ ಹೆಸರಿನಲ್ಲಿದ್ದ ಅಸಲಿ ಜನನ ಪ್ರಮಾಣ ಪತ್ರವನ್ನು ಅಕ್ರಮವಾಗಿ ತಿದ್ದಿ, ಶ್ರಾವಣಿ (ತಂದೆ ಮೊದಲ ಚೆಂಚಯ್ಯ, ತಾಯಿ ಅಶ್ವಿನಿ) ಎಂಬ ಹೆಸರಿಗೆ ನಿಯಮಬಾಹಿರವಾಗಿ ತಿದ್ದುಪಡಿ ಮಾಡಲಾಗಿದೆ ಎಂದು.

ಈ ವಂಚನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಹಸೀನಾ ವಿರುದ್ಧ ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ಪೊಲೀಸರು ಬಿ.ಎನ್.ಎಸ್ ಕಾಯ್ದೆ ಕಲಂ 138(4) ಜೊತೆಗೆ 3(5) ಅಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಸಾರ್ವಜನಿಕರು ಯಾವುದೇ ಸರ್ಕಾರಿ ಸೌಲಭ್ಯ ಪಡೆಯಲು ದಾಖಲೆಗಳನ್ನು ಸಲ್ಲಿಸುವ ಮುನ್ನ ಅವುಗಳ ನೈಜತೆಯನ್ನು ಸ್ವತಃ ಪರಿಶೀಲಿಸಿಕೊಳ್ಳಬೇಕು. ಮಧ್ಯವರ್ತಿಗಳ ಮಾತನ್ನು ನಂಬಿ ನಕಲಿ ದಾಖಲೆಗಳನ್ನು ಸಲ್ಲಿಸಿದರೆ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಹಿತಿ ಸಲ್ಲಿಸಲು ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗಳು ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ ಮಾಹಿತಿಯನ್ನು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕಚೇರಿಗೆ ಸಲ್ಲಿಸಬೇಕು ಎಂದು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 29-ಬಿ (8) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 8-ಬಿ (8) ರನ್ವಯ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಬಳ್ಳಾರಿ ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ವಾರ್ಷಿಕ ಮಹಾಸಭೆ ಜರುಗಿಸಿದ 7 ದಿನಗಳೊಳಗಾಗಿ ಸಲ್ಲಿಸಬೇಕಾಗಿತ್ತು.

ಆದರೆ, ಇನ್ನು ಬಹಳಷ್ಟು ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗಳು ಇಲ್ಲಿಯವರೆಗೆ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ ಮಾಹಿತಿ ಸಲ್ಲಿಸಿರುವುದಿಲ್ಲ. ಹಾಗಾಗಿ 2025-26 ನೇ ಸಾಲಿನ ಲೆಕ್ಕಪರಿಶೋಧನೆಗಾಗಿ ವಾರ್ಷಿಕ ಮಹಾಸಭೆಯಲ್ಲಿ ಲೆಕ್ಕಪರಿಶೋಧಕರ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ತಕ್ಷಣ ವಿಳಂಬಕ್ಕೆ ಅವಕಾಶ ನೀಡದೇ ಸಂಘದ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಅಧ್ಯಕ್ಷರ ರುಜುವಿನೊಂದಿಗೆ ವಾರ್ಷಿಕ ಮಹಾಸಭೆಯ ನಡವಳಿಯೊಂದಿಗೆ ಮಾಹಿತಿ ಸಲ್ಲಿಸಬೇಕು. ತಪ್ಪಿದಲ್ಲಿ ಕಾನೂನು ರೀತ್ಯಾ ಕ್ರಮವಹಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ರಮ ಜೋಳ ಸಂಗ್ರಹ ಗೋಡೌನ್‌ಗಳ ಮೇಲೆ ದಾಳಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ತಾಲೂಕಿನ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರೂಪನಗುಡಿ ಗ್ರಾಮದಲ್ಲಿ ಅಕ್ರಮವಾಗಿ ಜೋಳ ಸಂಗ್ರಹಿಸಲಾಗುತ್ತಿದ್ದ ಎರಡು ಗೋಡೌನ್‌ಗಳ ಮೇಲೆ ಕಂದಾಯ ಇಲಾಖೆ, ಆಹಾರ ನಾಗರಿಕ ಸರಬರಾಜು ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ದಾಳಿ ನಡೆಸಿವೆ.

ಎಸಿ ರಾಜೇಶ್ ಹೆಚ್.ಡಿ. ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ, ರೈತ-ರಿಂದ ಪಹಣಿ ದಾಖಲೆಗಳನ್ನು ಪಡೆದು ಅಕ್ರಮವಾಗಿ ಜೋಳ ಸಂಗ್ರಹಿಸಿಟ್ಟಿರುವುದು ಬೆಳಕಿಗೆ ಬಂದಿದೆ. ದಾಳಿ ವೇಳೆ ಅಧಿಕಾರಿಗಳು ಒಟ್ಟು 2400 ಜೋಳದ ಮೂಟೆಗಳನ್ನು ಜಪ್ತಿ ಮಾಡಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ, ರೈತರಿಂದ ಕಡಿಮೆ ಬೆಲೆಗೆ ಜೋಳ ಖರೀದಿಸಿ, ರೈತರ ಸೇವ ಸಹಕಾರ ಸಂಘದ ಮೂಲಕ ಹೆಚ್ಚಿನ ಬೆಂಬಲ ಬೆಲೆಗೆ ಮಾರಾಟ ಮಾಡುತ್ತಿದ್ದ ಸಂಘಟಿತ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿದೆ.

ಈ ಅಕ್ರಮ ಖರೀದಿ ಮಾರಾಟ ವ್ಯವಹಾರದಲ್ಲಿ ರೈತರ ಸೇವ ಸಹಕಾರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಿಬ್ಬಂದಿ ಭಾಗಿಯಾಗಿರುವ ಬಗ್ಗೆ ಗಂಭೀರ ಅನುಮಾನಗಳು ವ್ಯಕ್ತವಾಗಿವೆ.

ಈ ಸಂಬಂಧ ಪಿಡಿ ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಅಧಿಕಾರಿಗಳು ಸಂಪೂರ್ಣ ಜಾಲವನ್ನು ಪತ್ತೆಹಚ್ಚಲು ಕ್ರಮ ಕೈಗೊಂಡಿದ್ದಾರೆ.

# ಸ್ವಾಮೀಜಿಯ ಆಶೀರ್ವಾದ ಪಡೆದ ವಂದ್ರಿ ಕುಟುಂಬ ಸದಸ್ಯರು



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಾಂಚಾಲಿ ಪೀಠಾಧಿಪತಿ ಶ್ರೀ ವೀರಭದ್ರಶಿವಾಚಾರ್ಯ ಸ್ವಾಮೀಜಿಯ ಆಶೀರ್ವಾದ ಪಡೆದ ಜೆಡಿಎಸ್ ಪಕ್ಷದ ಬಳ್ಳಾರಿ ನಗರ ಘಟಕ ಅಧ್ಯಕ್ಷ ವಂದ್ರಿ ಕುಟುಂಬ ಸದಸ್ಯರು. ಬಳ್ಳಾರಿ ತಾಲ್ಲೂಕು ನಾಗೇನಹಳ್ಳಿ ಗ್ರಾಮದ ನಂಜುಂಡೇಶ್ವರ ಆಶ್ರಮಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಸ್ವಾಮಿಜೀವರನ್ನು ಆಶೀರ್ವಾದ ಪಡೆದಿದ್ದಾರೆ. ಸ್ವಾಮೀಜಿಗೆ ಸಂಬಂಧಪಟ್ಟ ಸುಮಾರು ಹತ್ತು ಮಠಗಳ ಪೀಠಗಳು ಬೆಳಗಾವಿ, ರಾಯಚೂರು, ಮಠಮಾರಿ, ಕಡಗಂಚಿ, ಗುಲ್ಬರ್ಗ ಇತರ ಪೀಠಗಳು ಇದ್ದಾವೆ ಎಂದು ತಿಳಿಸಿದ್ದಾರೆ. ಚಾಮರಾಜ ಸ್ವಾಮಿ, ಶರಣಯ್ಯ ಸ್ವಾಮಿ, ವಾಣಿ ವಂದ್ರಿ, ಸಂದೀಪ್, ಮೌನಿಕ ಇತರರು ಪಾಲ್ಗೊಂಡಿದ್ದರು.

# ಧಾರ್ಮಿಕ ಸುಸಂಸ್ಕೃತಿಯಿಂದ ಭಾರತ ವಿಶ್ವಗುರುವಾಗಿದ್ದು

## ನಮ್ಮ ಭಕ್ತರ ಸೇವೆಯೇ ನಮ್ಮ ಆದ್ಯತೆಯಾಗಲಿ: ಸದಾಶಿವ ಮಹಾಸ್ವಾಮಿಗಳು

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:




ಧಾರ್ಮಿಕ ಸುಸಂಸ್ಕೃತಿಯಿಂದ ಭಾರತ ವಿಶ್ವಗುರುವಾಗಿದ್ದು, ಅಂಥ ಸುಸಂಸ್ಕೃತ ಟೀಕಿನಮಠದ ಪರಂಪರೆ ಮುನ್ನೆಡೆಯಲಿ ಎಂದು ಹುಕ್ಕೇರಿ ಮಠದ ಸದಾಶಿವ ಮಹಾಸ್ವಾಮಿಗಳು ಹೇಳಿದರು. ನಗರದ ಟೀಕಿನಮಠದ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ನಿಮಿತ್ಯ ಚರಂತಿಮಠದ ಆವರಣದಲ್ಲಿ ಶನಿವಾರ ನಡೆದ ಸಂಸ್ಕೃತಿ ಚಿಂತನ ಸಮಾರಂಭದ ದಿವ್ಯ ಸಾನಿದ್ಯವನ್ನು ವಹಿಸಿ ಹಾನಗಲ್ ಶ್ರೀಕುಮಾರ ಶಿವಯೋಗಿಗಳ ಭಾವ ಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನಗಳನ್ನು ಸಲ್ಲಿಸಿ ಮಾತನಾಡಿದ ಅವರು ಆಧುನಿಕ ಸಮಾಜದಲ್ಲಿ ಪ್ರಶ್ನೆಮಾಡುವ ಕಾಲದಲ್ಲಿ ಭಕ್ತರ ಸೇವೆಯೇ ನಮ್ಮ ಆದ್ಯತೆಯಾಗಲಿ, ಟೀಕಿನಮಠ ನೂತನ ಶ್ರೀಗಳಾದ ಮಲ್ಲಿಕಾರ್ಜುನದೇಶಿಕರ್ ಸ್ವಾಮಿಗಳಿಗೆ ಬಾಗಲಕೋಟೆ ಜನರೆ ತಂದೆ ತಾಯಿಗಳು, ಸಮಾಜ ಸೇವೆ ಹಾಗೂ ಭಕ್ತರ ಸೇವೆಯೇ ಅವರ ಆದ್ಯತೆಯಾಗಿದ್ದು, ಟೀಕಿನಮಠದ ಗುರುಪಂರೆಯಲ್ಲಿ ಅವರ ಸಾಧನೆ ಸಾಗಲಿ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ ಬಾಗಲಕೋಟೆ ಶೈಕ್ಷಣಿಕ. ಔದ್ಯೋಗಿಕ. ಧಾರ್ಮಿಕ, ಸಾಂಸ್ಕೃತಿಕವಾಗಿ ಶ್ರೀಮಂತವಾಗಲು ಟೆಂಗಿನಮಠ-ಟೀಕಿನಮಠ ಕೊಡುವೆ ಅಪಾರವಾಗಿದೆ, ಸಂಸ್ಕಾರ ಸಂಸ್ಕೃತಿ, ಮಾನವಿಯ ಮೌಲ್ಯಗಳ ಅರಿವು ಬಹಳ ಮುಖ್ಯವಾಗಿದೆ, ಸ್ವಾರ್ಥದ ಬದುಕಿಗಿಂತ ಆತ್ಮತೃಪ್ತಿಯ ಶ್ರಮದ ಬದುಕಿನ ಅಗತ್ಯತೆ ಇದೆ ಎಂದರು.

ಜಮಖಂಡಿ ಶಾಸಕರಾದ ಜಗದೀಶ ಗುಡುಗುಂಟಿ ಮಾತನಾಡಿ ಮಾನವನನ್ನು ದೇವನಾಗಿ ಮಾಡುವ ಧರ್ಮ ಅದು ವೀರಶೈವ ಧರ್ಮ, ಎಲ್ಲರನ್ನು ಜೊತೆ-ಗೂಡಿ ಊಟಮಾಡುವ ಸಂಸ್ಕೃತಿ ನಮ್ಮದು, ವೀರಶೈವ ಲಿಂಗಾಯತ ಸಮಾಜದ ಸಂಸ್ಕೃತಿ ಸಂಸ್ಕಾರ ಉಳಿದು ಬೆಳೆಯಬೇಕು, ನೂತನ ಶೀಗಳಿಂದ ಟೀಕಿನಮಠದ ಪರಂಪರೆ ಮುಂದುವರೆಯಲಿ ಎಂದರು

ಬೆಳಗಾವಿ ವಿಶ್ರಾಂತ ಇಂಗ್ಲೀಷ್ ಪ್ರಾಧ್ಯಾಪಕರಾದ ಡಾ.ಗುರುದೇವಿ ಹುಲೆಪ್ಪನವರಮಠ ಅವರು ತಾಯಿ ತಂದೆ ಗುರು ಅತಿಥಿಗಳೇ ದೇವರು ವಿಷಯದಡಿ ಉಪನ್ಯಾಸ ಮಾಡಿ ತಂದೆ, ತಾಯಿ, ಗುರು ಬಂಧುಗಳು ದೇವರ ಸ್ವರೂಪಿಗಳಾಗಿದ್ದು ಎಲ್ಲ ಸಂಕಷ್ಟಗಳನ್ನು ಸಹಿಸಿ ಮಕ್ಕಳ ಶ್ರಯೋಭಿವೃದ್ಧಿಗೆ ಶ್ರಮಿಸುವ ತ್ಯಾಗಮಯಿಯಾಗಿದ್ದಾಳೆ. ತಾಯಿ ಮಗಿವಿನ ಹೃದಯವಾದರೆ ತಂದೆ ಮೆದುಳಿದ್ದಂತೆ. ಶಿಸ್ತು ಮತ್ತು ಸಂಯಮದ ಪ್ರತೀಕವಾಗಿ ಹೆಗಲ ಮೇಲೆ ಹೊತ್ತು ಜಗತ್ತನ್ನು ಪರಿಚಯಿಸುತ್ತಾನೆ. ಜೀವನಕ್ಕೆ ದಾರಿ ತೋರಿ ತಿದ್ದಿ ಬುದ್ದಿ ಹೇಳುವ ಗುರುವನ್ನು, ಮನೆಗೆ ಬಂದ ಅತಿಥಿಯನ್ನು ಗೌರವಿಸಿ ಸತಗಕರಿಸುವುದು ನಮ್ಮ ಸಂಸ್ಕೃತಿಯಾಗಿದೆ ಎಂದರು. ಬೆಳಗಾವಿ ಸಾಹಿತಿಗಳಾದ ಸುನಂದಾ ಎಮ್ಮಿ ಮಾನವ "ಕುಲಂ ತಾನೊಂದೇ ವಲಂ" ವಿಷಯದಡಿ ಉಪನ್ಯಾಸ ನೀಡಿ ಇದು ನಮ್ಮ ಹಿರಿಯರು ತಿಳಿಸಿಕೊಟ್ಟ ವಿಚಾರದಾರೆಯಾಗಿದೆ. ನಾಗರಿಕತೆಗಳು ಹುಟ್ಟುವ ಮೊದಲೇ ಇದ್ದ ಸನಾತನರಲ್ಲಿ ಈ ಕಲ್ಪನೆ ಇತ್ತು ಎನ್ನುವುದು ಹೆಮ್ಮೆಯ ವಿಚಾರ. ವಿದೇಶಿ ಪ್ರಾವಸಿಗರು ಚಿಂತನಕಾರರು ಭಾರತಿಯರು ಇಡೀ ಪ್ರಪಂಚವೇ ನಮ್ಮ ಕುಟುಂಬ ಎಂಬ ಭಾವನೆ ಉಳ್ಳವರು ಎಂದು ಹೇಳಿರುವುದು ನಮ್ಮ ಆಚಾರಗಳು ಇಡೀ ಜಗತ್ತನ್ನು ಆವರಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಭಾರತವು ಆಧ್ಯಾತ್ಮದ ಬೇರಿನ ಮೇಲೆ ನಿಂತಿರುವುದರಿಂದ ವಿಶ್ವಗುರುವಾಗಿದ್ದು, ಇಲ್ಲಿ ಎಲ್ಲರೂ ಒಂದು ಎಂಬ ಚಿಂತನೆಯಿಂದ ಪರಕೀಯರನ್ನೂ ಮನೆಯ ಮಕ್ಕಳಂತೆ ನೋಡಿ ಎಲ್ಲ ಆಕ್ರಮಣಗಳನ್ನು ಎದುರಿಸಿದ್ದೇವೆ ಹೊರತು ಯಾರ ಮೇಲು ಆಕ್ರಮಣ ಮಾಡಿ ಹಿಂಸಿಸಿರುವ ಸನ್ನಿವೇಶಗಳು ಇಲ್ಲ ಎಂದರು. ಜಿಲ್ಲಾ ಪಂಚಾಯತ ಕಾರ್ಯನಿರ್ವಾಹನ ಅಧಿಕಾರಿ ಶಶಿಧರ ಕುರೇರ ಮಾತನಾಡಿ ಸಂಸ್ಕೃತಿ ಎಂದರೆ ಆಡಂಭರದ ಜೀವನವಲ್ಲ, ಮಾನವೀಯ ಮೌಲ್ಯಗಳನ್ನು ಮತ್ತು ಧನಾತ್ಮಕ ಚಿಂತನೆಗಳನ್ನು ಬೆಳಸಿಕೊಳ್ಳುವುದಾಗಿದೆ. ಶಿಕ್ಷಣಕದಿಂದ ಜ್ಞಾನಿಯಾಗುತ್ತಿದ್ದೇವೆ ಆದರೆ ಸಂಸ್ಕೃತಿ ಕಡಿಮೆಯಾಗುತ್ತಿದೆ. ಹುಟ್ಟಿನಿಂದಲೇ ಮಕ್ಕಳಲ್ಲಿ ಸಂಸ್ಕೃತಿಯ ಕಲಿಕೆ ಮುಖ್ಯವಾಗಿದ್ದು ಶಿಕ್ಷಣದ ಜೊತೆಗೆ ಸಂಸ್ಕೃತಿಯನ್ನು ಮಕ್ಕಳಲ್ಲಿ ಬೆಳೆಸುವ ಕಾರ್ಯವನ್ನು ಪಾಲಕರು ಮತ್ತು ಗುರುಗಳು ಮಾಡಬೇಕು ಎಂದರು. ಮೇಡಿಕಲ್ ಕಾಲೇಜು ಆಡಳಿತ ಮಂಡಳಿ ಕಾರ್ಯಾದ್ಯಕ್ಷ ಅಶೋಕ ಸಜ್ಜನ ಬೇವೂರ ಸ್ವಾಗತಿಸಿ ಮಾತನಾಡಿದ ಅವರು ಬಿ.ವಿ.ವಿ.ಸಂಘದ ಫಾರ್ಮಸಿ, ಮೇಡಿಕಲ್ ಕಾಲೇಜು ಹಾಗೂ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಗೆ ಕಾರಣಿಕ ಯುಗಪುರುಷ ಶ್ರೀ ಕುಮಾರ ಮಹಾಸ್ವಾಮಿಗಳ ಹೆಸರನ್ನು ಇಟ್ಟು ಪೂಜ್ಯರನ್ನು ಅಜರಾಮರ ಮಾಡಿರುವವರು ಡಾ.ವೀರಣ್ಣ ಚರಂತಿಮಠರವರು, ಇಡೀ ವೀರಶೈವ ಲಿಂಗಾಯತ ಸಮುದಾಯ ಅವರಿಗೆ ಚಿರಋಣಿಯಾಗಿದೆ ಎಂದರು. ವೇದಿಕೆ ಮೇಲೆ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಎರಡೆತ್ತಿನಮಠದ ಸಿದ್ಧಲಿಂಗ ಮಹಾಸ್ವಾಮಿಗಳು, ಹುಬ್ಬಳ್ಳಿಯ ರುದ್ರಾಕ್ಷಿಮಠದ ಬಸವಲಿಂಗ ಮಹಾಸ್ವಾಮಿಗಳು, ಶೇಗುಣಸಿಯ ವಿರಕ್ತ ಮ ಠದ ಡಾ.ಮಹಾಂತಪ್ರಭು ಮಹಾಸ್ವಾಮಿಗಳು, ಬಸವನ ಬಾಗೇವಾಡಿಯ ವಿರಕ್ತಮಠದ ಸಿದ್ಧಲಿಂಗ ಮಹಾಸ್ವಾಮಿಗಳು, ಬೀಳಗಿ-ಹಲಗಲಿ ಕಲ್ಮಠದ ಗುರುಪಾದ ಶಿವಾಚಾರ್ಯ ಸ್ವಾಮಿಗಳು, ಕುಂದರಗಿಯ ಚರಂತಿಮಠದ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಆಲಮಟ್ಟಿಯ ಪುರವರ ಹಿರೇಮಠದ ಡಾ.ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ತಾರಿಹಾಳದ ಅಡವಿಸಿದ್ಧೇಶ್ವರ ಮಠದ ಅಡಿವೀಶ್ವರ ದೇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದ ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿಗಳಾದ ಮಹೇಶ ಎನ್.ಅಥಣಿ, ಪರಮೇಶ್ವರ ಮೂದೂರ, ವಿಶ್ವಾನಾಥ ಕಳಸ, ಪ್ರಶಾಂತ ಉಗರಗೋಳ, ಸಂಗಪ್ಪ ಕೋಲಾರ, ಮಲ್ಲಪ್ಪ ಸಂಗಮ, ಅಶೋಕ ಪ್ರಭುಗೋಳ, ರಾಚಪ್ಪ ಪಟ್ಟದ, ರುದ್ರಪ್ಪ ಕತ್ತಿ, ರವಿ ಪಟ್ಟದ, ವೀರಯ್ಯಾ ಹಿರೇಮಠ, ಎಸ್.ಬಿ.ಕರಬಾಶೆಟ್ಟಿ, ಮಲ್ಲುರೋಣದ, ವೀರಣ್ಣ ಅಳ್ಳಿಮಟ್ಟಿ, ಶರಣಪ್ಪ ಕೇರೂರ, ಬಸಯ್ಯಾ ಬಿಜಕಳ್ಳಿಮಠ. ಶರಣಪ್ಪ ಕೆರೂರ, ಪಾಲ್ಗೊಂಡಿದ್ದರು.

# ಜಾತಿ ನಿರ್ಮೂಲನೆಯಲ್ಲಿ ಬಸವಾದಿ ಶರಣರ ಕಾರ್ಯ ಮಹತ್ವದ್ದು: ಪಟ್ಟದೇವರು

ಭಾಲ್ಕಿ: ಹನ್ನೆರಡನೇ ಶತಮಾನದಲ್ಲಿ ಭಯಂಕರವಾಗಿದ್ದ ಜಾತಿ ವ್ಯವಸ್ಥೆ ನಿರ್ಮೂಲನೆ ಮಾಡುವಲ್ಲಿ ಬಸವಾದಿ ಶರಣರ ಕಾರ್ಯ ಮಹತ್ವದ್ದಾಗಿದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದೇವರು ಹೇಳಿದರು. ತಾಲೂಕಿನ ಮೊರಂಬಿ ಗ್ರಾಮದ ನಂದಿ ಬಸವೇಶ್ವರ ದೇವಾಲಯದಲ್ಲಿ ನಡೆದ ಬಸವ ಉತ್ಸವ, ಮೊರಂಬಿ ಉತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಬಸವ ಉತ್ಸವದಂತಹ ಉತ್ತಮ ಕಾರ್ಯ ನಡೆಸಿಕೊಂಡು ಬರುವಲ್ಲಿ ಗ್ರಾಮದ ಭಕ್ತರ ಪರಿಶ್ರಮ ಅಪಾರವಾಗಿದೆ. ಹಲವಾರು ಧರ್ಮಗಳಲ್ಲಿ ಆಯಾಯ ಧರ್ಮ ಸಂಸ್ಥಾಪಕರ ಹೆಸರು ಮಾತ್ರ ಮುನ್ನಲೆಗೆ ಬರುತ್ತದೆ, ಆದರೆ ಲಿಂಗಾಯತ ಧರ್ಮದಲ್ಲಿ 770 ಅಮರ ಗಣಂಗಳು ಮುನ್ನಲೆಯಲ್ಲಿರುತ್ತಾರೆ. ಬಸಣ್ಣನವರು ತಾವು ಮೇಲೆ ಬರದೆ ಸಾಮಾನ್ಯ ಮನುಷ್ಯನನ್ನು ಮೇಲೆತ್ತುವ ಕಾರ್ಯ ಮಾಡಿದ್ದಾರೆ. ಜಗತ್ತಿಗೆ ಮೊತ್ತ ಮೊದಲು ಸಂವಿಧಾನ ಕೊಟ್ಟವರು ನಮ್ಮ ಬಸವಣ್ಣ ನವರಾಗಿದ್ದಾರೆ. ಮಹಿಳೆಯರಿಗೆ ನಿಜವಾದ ಸ್ವಾತಂತ್ರ್ಯ ತಂದುಕೊಟ್ಟವರು ಬಸವಾದಿ ಶರಣರು ಎಂದು ಹೇಳಿದರು. ಷಟಸ್ಥಲಧ್ವಜಾರೋಹಣ ನೆರವೇರಿಸಿ ಮಾತನಾಡಿದ ನಿವೃತ ಶಿಕ್ಷಕ ಚನ್ನಬಸಪ್ಪ ಪತಂಗೆ, ಮನುಷ್ಯನಾಗಿ ಹುಟ್ಟಿ ಬಂದಮೇಲೆ ನಮ್ಮ ನಿಜಸ್ವರೂಪದ ಅರಿವು ಮೂಡಿಸಿಕೊಳ್ಳಬೇಕು ಎಂದು ತಿಳಿಸಿದರು. ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕ ಶ್ರೀ ಶಿವಾನಂದ ಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾಧ್ಯಾಪಕ ಸಂಗಶೆಟ್ಟಿ ಶೆಟ್ಟರ, ಹನ್ನೆರಡನೇ ಶತಮಾನ ಮತ್ತು 21ನೆಯ ಶತಮಾನಗಳಿಗೆ ತುಂಬಾ ಸಾಮ್ಯತೆ ಇದೆ.

ಬಸವಾದಿ ಶರಣರ ವಚನಗಳು ನಮ್ಮ ಜೀವನ ಸಾರ್ಥಕತೆಯ ಮಾರ್ಗ ತೋರಿಸಿಕೊಡುವ ಸಾಧನಗಳಾಗಿವೆ ಎಂದು ಹೇಳಿದರು. ಸೂರ್ಯಕಾಂತ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಶಾರದಾ ಶರಣಪ್ಪ ಆಳ್ಳೆ ಅನುಭವ ನುಡಿ ನುಡಿದರು. ಕಾರ್ಯಕ್ರಮದಲ್ಲಿ ಪಿಎ ಪ್ರಭಾಕರ ಪಾಟೀಲ್, ಕಂದಾಯ ನಿರೀಕ್ಷಕ ಪ್ರಶಾಂತ ಕೋಟೆ, ಪಿಡಿಓ ಪ್ರಶಾಂತಕುಮಾರ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಜಯರಾಜ್ ಧಾಬಶೆಟ್ಟಿ ಎಂ ಜಿ ಎಸ್ ಎಸ್ ಕೆ ನಿರ್ದೇಶಕ ಅಂಕುಶರಾವ ಪಾಟೀಲ್, ಸುಧಾಕರ ಜಾಧವ, ಬಸವರಾಜ ಹನಮಂತಪ್ಪ ಬಿರಾದಾರ್, ಶಂಕರ ಮಕಾಜಿ, ಗ್ರಾಮದ ಹಿರಿಯ ಮುಖಂಡ ಷಣ್ಮುಖಪ್ಪ ಉಚ್ಚೇಕರ, ರೇಖಾ ಶ್ರೀನಿವಾಸ್ ಬಿರಾದರ್, ಖುಷಿ ಅಪ್ಪಣ್ಣ ಕರಡೇ, ಪ್ರತೀಕ ಭೀಮ ಮೇತ್ರೆ, ವಿಜಯಕುಮಾರ್ ವಾರದ, ಅವಿನಾಶ್ ಉಪಸ್ತಿತರಿದ್ದರು. ಖುಷಿ ಅಪ್ಪಣ್ಣ ಸ್ವಾಗತಿಸಿದರು. ರೇಖಾ ಶ್ರೀನಿವಾಸ್ ನಿರೂಪಿಸಿದರು. ಪ್ರತೀಕ ಮೇತ್ರೆ ವಂದಿಸಿದರು.




ಮೊರಂಬಿ ಯುವಕರು ಬೇರೆ ಗ್ರಾಮದ ಯುವಕರಿಗೆ ಮಾದರಿಯಾಗಿದ್ದಾರೆ, ಇಲ್ಲಿಯ ಯುವಕರು ವ್ಯಸನ ಮುಕ್ತರಾಗಿ ಬಸವಾದಿ ಶರಣರ ಆಚರಣೆಯನ್ನು ಜನಮಾನಸಕ್ಕೆ ಮುಟ್ಟಿಸುವ ಕಾರ್ಯ ಮಾಡುತ್ತಿದ್ದಾರೆ. ಶ್ರೀ ಗುರುಬಸವ ಪಟ್ಟದೇವರು ಹಿರೇಮಠ ಸಂಸ್ಥಾನ ಭಾಲ್ಕಿ.

# ಕುಡಿಯುವ ನೀರಿಗೆ ಹಣ ಮೀಸಲು: ಶಾಸಕ ವಜ್ಜಲ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್ಲ:

ಮುಖ್ಯಮಂತ್ರಿಸಿದ್ಧರಾಮಯ್ಯನವರು ಕೆಲೆವೇ ಕೆಲವು ದಿನಗಳಲ್ಲಿ ಮಂಡಿಸಲಿರುವ ರಾಜ್ಯ ಬಜೆಟ್‌ನಲ್ಲಿ ಐತಿಹಾಸಿಕ ಮುದಗಲ್ಲ ಪಟ್ಟಣಕ್ಕೆ ಕುಡಿಯುವ ನೀರಿಗೆ ಬೇಕಾಗಿರುವ ಅಗತ್ಯವಾದ ಹಣವನ್ನು ಮೀಸಲಿಟ್ಟು ಘೋಷಣೆ ಮಾಡುವದು ಮತ್ತು ತಾಲೂಕಾ ಕೇಂದ್ರವನ್ನಾಗಿ ಘೋಷಣೆ ಮಾಡುವದಕ್ಕಾಗಿ ಸರಕಾರಕ್ಕೆ ಮತ್ತು ಮುಖ್ಯಮಂತ್ರಿಸಿದ್ಧರಾಮಯ್ಯನವರಿಗೆ ಒತ್ತಾಯಿಸಲಾಗಿದೆ. ಅಗತ್ಯವಾದ ಎರಡೂ ಕೆಲಸಗಳನ್ನು ಬಜೆಟ್‌ನಲ್ಲಿ ಘೋಷಿಸದೇ ಇದ್ದಲ್ಲಿ ಖುದ್ದು ನಾನೇ ಜನರೊಂದಿಗೆ ಸೇರಿ-ಕೊಂಡು ಹೋರಾಟಕ್ಕಿಳಿಯುವದು ಅನಿವರ್ಯ ಎಂದು ಲಿಂಗಸುಗೂರು ಮೀಸಲು ಕ್ಷೇತ್ರದ ಶಾಸಕ ಮಾನಪ್ಪ ಡಿ ವಜ್ಜಲ ರಾಜ್ಯ ಸರಕಾರಕ್ಕೆ ಒತ್ತಾಯಿಸಿದ್ದಾರೆ. ಅವರು ಪಟ್ಟಣದಲ್ಲಿ ಹಳೆಪೇಟೆ ರಸ್ತೆಗೆ ಹೊಂದಿಕೊಂಡಿರುವ ನೀಲಕಂಠಗೌಡ ಪೋಲೀಸ ಪಾಟೀಲ ಕಾಲೋನಿಯಲ್ಲಿ ನಗರೋತ್ಥಾನ ಯೋಜನೆಯ 1 ಕೋಟಿ ಮೊತ್ತದ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಬಳಿಕ ಕೋಟೆ ಮುಂಭಾಗದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಈಗಾಗಲೇ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಕಾಮಗಾರಿಯ ಅವಧಿಯು ಕೇವಲ ಮೂರು ತಿಂಗಳಿರುವದರಿಂದ ಕೂಡಲೇ ಉತ್ತಮ ಗುಣಮಟ್ಟದ ಹಾಗೂ ತ್ವರಿತ ಕಾಮಗಾರಿ ಮಾಡಲು ಉಸ್ತುವಾರಿ ವಹಿಸಿದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪಟ್ಟಣದಲ್ಲಿ ಜ್ವಲಂತ ಸಮಸ್ಯೆಯಾದ ಕುಡಿಯುವ ನೀರಿನ ಯೋಜನೆಗೆ ಅಗತ್ಯವಾಗಿರುವ ಹಣವನ್ನು ಇದೇ ಬಜೆಟ್‌ನಲ್ಲಿ ಘೋಷಿಸಬೇಕು ಮತ್ತು ಮುದಗಲ್ಲ ತಾಲೂಕಾ ಕೇಂದ್ರವನ್ನು ಘೋಷಣೆ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಲ್ಲಿ ಪದೇ ಪದೇ ಮನವಿ ಮಾಡಲಾಗಿದೆ. ಜೊತೆಗೆ ಪ್ರತಿ ಅಧಿವೇಶನದಲ್ಲೂ ಕೂಡ ಸರಕಾರಕ್ಕೆ ಪ್ರಶ್ನಿಸುವ ಮೂಲಕ ಗಮನ ಸೆಳೆಯಲಾಗಿದೆ. ಕೋಟೆ ಉತ್ಸವಕ್ಕೂ ಕೂಡ ಅನುದಾನ ಬಿಡುಗಡೆಗೆ ಸರಕಾರಕ್ಕೆ ಸಾಕಷ್ಟು ಬಾರಿ ಮನವಿ ಮಾಡಲಾಗಿದೆ. ಆದರೆ ಬೆಳಗಾವಿ ಅಧಿವೇಶನದಲ್ಲಿ ಸರಕಾರಎಚ್. ಕೆ. ಪಾಟೀಲರವರು ಮುದಗಲ್ಲ ಕೋಟೆ ಅಭಿವೃದ್ದಿಗೆ 1 ಕೋಟಿ ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದ್ದರಿಂದ ಕೋಟೆ ಉತ್ಸವಕ್ಕೆ ಪ್ರತ್ಯೇಕ ಅನುದಾನ ಬಿಡುಗಡೆಗೆ ಪತ್ರ ಬರೆದು ಒತ್ತಾಯಿಸಿದ್ದೇನೆ ಎಂದರು. ಈ ಸಮಯದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಗಿರಿಮಲ್ಲನಗೌಡ ಕರಡಕಲ್, ಲಿಂಗಸುಗೂರು ಮಂ ಡಲ ಅಧ್ಯಕ್ಷ ನಾಗಭೂಷಣ, ಮುದಗಲ್ಲ ಮಂಡಲ ಅಧ್ಯಕ್ಷ ಹುಲ್ಲೇಶ ಸಾಹುಕಾರ, ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಅಯ್ಯಪ್ಪ ಮಾಳೂರ, ಮುದುಕಪ್ಪ ನಾಯಕ, ಉದಯಕುಮಾರ ಕಮ್ಮಾರ, ಕಾಂತು ಪತ್ತಾರ, ಸಣ್ಣ ಸಿದ್ದಯ್ಯಸ್ವಾಮಿ, ನಾಗರಾಜ ತಳವಾರ, ಮಂಜುನಾಥ, ವಿರೂಪಾಕ್ಷ ಹೂಗಾರ, ಚಂದಾವಲಿಸಾಬ, ಹುಸೇನ್‌ಸಾಬ ದಫಿ (ರಾಮ್‌ಜಿ), ಮುಖ್ಯಾಧಿಕಾರಿ ಪ್ರವೀಣ ಬೋಗಾರ, ಪಿಡಬ್ಲುಡಿ ಜೆಇ ಗಜಾನನ, ಪುರಸಭೆ ಜೆಇ ಸೇರಿದಂತೆ ಮುಂತಾದವರಿದ್ದರು.

**ಮಹಿಳೆಯರ ಅಹವಾಲು**

ಲಿಂಗಸುಗೂರು ಮೀಸಲು ಕ್ಷೇತ್ರದ ಶಾಸಕ ಮಾನಪ್ಪಡಿ ವಜ್ಜಲ ನಗರೋತ್ಥಾನ ಕಾಮಗಾರಿಯ ಭೂಮಿ ಪೂಜೆ ಬಳಿಕ ಮಹಿಳೆಯರ ತಂಡವೇ ಆಗಮಿಸಿ ಸರ್ ನಮಗೆ ಮೊದಲ ಕುಡಿಯಾಕ ನೀರ್ ಕೊಡ್ರಿ, ಮುದಗಲ್ಲ ಕೋಟೆ ಮುಳ್ಳು ಕಂಟಿಯಿಂದ ತುಂಬ ತುಳಿಕೈತ್ರಿ, ಅದನ್ನ ಸ್ವಚ್ಛಗೊಳಿಸಿ ಎಂದು ಮಹಿಳೆಯರ ಗುಂಪೊಂದು ಶಾಸಕರ ಮುಂದೆ ತಮ್ಮ ಅಹವಾಲು ತೋಡಿ-ಕೊಂಡರು. ಶಾಸಕರು ಅಹವಾಲಿಗೆ ತಾವು ಮಾಡಿದ ಕಾರ್ಯವನ್ನು ಮಹಿಳೆಯರ ಮುಂದೆ ಎಳೆ ಎಳೆಯಾಗಿ ಹೇಳುತ್ತಿದ್ದಂತೆ ಮಹಿಳೆಯೋರ್ವರು ಮುಂದುವರೆದು " ನೀವು ವರ್ಷಕ್ಕೆ ಎರಡು ಬಾರಿ ಎಲ್ಯಾರ ಭೆಟ್ಟಿಯಾಗ್ತೀರಿ, ನಾವು ಆವಾಗ ನಿಮಗೆ ಸಮಸ್ಯೆ ಹೇಳಬೇಕ್ರಿ, ನೀವು ಕೇಳಬೇಕ್ರೀ " ಅನ್ನಂಗ ಆಗ್ಯೆತ್ರಿ, ಎಂದು ಶಾಸಕರು ಮುದಗಲ್ಲ ನಾಗರಿಕರೊಂದಿಗೆ ಪದೇ ಪದೇ ಬೆರೆತುಕೊಂಡು ಸಮಸ್ಯೆ ಅಹವಾಲು ಸ್ವೀಕರಿಸಿ ಎನ್ನುವ ಮಾತನ್ನು ಶಾಸಕರ ಗಮನ ಸೆಳೆದರು. ಈ ಸಮಯದಲ್ಲಿ ಗುಂಡಮ್ಮ ಕುಂಬಾರ, ಪದ್ದಮ್ಮ, ರುದ್ರಮ್ಮ, ವಿಜಯಲಕ್ಷ್ಮೀ, ನಿರ್ಮಲಾ ಮತ್ತು ಜಯಮ್ಮ, ಲಲಿತಾ, ಸೇರಿದಂತೆ ಮುಂತಾದವರಿದ್ದರು.




ಹುಮನಾಬಾದ:ಬೌದ್ಧ ಧರ್ಮದ ಸುವರ್ಣಗಿರಿ 03 ನೇ ಧಮ್ಮಯಾತ್ರೆ ಕಲಬುರಗಿ ಜಿಲ್ಲೆಯಿಂದ ತೆಲಂಗಾಣ ವರೆಗೂ ನಡೆಯುತ್ತಿರುವ ಧಮ್ಮಯಾತ್ರೆ ಹುಮನಾಬಾದ ಪಟ್ಟಣಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಸುಧಾಕರ್ ಭಾಸ್ಕರ್ ರವರಿಂದ ಬಿಕ್ಕುಗಳಿಗೆ ಹಣ್ಣು ಹಂಪಲ್ ಹಾಗೂ ನೀರಿನ ಬಟಲ್ ಗಳನ್ನು ವಿತರಣೆ ಮಾಡಿ ಬರಮಾಡಿಕೊಂಡರು. ಶಶಿಕಾಂತ್ ಡಾಂಗೆ, ಪ್ರಭಾಕರ್ ಭಾಸ್ಕರ್, ಶಿವಕುಮಾರ್ ಶಿಂದೆ, ಪುಟ್ಟರಾಜ್ ಹಲಗೆ, ವಿಲಾಸ್ ಕುಮಾರ್ ಮೇತ್ರೆ, ಶಿವಕುಮಾರ್ ತೇಗನೂರ್, ಜೈಭೀಮ್ ಡಾಂಗೆ ಹಾಗೂ ಅನೇಕರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಅಧ್ಯಕ್ಷರಾದ ಮಾಲಾ ಬಿ.ನಾರಾಯಣರಾವ್ ಅವರಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಬೀದರ್:

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಮಾಲಾ ಬಿ.ನಾರಾಯಣರಾವ್ ಅವರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಿದ್ದಕ್ಕಾಗಿ ಅಂಬಿಗರ ಚೌಡಯ್ಯ ಯುವ ಸೇನೆ ಸಂಸ್ಥಾಪಕ ಅಧ್ಯಕ್ಷರಾದ ಸುನೀಲ ಭಾವಿಕಟ್ಟಿ ಅವರು ಶಾಲು ಹೊದಿಸಿ, ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಜೈಶ್ರೀ ಪಿಟ್ಲೆ, ಶರಣಪ್ಪಾ ಖಾಸೆಂಪೂರ್, ಶಶಿಕುಮಾರ್ ಚೌಳಿ, ಸಂಜುಕುಮಾರ ಮಿರಾಗಂಜ್, ಚಂದ್ರಕಾಂತ ಹಳ್ಳಿಖೇಡಕರ್, ಸಂತೋಷ ಹೊನ್ನಡ್ಡಿ, ಶರಣು ಕೋಳಾರ ಇತರರು ಇದ್ದರು.

# ಸವಿತಾ ಹೂಗರ್‌ಗೆ ಚಿನ್ನದ ಪದಕ



• ಮಲ್ಲಮ್ಮ ನುಡಿ ವಾರ್ತೆ ಬೀದರ್:

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (VTU) ಪರೀಕ್ಷೆಯಲ್ಲಿ ಜೆಎನ್ ಡಿ ಕಾಲೇಜಿನ ವಿದ್ಯಾರ್ಥಿನಿ ಸವಿತಾ ಹೂಗಾರ ಅವರು ಅತ್ಯುತ್ತಮ ಶೈಕ್ಷಣಿಕ ಸಾಧನೆ ತೋರಿ ಪ್ರಥಮ ರ‍್ಯಾಂಕ್ ಪಡೆದು ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ರಾಜ್ಯಪಾಲರಾದ ಥಾವರ ಚಂದ್ ಗೆಹಲೋಟ್‌ರವರಿಂದ ಚಿನ್ನದ ಪದಕ ಸ್ವೀಕರಿಸಿದ್ದರು. ಅವರ ಡಿಜಿಟಲ್ ಸಂವಹನ ಮತ್ತು ನೆಟ್‌ವರ್ಕ್‌ನಲ್ಲಿ ಮಾಸ್ಟರ್ ಆಫ್ ಟೆಕ್ನಾಲಜಿ ಕಾರ್ಯಕ್ರಮದಲ್ಲಿ ಅವರ ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ ಅವರು ಈ ಪ್ರತಿಷ್ಠಿತ ಮನ್ನಣೆಯನ್ನು ಗಳಿಸಿದ್ದಾರೆ. ಅವರ ಸ್ಥಿರವಾದ ಕಠಿಣ ಪರಿಶ್ರಮ, ಬಲವಾದ ಪರಿಕಲ್ಪನಾ ಸ್ಪಷ್ಟತೆ ಮತ್ತು ಶೈಕ್ಷಣಿಕ ಶ್ರೇಷ್ಠತೆಗೆ ಸಮರ್ಪಣೆ ಅವರು ವಿಶ್ವವಿದ್ಯಾಲಯ ಮಟ್ಟದಲ್ಲಿ ಉನ್ನತ ಸ್ಥಾನವನ್ನು ಪಡೆಯಲು ಅನುವು ಮಾಡಿಕೊಟ್ಟಿತು. ಈ ಸಾಧನೆ ಕುಟುಂಬ, ಜೆಎನ್ ಡಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಸಿಬ್ಬಂದಿಗಳು ಹಾಗೂ ಜಿಲ್ಲೆಯ ಮಟ್ಟದಲ್ಲಿ ಹೆಮ್ಮೆಯ ವಿಷಯವಾಗಿದ್ದು, ಸಹಪಾಠಿಗಳು ಮತ್ತು ಗುರುಗಳಿಂದ ಅಭಿನಂದನೆಗಳ ಮಹಾಪೂರ ಹರಿದುಬರುತ್ತಿದೆ. ಶಿಸ್ತಿನ ಅಧ್ಯಯನ, ನಿರಂತರ ಪರಿಶ್ರಮ ಮತ್ತು ಗುರಿಮುಖ ಮನೋಭಾವವೇ ಈ ಯಶಸ್ಸಿನ ಪ್ರಮುಖ ಕಾರಣವೆಂದು ಅವರು ತಿಳಿಸಿದ್ದಾರೆ.

### ಶ್ರೀ ಗ್ರಾಮದೇವಿ ಜಾತ್ರೆಯ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದ ಸಚಿವ ಲಾಡ್

# ತನ್ನೂರ ಜಾತ್ರೆಯನ್ನು ಅದ್ದೂರಿಯಾಗಿ ನಡೆಸಲು ಸಂತೋಷ್ ಲಾಡ್ ವಿಶೇಷ ಆಸಕ್ತಿ

• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ;

ಫೆ, 25 ರಿಂದ ಮಾರ್ಚ 05ರವರೆಗೆ ಪಟ್ಟಣದಲ್ಲಿ ಜರಗುವ ಉತ್ತರ ಕರ್ನಾಟಕದ ಸುಪ್ರಸಿದ್ಧ ಜಾತ್ರೆಗಳಲ್ಲೊಂದಾದ ಶ್ರೀ ಗ್ರಾಮದೇವಿ ಜಾತ್ರೆಯಲ್ಲಿ ಆಗಮಿಸುವ ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ಎಚ್ಚರವಹಿಸಿ ವಿಜೃಂಭಣೆಯಿಂದ ಜರುಗುವಂತೆ ಮಾಡಲು ಸಚಿವ ಸಂತೋಷ ಲಾಡ್ ಕಮಿಟಿ ಸದಸ್ಯರಿಗೆ ವಿನಂತಿಸಿದರು.



ಶ್ರೀಗ್ರಾಮದೇವಿ ಜಾತ್ರಾ ಟ್ರಸ್ಟ ಕಮಿಟಿಗೆ ದಾಸ್ತಿಕೊಪ್ಪ ಗ್ರಾಮದ ಶಂಕ್ರವ್ವ ಗುರುಶಾಂತಗೌಡ ತಲಬಾಗಿಲ ಇವರು ಸಚಿವರ ಸಮ್ಮುಖದಲ್ಲಿ ತಲಾ ಒಂದುಲಕ್ಷದಾ ಆರನೂರಾ ಎರಡು ರೂಗಳನ್ನು ದೇಣಿಗೆ ರೂಪದಲ್ಲಿ ನೀಡಿದರು.

**ಪೂರ್ವ ಸಿದ್ಧತಾ ಸಭೆ**

ಈ ಹಿನ್ನೆಲೆಯಲ್ಲಿ ಇಂದು ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಎಸ್ ಲಾಡ್ ಅವರು, ಗ್ರಾಮದೇವಿಯರನ್ನು ಪ್ರತಿಷ್ಠಾಪಿಸಿ, ಉತ್ಸವ ನಡೆಸುವ ಸ್ಥಳದ ಪರಿಶೀಲನೆ ನಡೆಸಿ ಪಟ್ಟಣ ಪಂಚಾಯತನಲ್ಲಿ ಜಾತ್ರಾ ಮಹೋತ್ಸವದ ಪೂರ್ವ ಸಿದ್ಧತಾ ಸಭೆಯಲ್ಲಿ ಮುಂಜಾಗ್ರತೆ ಕುರಿತು ಸಭೆಯಲ್ಲಿ ಶ್ರೀಗ್ರಾಮದೇವಿ ಟ್ರಸ್ಟ್ ಕಮೀಟಿ ಅಧ್ಯಕ್ಷ ಶ್ರೀಕಾಂತ ಖಟಾವಕರ ಜಾತ್ರಾ ಉತ್ಸವ ಕಮಿಟಿ ಅಧ್ಯಕ್ಷ ಸುಧೀರ ಬೋಳಾರ ಸಮಿತಿಯ ಸದಸ್ಯರು, ಪಟ್ಟಣ ಪಂಚಾಯತ್ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದರು.

**ಶ್ರೀ ಗ್ರಾಮದೇವಿ ದರ್ಶನಕ್ಕೆ ಸಕಲ ವ್ಯವಸ್ಥೆ**

ವಿಜೃಂಭಣೆಯಿಂದ ಜಾತ್ರೆ ನಡೆಸಲು ಸಕಲ ಸಿದ್ಧತೆಗಳನ್ನು ಈಗಾಗಲೇ ಮಾಡಿಕೊಳ್ಳಲಾಗುತ್ತಿದೆ. ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ದೇವಿಯ ದರ್ಶನಕ್ಕೆ ತೊಂದರೆಯಾಗದಂತೆ ಎಲ್ಲ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಪಟ್ಟಣದ ಪ್ರತಿಯೊಂದು ಓಣಿ ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪಗಳ ವ್ಯವಸ್ಥೆ, ಕುಡಿಯುವ ನೀರು, ಸಾರ್ವಜನಿಕ ಶೌಚಾಲಯ, ಪಾರ್ಕಿಂಗ್, ದೇವಿಯ ದರ್ಶನಕ್ಕೆ ಅಲ್ಲಲ್ಲಿ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗುತ್ತದೆ. ಜಾತ್ರೆಯಶಸ್ಸಿಗಾಗಿ ಸಮಿತಿ ರಚಿಸಲಾಗಿದೆ. ಪ್ರತಿನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು. ಸಂಧರ್ಭದಲ್ಲಿ ಪ್ರೊಬೇಷನರಿ ತಹಶಿಲ್ದಾರ ರಿತಿಕಾ ವರ್ಮಾ ,ತಹಶಿಲ್ದಾರ ಬಸವ ರಾಜ ಹೊಂಕಣ್ಣವರ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಪಿ.ವಾಯ್ ಸಾವಂತ, ಪ.ಪಂ ಮುಖ್ಯಾಧಿಕಾರಿ ಚಂದ್ರಶೆಖರ ಬಿ. ಸಿ.ಪಿ. ಶ್ರೀಶೈಲ ಕೌಜಲಗಿ, ಎಸ್. ಆರ್ ಪಾಟೀಲ. ಮಂಜುನಾಥ ಮುರಳ್ಳಿ. ಬಾಬು ಅಂಚಟಗೇರಿ ವೃಷಬೇಂದ್ರ ಪಟ್ಟಣಶೆಟ್ಟಿ, ಬಾಳು ಖಾನಾಪೂರ, ಸಿದ್ದು ತಲಬಾಗಿಲ, ಹರಿಶಂಕರ ಮಠದ, ಶ್ರೀಕಾಂತ ಗಾಯಕವಾಡ, ಇದ್ದರು.

# ಒಳ್ಳೆಯ ಸಂಸ್ಕಾರ, ಸಂಸ್ಕೃತಿ ಕಲಿಸುವುದೇ ಶಿಕ್ಷಣ: ಸತ್ಯಾನಂದ ಪಾತ್ರೋಟ




• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಶಿಕ್ಷಣ ಕೇವಲ ಹೆಚ್ಚು ಅಂಕ ಗಳಿಸಿ ಉದ್ಯೋಗ ಪಡೆಯುವುದಲ್ಲ. ಜ್ಞಾನ ನೀಡಿ ಒಳ್ಳೆಯ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುವುದಾಗಿದೆ ಎಂದು ಕವಿ ಸತ್ಯಾನಂದ ಪಾತ್ರೋಟ ಹೇಳಿದರು. ತಾಲ್ಲೂಕಿನ ಬೇವೂರು ಆದರ್ಶ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ಜರುಗಿದ ಪ್ರತಿಭಾ ಪುರಸ್ಕಾರ, ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಶುಭ ಕೋರುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ಶಿಕ್ಷಣ ಇಂದು ಮನೆ ಬಾಗಿಲಿಗೆ ಬಂದಿದೆ. ವಿದ್ಯಾರ್ಥಿಗಳು ಅದರ ಪ್ರಯೋಜನ ಪಡೆದು ಸಂಸ್ಕಾರವಂತ ನಾಗರಿಕರಾಗಿ ಬೆಳೆದು ಮೌಲ್ಯಯುತ ಜೀವನ ರೂಪಿಸಿಕೊಳ್ಳಬೇಕು ಎಂದ ಪಾತ್ರೋಟ, ಎಲ್ಲರನ್ನು ಒಪ್ಪಿಕೊಳ್ಳುವ ಹಾಗೂ ಅಪ್ಪಿಕೊಳ್ಳುವ ಚಿಂತನೆಯುಳ್ಳವರಾಗಿ ಬಾಳಬೇಕು ಎಂದರು. ಸಾಧಕರಾಗಬೇಕು ಎಂದುಕೊಂಡರೆ ಮೊದಲು ಬದುಕಿನ ಅರಿವು ನಿಮಗಿರಲಿ. ಜವಾಬ್ದಾರಿ ಅರಿತು ಅಧ್ಯಯನಶೀಲರಾಗಿ ಪರಿಶ್ರಮ, ನಿಷ್ಠೆಯಿಂದ ಕೆಲಸ ಮಾಡಿದರೆ ಯಶಸ್ಸು ಗಳಿಸಿ ಸಾಧಕರಾಗಬಹುದು ಎಂದು ಪಾತ್ರೋಟ ಹೇಳಿದರು. ಉಪನ್ಯಾಸಕ ಎಸ್.ಎನ್.ಬಾರ್ಕಿ ಮಾತನಾಡಿ, ವಾರ್ಷಿಕ ಪರೀಕ್ಷೆಗೆ ಕೆಲವೇ ದಿನಗಳು ಬಾಕಿಯಿದ್ದು ಈ ಸಮಯದಲ್ಲಿ ಯೋಜನೆ ರೂಪಿಸಿಕೊಂಡು ಅಭ್ಯಾಸ ಮಾಡಿ ಉತ್ತಮ ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಆದರ್ಶ ವಿದ್ಯಾವರ್ಧಕ ಸಂಘದ ಸದಸ್ಯ ಪಿ.ಬಿ.ಹೊಸಳ್ಳಿ, ವಿದ್ಯಾರ್ಥಿಗಳು ಜೀವನದಲ್ಲಿ ಬರುವ ಸವಾಲುಗಳನ್ನು ತಾಳ್ಮೆಯಿಂದ ಎದುರಿಸಿ ಸತತ ಪರಿಶ್ರಮಿಗಳಾಗಿ ಯಶಸ್ಸು ಪಡೆಯಬೇಕು. ಹರಿಯುವ ನದಿಗಳಂತೆ ಮುಂದೆ ಸಾಗುವ ಗುರಿ ಹೊಂದಬೇಕು ಎಂದರು. ಕಾರ್ಯಕ್ರಮದಲ್ಲಿ ಕಳೆದ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ದಾನಿಗಳು ಕೊಡಮಾಡಿದ ನಗದು ಬಹುಮಾನ ನೀಡಿ, ಸನ್ಮಾನಿಸಲಾಯಿತು. ನಿವೃತ್ತ ಶಿಕ್ಷಕ ಎಸ್.ಎಸ್.ಜಿಗಳೂರ, ಸಂಸ್ಥೆಯ ಸದಸ್ಯರಾದ ನಿಂಗಪ್ಪ ಮಾಗನೂರ, ವಿರುಪಾಕ್ಷ ತುರುಡಗಿ, ಎಸ್.ಎಂ.ಹೊಟ್ಟಿಗೌಡ್ರ ಇದ್ದರು. ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಪ್ರಾಚಾರ್ಯ ಜೆ.ಕೆ.ಮಲ್ಲಾಪೂರ ಸ್ವಾಗತಿಸಿದರು. ಮುಖ್ಯಗುರು ಯೋಗೇಶ ಲಮಾಣಿ ಪರಿಚಯಿಸಿದರು. ಪ್ರೊ. ಎಸ್.ಕೆ.ಮಾಡೊಳ್ಳಿ ನಿರೂಪಿಸಿದರು. ಶಿಕ್ಷಕಿ ಎ.ಜಿ.ಮಾಗನೂರ ವಂದಿಸಿದರು.

## ಇಂದಿನಿಂದ ಫಾತ್ಮಪುರ್ ಶ್ರೀ ಮೈಸಮ್ಮಾ ದೇವಿ ಜಾತ್ರಾ ಆರಂಭ



• ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:

ಪಟ್ಟಣದ ಫಾತ್ಮಪುರನಲ್ಲಿ ಪ್ರತಿ ಮೂರು ವರ್ಷಕೊಮ್ಮೆ ಆಚರಿಸುವಂತೆ ಈ ವರ್ಷವು ಕೂಡ, ಬೇಡಿದವರಿಗೆ ಬೇಡಿದ ವರ ಕೊಡುವ ಶ್ರೀ ಮೈಸಮ್ಮಾ ದೇವಿಯ ಜಾತ್ರಾ ಮಹೋತ್ಸವ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದು ಜಾತ್ರಾ ಮಹೋತ್ಸವ ಕಮಿಟಿ ಅಧ್ಯಕ್ಷ ಮಹಾರುದ್ರಯ್ಯ ಸ್ವಾಮಿ ಬಿರಾದಾರ್ ತಿಳಿಸಿದ್ದಾರೆ. ಇಂದು ಮುಂಜಾನೆ 10ಘಂಟೆಗೆ ದೇವಿಯ ವಿಶೇಷ ಪೂಜೆ ಸಾಯಂಕಾಲ 6ಘಂಟೆಗೆ ದಿಪೋತ್ಸವ. ನಾಳೆ ಮಂಗಳವಾರದಂದು ಮುಂಜಾನೆ ಊರ ದೇವರ ನೈವಿದ್ಯ. ಸಾಯಂಕಾಲ 4ಗಂಟೆಗೆ ಶ್ರೀ ಮೈಸಮ್ಮಾ ದೇವಿಯ ವಿಶೇಷ ಪೂಜೆ, ಸಾಯಂಕಾಲ 7ಘಂಟೆಗೆ ಬಸವನ ಬಾಗೇವಾಡಿಯ ಮೌಲಾಸಾಬ್ ಮಕನಾಂದರ್ ಹಾಗೂ ಅವ್ವ ಬ್ಯಾಲಾಳಿ ಇವರಿಂದ ಅದ್ದೂರಿ ಗಿಗಿ ಪದ ಕಾರ್ಯಕ್ರಮ ಜರುಗಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತಾದಿಗಳು ದೇವಿಯ ಜಾತ್ರಾ ಮಹೋತ್ಸವದಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದು ಪುನಿತರಾಗಬೇಕೆಂದು ಪಂಚ ಕಮಿಟಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಹಿತಿ ರುಕ್ಮೂದ್ದಿನ್ ಇಲ್ಲದೇ ಬಡವಾದ ಸಾಹಿತ್ಯ ಲೋಕ: ಓಂಪ್ರಕಾಶ ದಡ್ಡೆ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ:

ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ ಹಿರಿಯ ಸಾಹಿತಿ ರುಕ್ಮೂದ್ದಿನ್ ಇಸ್ಲಾಂಪೂರ ಅವರ ನಿಧನವು ಸಾಹಿತ್ಯವಲಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಾಮಾಜಿಕ ಚಿಂತಕ ಓಂಪ್ರಕಾಶ ದಡ್ಡೆ ಅವರು ತಮ್ಮ ನುಡಿ ನಮನದಲ್ಲಿ ತಿಳಿಸಿದರು.

ಭಾನುವಾರ ಸಾಹಿತಿ ದಿವಂಗತ ರುಕ್ಮೂದ್ದಿನ್ ಇಸ್ಲಾಂಪೂರ ರವರ ಲಾಲಧರಿಯಲ್ಲಿ ಅಯೋಜಿಸಿದ ನುಡಿನಮನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತಿದ್ದರು.ಗ್ರಾಮೀಣ ಬದುಕಿನ ನೋವುನಲಿವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೂಲಕ ಓದುಗರ ಮನ ಗೆದ್ದಿದ್ದ ರುಕ್ಮೂದ್ದಿನ್ ಅವರು, ತಮ್ಮ ಬರಹಗಳ ಮೂಲಕ ಸಮಾಜದ ಅಸಮಾನತೆ, ಬಡವರ ಬದುಕಿನ ಹೋರಾಟ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದಿದ್ದರು. ಎಂದರು. ಸಾಹಿತಿ ರಮೇಶ ಬಿರಾದಾರ ಬೀದರ್ ರವರು ಮಾತನಾಡಿ, ಅವರ ಕವನಗಳು ಮತ್ತು ಲೇಖನಗಳು ಯುವ ಪೀಳಿಗೆಗೆ ಪ್ರೇರಣೆಯಾಗಿ ನಿಂತಿದ್ದವು."ರುಕ್ಮೂದ್ದಿನ್ ಅವರು ಕೇವಲ ಸಾಹಿತಿಯಲ್ಲ, ಜನರ ನೋವಿಗೆ ಧ್ವನಿಯಾದ ಹೋರಾಟಗಾರರು. ಅವರ ಲೇಖನಿಗಳು ಸಮಾಜದ ಅಂಧಕಾರದ ಮೂಲೆಗಳಲ್ಲಿ ಬೆಳಕು ಚೆಲ್ಲಿದವು. ಇಂತಹ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡ ಸಾಹಿತ್ಯ ಲೋಕ ಇಂದು ಬಡವಾಗಿದೆ," ಎಂದು ರಮೇಶ ಬಿರಾದಾರ ಹೇಳಿದರು.

ಸಾಹಿತಿ ರುಕ್ಮೂದ್ದಿನ್ ಅವರ ಸ್ಮರಣೆ ಸದಾ ಕನ್ನಡ ಸಾಹಿತ್ಯದಲ್ಲಿ ಜೀವಂತವಾಗಿರಲಿದೆ. ಅವರ ಬರಹಗಳು ಮುಂದಿನ ತಲೆಮಾರಿಗೆ ಮಾರ್ಗದರ್ಶಕವಾಗಿದ್ದು, ಸಾಮಾಜಿಕ ನ್ಯಾಯದ ಹೋರಾಟಕ್ಕೆ ಶಕ್ತಿ ನೀಡುತ್ತಲೇ ಇರುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಇವರ ಅಗಲಿಕೆಯ ನೋವು ಸಾಹಿತ್ಯ ಪ್ರೇಮಿಗಳ ಮನಗಳಲ್ಲಿ ಸದಾ ಉಳಿಯಲಿದ್ದು, ಅವರ ಸೇವೆಗೆ ಕನ್ನಡ ನಾಡು ಸದಾ ಕೃತಜ್ಞವಾಗಿರಲಿದೆ. ಎಂದರು.



ಶ್ರೀಶೈಲ srisaila : ಅಕ್ಕಮಹಾದೇವಿ ಚೈತನ್ಯ ಪೀಠದಲ್ಲಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಶ್ರೀ ಅಕ್ಕಮಹಾದೇವಿ ರಾಷ್ಟ್ರೀಯ ಬಹುಭಾಷಾ ವಿಚಾರ ಸಂಕಿರಣ ಯಶಸ್ವಿಯಾಗಿ ನಡೆಯಿತು. ಪೂಜ್ಯಶ್ರೀ ಕರುಣಾದೇವಿ ಮಾತಾ ಶ್ರೀ ಡಾ : ರಾಜಶೇಖರ ಶಿವಾಚಾರ್ಯರು ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಸೋಮಣ್ಣ ಬೇವಿನಮರದ ಕಾರ್ಯದರ್ಶಿಗಳಾದ ಪ್ರಕಾಶ್ ಮತ್ತಿಹಳ್ಳಿ ಸದಸ್ಯರಾದ ಶಿವಾರೆಡ್ಡಿ ಗೌರಮ್ಮ ನ್ಯಾಮತಿ ಶಿವಯ್ಯ ಸ್ವಾಮಿ ಚಿಕ್ಕಮಗಳೂರಿನ ಕೆಸಿ ಶಂಕರ ಕುಶಾಲರಾವ ಯಾಬಾ ತರನಳ್ಳಿ ಮಹಾದೇವ ಬಸವರಾಜ್ ಹಾಲಹಳ್ಳಿ ಡಾ : ಓಂಕಾರ ಸ್ವಾಮಿ ಕಂಟೆಪ್ಪ ಭಂಗೂರೆ ಡಾ : ಸುಭಾಷ್ ಪಾಟೀಲ ಪ್ರತಾಪ್ ತಂಬಾಕೆ ಬಸವರಾಜ ಇಬ್ರಾಹಿಂಪುರ ಗಂಗಾಧರ ಸ್ವಾಮಿ ಮುಂತಾದವರು ಇದ್ದರು.

# ಅರೋಗ್ಯ ಕ್ಷೇತ್ರದ ಅಭಿವೃದ್ಧಿಯೂ ಅಗತ್ಯ: ಗವಿಸಿದ್ದೇಶ್ವರ ಶ್ರೀ

• ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:

ನಗರದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀ ಮಹಾದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜು ಮತ್ತು ಶ್ರೀ ಬಸವೇಶ್ವರ ಆಸ್ಪತ್ರೆಯಲ್ಲಿ ಆಧುನಿಕ ಸೌಲಭ್ಯಗಳನ್ನು ಒಳಗೊಂಡ ನೂತನ ಬ್ಲಾಕ್ ಅಡಿಗಲ್ಲು ಸಮಾರಂಭ ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹಾಗೂ ಮಾದನ ಹಿಪ್ಪರಗಾ ಮಠದ ಮ.ನಿ.ಪ್ರ ಅಭಿನವ ಶಿವಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯದಲ್ಲಿ, ಹಾಗೂ ಸಂಸ್ಥೆಯ ಅಧ್ಯಕ್ಷರಾದ ಡಾ. ಶಶೀಲ್ ನಮೋಶಿ ಅವರ ಹಾಗೂ ಸರ್ವ ಸದಸ್ಯರ ಸಮ್ಮುಖದಲ್ಲಿ ನೆರವೆರೆಸಲಾಯಿತು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯ ಕ್ಷೇತ್ರದ ಅಭಿವೃದ್ಧಿ ಅತ್ಯಂತ ಅಗತ್ಯವಾದದ್ದು. ಇಂತಹ ಆಸ್ಪತ್ರೆಗಳು ಬಲವಾಗುತ್ತಾ ಹೋದರೆ, ನಮ್ಮ ಭಾಗದ ಜನರು ದೂರದ ನಗರಗಳಿಗೆ ಹೋಗದೆ ಇಲ್ಲಿಯಲ್ಲೇ ಗುಣಮಟ್ಟದ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತದೆ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.



ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಶಿಕ್ಷಣದ ಜೊತೆಗೆ ಆರೋಗ್ಯ ಸೇವೆಯಲ್ಲೂ ಮಹತ್ವದ ಪಾತ್ರ ವಹಿಸುತ್ತಿರುವುದು ಶ್ಲಾಘನೀಯ. ಕಲಬುರಗಿಯಲ್ಲಿ ನೂತನ ಬ್ಲಾಕ್ ನಿರ್ಮಾಣದಿಂದ ತಜ್ಞ ವೈದ್ಯಕೀಯ ಸೇವೆಗಳು,ಆಧುನಿಕ ಉಪಕರಣಗಳು ಮತ್ತು ಉತ್ತಮ ಸೌಲಭ್ಯಗಳು ಸಾರ್ವಜನಿಕರಿಗೆ ಲಭ್ಯವಾಗಲಿ ಎಂದು ಹಾರೈಸಿದರು.

ಸಂಸ್ಥೆಯ ಅಧ್ಯಕ್ಷ ಶಶೀಲ್ ಜಿ ನಮೋಶಿ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ ವೈ ಪಾಟೀಲ್ ಸೇರಿದಂತೆ ಇತರರು ಇದ್ದರು.

## ರಜನಿಕಾಂತ್, ಶಿವಣ್ಣ ಸೇರಿದಂತೆ 25ಕ್ಕೂ ಹೆಚ್ಚು ತಾರೆಯರ ಸಂಗಮ

### ಮಂತ್ರಾಲಯ ರಾಯರ ಕುರಿತಾದ ಆಲ್ಬಂ ಚಿತ್ರೀಕರಣ ಯಶಸ್ವಿ



• ಮಲ್ಲಮ್ಮ ನುಡಿ ವಾರ್ತೆ,ಮಂತ್ರಾಲಯ:

ಕಲಿಯುಗದ ಕಾಮಧೇನು,ಕಲ್ಪವೃಕ್ಷ ಎಂದು ಖ್ಯಾತರಾದ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಕೋಟ್ಯಂತರ ಭಕ್ತರಿಗೆ ಇದೊಂದು ಅದ್ಭುತವಾದ ಸಿಹಿ ಸುದ್ದಿ. ರಾಯರ ದಿವ್ಯ ಚರಿತ್ರೆಯನ್ನು ಹಿಂದೆಂದೂ ಕಾಣದ ರೀತಿಯಲ್ಲಿ ದೃಶ್ಯೀಕರಿಸುವ "ರಾಯರ ದರ್ಶನ" ಆಲ್ಬಂ ಸಾಂಗ್ ಸದ್ದಿಲ್ಲದೆ ಸಿದ್ಧವಾಗುತ್ತಿದ್ದು, ಶ್ರೀ ಲಕ್ಷ್ಮೀ ಗಣೇಶ ಪ್ರೊಡಕ್ಷನ್ ಮತ್ತು ದಿ ನ್ಯೂ ಇಂಡಿಯನ್ ಟೈಮ್ಸ್ ಹೆಮ್ಮೆಯಿಂದ ಅರ್ಪಿಸುತ್ತಿರುವ ಈ ವಿಶೇಷ ಪ್ರಾಜೆಕ್ಟ್‌ಗೆ ಚಿತ್ರರಂಗದ ದೈತ್ಯ ಪ್ರತಿಭೆಗಳು ಕೈಜೋಡಿಸಿರುವುದು ವಿಶೇಷ.

• ತಾರಾ ಮೆರುಗು – ದ್ವಿಭಾಷಾ ಸಂಭ್ರಮ

ಈ ಆಲ್ಬಂ ಕೇವಲ ಒಂದು ಭಕ್ತಿಗೀತೆಯಾಗಿ ಉಳಿಯದೆ, ದಕ್ಷಿಣ ಭಾರತದ ಖ್ಯಾತ ನಟರ ಸಮಾಗಮಕ್ಕೆ ಸಾಕ್ಷಿಯಾಗುತ್ತಿದೆ. ಇದರಲ್ಲಿ ಸೂಪರ್ ಸ್ಟಾರ್ ರಜನಿಕಾಂತ್, ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್, ನವರಸ ನಾಯಕ ಜಗ್ಗೇಶ್, ನೆನಪಿರಲಿ ಪ್ರೇಮ್ ಸೇರಿದಂತೆ ಚಿತ್ರರಂಗದ 25ಕ್ಕೂ ಹೆಚ್ಚು ಜನಪ್ರಿಯ ತಾರೆಯರು ಕಾಣಿಸಿಕೊಳ್ಳುತ್ತಿದ್ದಾರೆ. ವಿಶೇಷವೆಂದರೆ, ಈ ಆಲ್ಬಂ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ನಿರ್ಮಾಣವಾಗುತ್ತಿದ್ದು, ಜಾಗತಿಕ ಮಟ್ಟದ ಭಕ್ತರನ್ನು ತಲುಪುವ ಗುರಿ ಹೊಂದಿದೆ.

• ವಿಶಿಷ್ಟ ಸಂಕಲ್ಪದ ಆಲ್ಬಂ

ಮಂತ್ರಾಲಯದ ಗುರು ಸಾರ್ವಭೌಮರ ಕುರಿತು ಈವರೆಗೆ ಯಾರು ಹೇಳದ ಮತ್ತು ತೋರಿಸದ ರಾಯರ ಬದುಕಿನ ಕೆಲವು ಅಪರೂಪದ ವಿಷಯಗಳನ್ನು ಈ ಆಲ್ಬಂನಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.ಮಂತ್ರಾಲಯದ ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಈ ಪ್ರಾಜೆಕ್ಟ್ ಅತ್ಯಂತ ಅದ್ದೂರಿಯಾಗಿ ಮೂಡಿಬರುತ್ತಿದೆ.ಈ ಬಹುನಿರೀಕ್ಷಿತ ಆಲ್ಬಂನ ಮೊದಲ ಹಂತದ ಚಿತ್ರೀಕರಣವು ಫೆಬ್ರವರಿ 2 ರಿಂದ ಫೆಬ್ರವರಿ 7ರವರೆಗೆ ಅತ್ಯಂತ ಯಶಸ್ವಿಯಾಗಿ ನಡೆದಿದೆ. ತಾಂತ್ರಿಕವಾಗಿ ಅತ್ಯಂತ ಶ್ರೀಮಂತವಾಗಿ ಮೂಡಿಬರುತ್ತಿರುವ ಈ ಆಲ್ಬಂನ ಎರಡನೇ ಹಂತದ ಚಿತ್ರೀಕರಣವು ಫೆಬ್ರವರಿ 24ರಂದು ಪ್ರಾರಂಭವಾಗಲಿದೆ ಎಂದು ತಂಡ ಮಾಹಿತಿ ನೀಡಿದೆ.

## ಇಂದಿನಿಂದ ತೋರಣಾ ಗ್ರಾಮದಲ್ಲಿ ಟೆನಿಸ್ ಕ್ರಿಕೆಟ್ ಪಂದ್ಯಾವಳಿ

• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:

ತಾಲೂಕಿನ ತೋರಣಾ ಗ್ರಾಮದಲ್ಲಿ ದಿವಂಗತ ಅನಿಲ ಸಾವಳೆ (ಕ್ರಿಕೆಟ್ ಪ್ರೇಮಿಗಳು ಹಾಗೂ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು) ಅವರ ಪ್ರಥಮ ಪುಣ್ಯಸ್ಮರಣೆಯ ಅಂಗವಾಗಿ ಬೃಹತ್ ಟೆನಿಸ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಸದರಿ ಕಾರ್ಯಕ್ರಮವು ತೋರಣಾ ಗ್ರಾಮದ ಕ್ರಿಕೆಟ್ ಅಭಿಮಾನಿಗಳ ವತಿಯಿಂದ ಆಯೋಜಿಸಲ್ಪಟ್ಟಿರುವ ಈ ಕ್ರೀಡಾಕೂಟವು ಫೆಬ್ರವರಿ 9, 2026 ರಿಂದ ಫೆಬ್ರವರಿ 22, 2026 ರವರೆಗೆ ನಡೆಯಲಿದೆ. ಪ್ರತಿದಿನ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:00 ರವರೆಗೆ ಪಂದ್ಯಗಳು ನಡೆಯಲಿವೆ.ಕ್ರೀಡಾಕೂಟದ ಉದ್ಘಾಟನೆಯನ್ನು ಕಮಲನಗರದ ವೃತ್ತ ನಿರೀಕ್ಷಕರಾದ (ಅಕಖ) ಶ್ರೀ ಶ್ರೀಕಾಂತ ಅಲ್ಲಾಪುರೆ ಅವರು ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತೋರಣಾ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಸುನಿಲ ಶಿಗರೆ ಅವರು ವಹಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಕಮಲನಗರ ಪೊಲೀಸ್ ಉಪನಿರೀಕ್ಷಕಿ (ಕಖಖ) ಶ್ರೀಮತಿ ಆಶಾ ರಾಠೋಡ್, ಕಮಲನಗರ ಮಾಜಿ ಗ್ರಾ.ಪಂ ಅಧ್ಯಕ್ಷರಾದ ಶಿವಕುಮಾರ ಜುಲ್ಪೆ, ಪಿ.ಡಿ.ಓ ಮಲ್ಲೇಶ ಸರ್ ಸೇರಿದಂತೆ ಸ್ಥಳೀಯ ಗಣ್ಯರು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ.ವಿಜೇತ ತಂಡಗಳಿಗೆ

ಈ ಕೆಳಗಿನಂತೆ ಭರ್ಜರಿ ಬಹುಮಾನಗಳನ್ನು ಘೋಷಿಸಲಾಗಿದೆ:

- ಪ್ರಥಮ ಬಹುಮಾನ: – 51,000/–
- ದ್ವಿತೀಯ ಬಹುಮಾನ:– 21,000/–
- ತೃತೀಯ ಬಹುಮಾನ:– 11,000/–




'ಜಾಗೃತಿ ಅಭಿಯಾನ:

ಕೇವಲ ಕ್ರೀಡೆಯಷ್ಟೇ ಅಲ್ಲದೆ, ಯುವಜನತೆಯಲ್ಲಿ ಹೆಚ್ಚುತ್ತಿರುವ ವ್ಯಸನಗಳನ್ನು ತಡೆಗಟ್ಟಲು 'ಮಾದಕ ವಸ್ತುಗಳ ಜಾಗೃತಿ' ಕಾರ್ಯಕ್ರಮವನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮತ್ತು ತಂಡಗಳ ನೋಂದಣಿಗಾಗಿ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಲು ಆಯೋಜಕರು ಕೋರಿದ್ದಾರೆ 9986084062,9886565904

ಕ್ರೀಡಾ ಅಭಿಮಾನಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕೆಂದು ತೋರಣಾ ಗ್ರಾಮದ ಸಮಸ್ತ ಕ್ರಿಕೆಟ್ ಪ್ರೇಮಿಗಳು ವಿನಂತಿಸಿದ್ದಾರೆ.

## ವಿದ್ಯಾರ್ಥಿಗಳಿಗೆ ಶರಣಾನಂದ ಗುರೂಜಿಯಿಂದ ಜ್ಞಾನೋಪದೇಶ

ಕೆಂಭಾವಿ:ಜ್ಞಾನವು ಅಮೂಲ್ಯವಾದುದು, ಅದು ಪ್ರತಿಯೊಂದು ಜೀವಿ–ನಿರ್ಜಿವಿ ಸೇರಿದಂತೆ ಎಲ್ಲಾ ಕಡೆಯೂ ದೊರೆಯುತ್ತದೆ, ಮಕ್ಕಳು ಅದನ್ನು ಅರಿತು ಆನಂದಿಂದ ಆಸ್ವಾದಿಸಬೇಕು ಎಂದು ಆರ್ಟ್ ಆಫ್ ಲಿವಿಂಗ್ ನ, ಅಂತರರಾಷ್ಟ್ರೀಯ ಯೋಗ ಧ್ಯಾನ ಗುರೂಜಿ ಶರಣಾನಂದ ಗುರೂಜಿ ತಿಳಿಸಿದರು.



ಪಟ್ಟಣದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಶಾಲೆಗೆ ಸಂಸ್ಥೆಯ ಆಹ್ವಾನ ಮೇರೆಗೆ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಬರಿ ಅಂಕ ಗಳಿಕೆಗೆ ಸೀಮಿತರಾಗದೆ, ಬದುಕು ಕಟ್ಟಿಕೊಳ್ಳಲು ಸ್ಥಿತಪ್ರಜ್ಞೆಯಿಂದ ಸದ್ಗುಣ ಸಂಪನ್ನರಾಗಿ, ಜೀವನದುದ್ದಕ್ಕೂ ಸದ್ಬುದ್ಧಿ, ಸದ್ವಿಚಾರ, ಸಂಸ್ಕಾರ, ಸಂಸ್ಕೃತಿ ಮೈಗೂಡಿಸಿಕೊಂಡರೆ ಸಮಾಜದಲ್ಲಿನ ಮಾದರಿ ಜೀವನ ತಮ್ಮದಾಗುತ್ತದೆ ಎಂದ ಅವರು ಅಕ್ಷರವಂತರಾಗಿ ಜತೆಗೆ ಸಾಕ್ಷರರಾಗಿ ಎಂದು ಜ್ಞಾನೋಪದೇಶ ನೀಡಿ ಮಕ್ಕಳಿಗೆ ಹಾರೈಸಿದರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕ ಮೋಹನರಡ್ಡಿ ಡಿಗ್ಗಾವಿಯವರು ಶರಣಾನಂದ ಗುರೂಜಿ ಸೇರಿದಂತೆ ಯಾದಗಿರಿ ಜಿಲ್ಲಾ ಸಂಚಾಲಕರು ಹಣಮಂತರಡ್ಡಿ, ಸುರಪುರ ತಾಲೂಕು ಸಂಚಾಲಕ ಬಸವರಾಜ ಬೂದಿಹಾಳ,ಹಾಗೂ ಯೋಗಾನಂದ ಇವರನ್ನು ಶಿಕ್ಷಣ ಸಂಸ್ಥೆಯ ವತಿಯಿಂದ ಗೌರವಿಸಿ ಸನ್ಮಾನಿಸಿದರು. ಶಿಕ್ಷಕರಾದ ಈರಣ್ಣ ಚರಂತಿಮಠ,ಗುತ್ತನಗೌಡ ಬಿರಾದಾರ, ವಾಸಿಂ ಪಟೇಲ್,ಸದ್ದಾಂ ಬಾಣಾಳ, ಅಜಯರಡ್ಡಿ ಯಾಳಗಿ, ಶಿಕ್ಷಕಿ ಭಾರತಿ, ದೇವರಾಜ ಬಿರಾದಾರ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

## ಹಿಂದುಗಳು ಒಗ್ಗಟ್ಟಾಗಿ ಭವ್ಯಭಾರತ ನಿರ್ಮಾಣ ಮಾಡಿ

• ಮಲ್ಲಮ್ಮ ನುಡಿ ವಾರ್ತೆ,ಚಿತ್ತಾಪುರ:

ನಾವು ಹಿಂದುಗಳು ಭಾರತದಲ್ಲಿ ಸದೃಢವಾಗಿದ್ದೇವೆ. ಆದರೆ ಜಾತಿ ಮತ್ತು ಪಂಥ ಬಿಟ್ಟು ಪ್ರತಿಯೊಬ್ಬರು ನಾವು ಹಿಂದುಗಳು ಎನ್ನುವ ಮೂಲಕ ಒಗ್ಗಟ್ಟಾಗಿ ಶ್ರಮಿಸಿದಾಗ ಮಾತ್ರ ಭವ್ಯ ಭಾರತ ನಿರ್ಮಾಣವಾಗುತ್ತದೆ ಎಂದು ಮುಖ್ಯವಕ್ತಾರ ಪ್ರಜ್ಞಾ ಪ್ರವಾಹ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನಜೀ ಹೇಳಿದರು.

ಪಟ್ಟಣದ ವರುಣ ನಗರದಲ್ಲಿರುವ

ಶರಣಬಸವೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಹಿಂದು ಸಮ್ಮೇಳನ ಹಾಗೂ ಸಮಾವೇಶದಲ್ಲಿ ಭಾಗವಹಿಸಿ ಮಾತ ನಾಡಿದ ಅವರು , ಹಿಂದುಗಳಲ್ಲಿ ಸ್ವಾಭಿಮಾನ ಬೆಳಸಬೇಕೆಂದರು.

ಜಗತ್ತನ್ನೇ ಗೆಲ್ಲುವ ಶಕ್ತಿ ಹಿಂದುಗಳಿದೆ. ನಮ್ಮಲ್ಲಿನ ಪರಿಸರ, ಸಂಸ್ಕೃತಿ ಉಳಿಸಿಕೊಳ್ಳಬೇಕು. ಸ್ವಚ್ಛತೆ, ಹಸಿರು ಹೆಚ್ಚಿಸಿಕೊಳ್ಳಬೇಕು. ಮತಾಂತರ ತಡೆಯಬೇಕು. ನಮ್ಮ ಭಾರತ ದೇಶ ಮಾತೃಪ್ರಧಾನ ಸಮಾಜವಾಗಿದೆ. ತಾಯಿ ಹೆಚ್ಚು ಶ್ರೇಷ್ಠವಾಗಿರುವುದರಿಂದ ನಾವೆಲ್ಲರೂ ಭಾರತಮಾತಾಕೀ ಜೈ ಘೋಷಣೆ ಮಾಡುತ್ತೇವೆ. ದುಷ್ಟರನ್ನು ಸಂಹಾರ ಮಾಡಲು ದೇಶದಲ್ಲಿ ದುರ್ಗೆಯರು ಅವತಾರವನ್ನು ತಾಳುತ್ತಿದ್ದಾರೆ. ಶಿಕ್ಷಣ ಪಡೆದು ಜ್ಞಾನ ಹೆಚ್ಚಿಸಿಕೊಳ್ಳಬೇಕು:ಎಂದು ಅವರು ಹೇಳಿದರು.

ಬೆಳಗುಂಪಾ ಶ್ರೀ ಅಬಿನವ ಪರ್ವತೇಶ್ವರ ಶಿವಾಚಾರ್ಯರು ಸಾನ್ನಿಧ್ಯವಹಿಸಿ ಮಾತನಾಡಿ, ಹಿಂದು ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಯುವಕರು ದುಶ್ಚಟಗಳು ಬಿಟ್ಟು ದೇಶದ ಅಭಿಮಾನ ಹೆಚ್ಚಿಸಿಕೊಳ್ಳಬೇಕು. ಪ್ರತಿಯೊಬ್ಬರು ದೇಶ ಹಾಗೂ ಹಿಂದು ಧರ್ಮದ ಬಗ್ಗೆ ಪ್ರೀತಿ ಮಾಡಬೇಕು. ನಮ್ಮ ದೇಶದ ಮಂತ್ರ ಪಠಣಗಳು ವಿದೇಶಿಗರು ಆಳವಡಿಸಕೊಂಡು ಪ್ರಯೋಜನ ಪಡೆಯುತ್ತಿದ್ದಾ–ರೆ. ನಮ್ಮವರು ಕ್ಷಮಾಡುತ್ತಿದ್ದಾರೆ. ಗೋಹತ್ಯೆ ಮಾಡುವುದನ್ನು ಖಂಡಿಸಬೇಕೆಂದರು. ದಿಗ್ಗಾಂವ ಶ್ರೀ ಸಿದ್ಧವೀರ ಶಿವಾಚಾರ್ಯರು ಸಾನ್ನಿಧ್ಯವಹಿಸಿ ಮಾತನಾಡಿದರು.

ಸಮಿತಿ ಗೌರವಾಧ್ಯಕ್ಷ ತುಕಾರಾಮ ನಾಯಕ ರಾಠೋಡ, ಕಾರ್ಯಾಧ್ಯಕ್ಷ ಸತ್ಯನಾರಾಯಣ ಯಾದವ್,ಪ್ರಮುಖರಾದ ಮಾರುತಿ ಮುಗುಳಕರ್, ಸಾಬಣ್ಣ ಮಡಿವಾಳ್, ಬಸವರಾಜ ಹೋಗಾರ, ಗಿರೀಶ್ ಭಜಂತ್ರಿ, ನಟರಾಜ್ ಶಿಲ್ಪಿ, ಅಶೋಕ ಹಡಪದ, ಮಹಾದೇವಪ್ಪ ಉಪ್ಪಾರ, ನಾಗರಾಜ ಗುತ್ತೇದಾರ, ದೇವಾನಂದ್ ತ್ರಿಮಲ್, ಯಮನಪ್ಪ ಬೋಸಗಾ, ಬಸವರಾಜ ಪೂಜಾರಿ, ಅನಿಲ ಹೆಂದೆ, ಪ್ರಮುಖರಾದ ಆಶೋಕ ಬಗಲಿ,

ಬಸವರಾಜ ಬೆಣ್ಣೂರಕರ್, ರವೀಂದ್ರ ಸಜ್ಜನಶೆಟ್ಟಿ, ಲಿಂಗರಾಜ ಬಿರಾದಾರ, ಶ್ರೀನಿವಾಸ ಹಳ್ಳಿ, ಕೋಟೇಶ್ವರ ರೇಷ್ಮೆ, ಆಯ್ಯ ಪ್ಪ ರಾಮತೀರ್ಥ, ಮಲ್ಲಣ್ಣ ಮಾಸ್ಟರ್ ಮೂಡಬಳ, ಶಿವಶರಣಪ್ಪ ರೇಷ್ಮೆ, ಪ್ರಹ್ಲಾದ ವಿಶ್ವಕರ್ಮ, ಮಲ್ಲಿಕಾರ್ಜುನ ಪಲ್ಲೇದ, ರುದ್ರಪ್ಪ ತಾವರೆ, ಶಿವರಾಮ ಚವ್ಹಾಣ, ನಿರ್ಮಲಾ ಭಂಗಿ, ಗೋದಾವರಿ ಹಿರೇಮಠ, ಶಶಿಕಲಾ ಸಾಸನಾಳ, ಅಕ್ಕಮಹಾದೇವಿ ದೇಸಾಯಿ, ಸುವರ್ಣ ಶಿಲ್ಪಿ ಸೇರಿದಂತೆ ಇತರರಿದ್ದರು.

ಸಮಿತಿಯ ಅಧ್ಯಕ್ಷ ಉಮೇಶಬಾಬು ಸಾಸಬಾಳ್ ಪ್ರಾಸ್ತಾವಿಕ ಮಾತನಾಡಿದರು. ಮಹಾದೇವ ಅಗಂಡಿ ಸ್ವಾಗತಿಸಿದರು. ಮಹಿಪಾಲ ಮೂಲಿಮನಿ ವಂದಿಸಿದರು.



## ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಭಾಲ್ಕಿ ಶ್ರೀಗಳ ಗೌರವ

### ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಆಹ್ವಾನ



ಮಲ್ಲಮ್ಮ ನುಡಿ ವಾರ್ತೆಭಾಲ್ಕಿ:

ಪಟ್ಟಣದಲ್ಲಿ 2026ರ ಏಪ್ರಿಲ್‌ನಲ್ಲಿ ನಡೆಯಲಿರುವ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭಕ್ಕೆ ಕೇಂದ್ರದ ಕೇಂದ್ರದ ಉಕ್ಕು ಮತ್ತು ಭಾರಿ ಕೈಗಾರಿಕಾ ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಆಹ್ವಾನಿಸಲಾಗಿದೆ.

ಬೆಂಗಳೂರಿನಲ್ಲಿ ಕೇಂದ್ರದ ಸಚಿವ ಕುಮಾರಸ್ವಾಮಿ ಅವರನ್ನು ಶನಿವಾರ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಭೇಟಿಯಾಗಿ ಬಸವಣ್ಣನವರ ಭಾವಚಿತ್ರ ನೀಡಿ ಗೌರವಿಸಿದರು.

ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಕ್ರಾಂತಿಗೈದಿದ್ದಾರೆ.

ಅಂತಹ ಪೂಜ್ಯರು 75ರ ಹೊಸ್ತಿಲಲ್ಲಿ ಇದ್ದು ಅವರ ಅಮೃತ ಮಹೋತ್ಸವ ಅರ್ಥಪೂರ್ಣವಾಗಿ ಆಚರಿಸಲು ಭಕ್ತ ವಲಯ ನಿರ್ಧರಿಸಿದೆ.ತಾವುಗಳು ಕೂಡ ಮೂರು ದಿವಸ ನಡೆಯುವ ಈ ಐತಿಹಾಸಿಕ ಸಮಾರಂಭಕ್ಕೆ ಸಾಕ್ಷಿಯಾಗಬೇಕು ಎಂದು ಸಚಿವ ಕುಮಾರ ಸ್ವಾಮಿ ಅವರನ್ನು ಪೂಜ್ಯರು ಕೋರಿದರು.ಈ ಸಂದರ್ಭದಲ್ಲಿ ಮಾಜಿ ಸಚಿವ ಬಂಡೆಪ್ಪ ಖಾಶೆಂಪುರೆ, ಬೀದರ್ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಸೋಮನಾಥ ಪಾಟೀಲ್ ಸೋಲಪುರ್ ಜತೆಗಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)